## ಅಧ್ಯಾಯ – ೯

# ಆಡಳಿತ ಮತ್ತು ರಾಜಸ್ವ

**ಪ್ರ**ಸ್ತುತ ಆಡಳಿತ ವ್ಯವಸ್ಥೆಯನ್ನು ಪರಿಚಯ ಮಾಡಿಕೊಳ್ಳುವಾಗ ಐತಿಹಾಸಿಕ ಕಾಲದಲ್ಲಿದ್ದ ಆಡಳಿತ ಕ್ರಮಗಳ ಪರಿಜ್ಞಾನ ಅನೇಕ ರೀತಿಯಲ್ಲಿ ಸಹಾಯಕವಾಗುತ್ತದೆ. ಹಿಂದಿನ ನಮ್ಮ ಅನೇಕ ಆಡಳಿತ ಸಂಸ್ಥೆಗಳು ಪ್ರಾಚೀನ ಕಾಲದ ಅನೇಕ ಸಾಂಪ್ರದಾಯಿಕ ಪದ್ಧತಿಗಳ ಮುಂದುವರಿಕೆ ಎನ್ನಬಹುದು. ಒಂದು ಜಿಲ್ಲೆಯ ಅಥವಾ ಪ್ರಾಂತ್ಯದ ಪರಿಧಿಯೊಳಗೆ ಕೈಗೊಳ್ಳುವ ಆಡಳಿತಕ್ಕೆ ಸಾರ್ವತ್ರಿಕ ಆಡಳಿತವೆಂದು ಪರಿಗಣಿಸಲ್ಪಡುತ್ತದೆ. ರಾಜ್ಯಾಡಳಿತದಲ್ಲಿ ‘ಜಿಲ್ಲೆಯು’ ಒಂದು ಪ್ರತ್ಯೇಕ ಹಾಗೂ ಪ್ರಮುಖ ‘ಆಡಳಿತ ಘಟಕ’ ವೆಂದು ಪರಿಗಣಿಸಲ್ಪಟ್ಟಿದೆ. ಇದನ್ನು ವಿವಿಧ ರಾಜವಂಶಗಳು ಪ್ರಾಚೀನ ಹಾಗೂ ಮಧ್ಯಕಾಲಗಳಲ್ಲಿ ‘ನಾಡು’, ‘ವಿಷಯ’, ‘ಸೀಮೆ’, ‘ವೇಂಠೆ’ ಮುಂತಾದ ಹೆಸರುಗಳಿಂದ ಕರೆದಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ‘ನಾಡು’ ಮತ್ತು ‘ವಿಷಯ’ ಎಂಬ ಪದಗಳು ಪದೇ ಪದೇ ಉಪಯೋಗವಾಗಿದ್ದು, ಪ್ರಮುಖ ಆಡಳಿತ ವಿಭಾಗಗಳೆಂದು ಪರಿಗಣಿಸಲಾಗಿದೆ. ಶಾಸನಗಳಲ್ಲಿ ಕಂಡುಬರುವ ವಿವರಗಳಿಂದ ಮಧ್ಯಯುಗದಲ್ಲಿ ವಿಶೇಷವಾಗಿ, ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ಆಡಳಿತವು ಸುವ್ಯವಸ್ಥೆಯಿಂದ ಕೂಡಿದ್ದು ಅನೇಕ ಪ್ರಾಚೀನ ಪದ್ಧತಿಗಳ ಆಧಾರದ ಮೇಲೆ ರೂಪುಗೊಂಡಿತೆಂಬುದು ಸ್ಪಷ್ಟವಾಗಿದೆ. ನಾಡುಗಳ ಆಡಳಿತಗಾರರಾಗಿ ನೇಮಕಗೊಂಡಿದ್ದವರನ್ನು ಅಧಿಕಾರಿಯೆಂದೂ ಮತ್ತು ನಗರದ ಆಡಳಿತಗಾರರನ್ನು ನಾಯಕರೆಂದು ಕರೆಯಲಾಗುತ್ತಿತ್ತು. ಅಲ್ಲದೆ, ಆಡಳಿತದ ಬೇರೆ ಬೇರೆ ವಿಷಯಗಳನ್ನು ನೋಡಿಕೊಳ್ಳಲು ಮಧ್ಯಸ್ಥ, ಅಟ್ಟವಣೆ, ಅಪ್ಪಣೆಕಾರ, ಸ್ಥಳ–ಅಧಿಕಾರಿ ನಾಡ, ಸೇನಬೋವ, ಗ್ರಾಮದ ಅಧಿಕಾರಿ, ಪೆರ್ಗಡೆ (ಹೆಗ್ಗಡೆ), ಒಡೆಯ ಊರಾಳ್ವ, ಗ್ರಾಮಿಣಿ, ಉಗ್ರಾಣಿ ಎಂಬ ಹೆಸರಿನ ಇತರ ಅನೇಕ ಅಧಿಕಾರಿಗಳಿದ್ದರು. ಇತ್ತೀಚಿನವರೆಗೂ ಈ ಸಾಂಪ್ರದಾಯಿಕ ಅಧಿಕಾರಿಗಳು ಇದ್ದು, ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟೀಷರ ಆಡಳಿತಕ್ಕೆ ದಕ್ಷಿಣಕನ್ನಡ ಜಿಲ್ಲೆಯು ಒಳಪಟ್ಟಾಗ ಹಲವು ಆಧುನಿಕ ಪದ್ಧತಿಗಳು ಕ್ರಮೇಣ ಜಾರಿಗೆ ಬಂದವು. ಆದರೆ, ಆಡಳಿತಾತ್ಮಕ ಉದ್ದೇಶಗಳಿಗಾಗಿ ಪ್ರಾಂತ್ಯದ ವಿಂಗಡಣೆಯು ಸಂಘಟಿತ ಆಡಳಿತದಷ್ಟೆ ಹಳೆಯದಾಗಿದೆ ಎಂಬುದು ವಾಸ್ತವ ಸಂಗತಿಯಾಗಿದೆ. ನಮ್ಮ ಆಡಳಿತ ಕ್ರಮ ಪಾಶ್ಚಾತ್ಯೀಕರಣವನ್ನು ಹೊಂದಿದಾಗ್ಯೂ ಈ ಪುರಾತನ ಆಡಳಿತ ಸಂಸ್ಥೆಗಳು ಗ್ರಾಮಾಡಳಿತದ ಮೇಲೆ ತಮ್ಮ ಹಿಡಿತವನ್ನು ಬಹು ಸಮರ್ಪಕ ರೀತಿಯಲ್ಲಿ ಸಾಧಿಸಿಕೊಂಡು ಬಂದಿವೆ. ಇಂದು ಬಳಕೆಯಲ್ಲಿರುವ ಅನೇಕ ಆಡಳಿತ ಪದಗಳು ಮತ್ತು ತೆರಿಗೆಗಳು ಪ್ರಾಚೀನ ಪದ್ಧತಿಗಳ ಮುಂದುವರಿಕೆಯಾಗಿವೆ.

ರಾಜ್ಯ ಪುನಾರಚನೆಗೆ ಮೊದಲು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಆಗಿನ ಮದರಾಸು ರಾಜ್ಯದ ಭಾಗವಾಗಿದ್ದು, ಕುಂದಾಪುರ, ಉಡುಪಿ, ಕಾರ್ಕಳ, ಬೆಳ್ತಂಗಡಿ, ಮಂಗಳೂರು, ಪುತ್ತೂರು, ಬಂಟ್ವಾಳ ಮತ್ತು ಕಾಸರಗೋಡು ಈ ಎಂಟು ತಾಲೂಕುಗಳನ್ನು ಒಳಗೊಂಡಿತ್ತು. ಆದರೆ, ೧೯೫೬ರ ನವೆಂಬರ್ ೧ ರಂದು ರಾಜ್ಯ ಪುನಾರಚನೆಗೊಂಡ ಪರಿಣಾಮವಾಗಿ, ಕಾಸರಗೋಡನ್ನು ಕೇರಳರಾಜ್ಯಕ್ಕೆ ವರ್ಗಾಯಿಸಲಾಯಿತು ಮತ್ತು ಜಿಲ್ಲೆಯ ಉಳಿದ ಏಳು ತಾಲೂಕುಗಳು ಮೈಸೂರು ರಾಜ್ಯದ ಭಾಗವಾಯಿತು. ೧೯೬೬ರಲ್ಲಿ ಸುಳ್ಯ ಹೊಸ ತಾಲೂಕಾಗಿ ರಚನೆಗೊಂಡಿದ್ದರಿಂದ ಹಿಂದಿನಂತೆಯೇ ಜಿಲ್ಲೆಯು ಎಂಟು ತಾಲೂಕುಗಳನ್ನು ಒಳಗೊಂಡಿತು. ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲಬರ್ಗಾ ಎಂದು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಭಜಿಸಲಾಯಿತು ಮತ್ತು ಪ್ರತಿಯೊಂದು ವಿಭಾಗವನ್ನು ವಿಭಾಗೀಯ ಅಧಿಕಾರಿಗಳಡಿ ತರಲಾಯಿತು (ಈಗ ಈ ಹುದ್ದೆಯನ್ನು ರದ್ದುಗೊಳಿಸಲಾಗಿದೆ). ದಿನಾಂಕ : ... ೨೦೦೫ರಿಂದ ನಾಲ್ಕು ಪ್ರಾಂತೀಯ (ಆಯುಕ್ತರು)ಗಳ ಹುದ್ದೆಗಳನ್ನು ಸೃಜಿಸಲಾಗಿದ್ದು ಆಯಾ ಪ್ರಾಂತ್ಯದ ಪ್ರಗತಿ ಹಾಗೂ ಅಭಿವೃದ್ಧಿಗೆ ಇವರುಗಳು ಬದ್ಧರಾಗಿರುತ್ತಾರೆ. ದಕ್ಷಿಣಕನ್ನಡ ಹಾಗೂ ದಿನಾಂಕ ೨೫ನೇ ಆಗಸ್ಟ್ ೧೯೯೭ ರಿಂದ ಅಸ್ತಿತ್ವಕ್ಕೆ ಬಂದ ಉಡುಪಿ ಜಿಲ್ಲೆಗಳು ಮೈಸೂರು ಪ್ರಾಂತೀಯ ಆಯುಕ್ತರ ಹತೋಟಿಗೆ ಒಳಪಟ್ಟಿರುತ್ತದೆ. ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳೊಂದಿಗೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಮೈಸೂರು ಆಯುಕ್ತರ ಹತೋಟಿಗೆ ಒಳಪಡಿಸಲಾಯಿತು.

## ಸಾರ್ವತ್ರಿಕ ಆಡಳಿತ

ಜಿಲ್ಲೆಯ ತಾಲೂಕಿನ ಕಂದಾಯ ಅಧಿಕಾರಿ ವರ್ಗ ಕೆಳಸ್ತರದಲ್ಲಿ ಉಗ್ರಾಣಿಯಿಂದ ಆರಂಭವಾಗಿ ತಳಯಾರಿ, ಶ್ಯಾನುಭೋಗ, ಪಟೇಲ, ರೆವಿನ್ಯೂ ಇನ್ಸ್‌ಪೆಕ್ಟರ್ (ಮಣೆಗಾರ) ಮತ್ತು ತಹಶೀಲ್ದಾರರನ್ನೊಳಗೊಂಡಿತ್ತು. ಸಹಾಯಕ ಆಯುಕ್ತ ಮತ್ತು ಉಪ ಆಯುಕ್ತರುಗಳು ಜಿಲ್ಲಾ ಮಟ್ಟದ ಉನ್ನತ ಕಂದಾಯ ಅಧಿಕಾರಿಗಳಾಗಿದ್ದರು. ೧೯೫೮ರ ಒಂದು ವರದಿಯ ಪ್ರಕಾರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೮೫ ಪಟೇಲರು, ೨೯೪ ಶ್ಯಾನುಭೋಗರು, ೭೭೦ ತಳಾರಿಗಳು ಮತ್ತು ೨೯೫ ಉಗ್ರಾಣಿಗಳಿದ್ದರೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಈ ನಾಲ್ಕು ಹುದ್ದೆಗಳು ಅನುವಂಶೀಯವಾಗಿದ್ದುವು. ಕಂದಾಯ ವಸೂಲಾತಿಯಷ್ಟೇ ಅಲ್ಲದೆ, ಗ್ರಾಮದ ಶಾಂತಿಯನ್ನು ಕಾಪಾಡುವ ಪೂರ್ಣ ಜವಾಬ್ದಾರಿ ಪಟೇಲನದಾಗಿತ್ತು. ಕಂದಾಯವನ್ನು ಸಲ್ಲಿಸುವಂತೆ ಪ್ರತೀ ಮನೆಗೂ ತಿಳಿಸಿ ಬರುವುದು, ಕಂದಾಯ ಸಲ್ಲಿಕೆಯ ಬಳಿಕ ರಶೀದಿಯನ್ನು ತಲುಪಿಸುವುದು, ಜಮಾಬಂದಿಯ ವಿಷಯವನ್ನು ತಿಳಿಸುವುದೇ ಮುಂತಾದ ಕೆಲಸಗಳನ್ನು ಪಟೇಲರ ಆಜ್ಞೆಯ ಮೇರೆಗೆ ಉಗ್ರಾಣಿಯು ನಿರ್ವಹಿಸುತ್ತಿದ್ದನು. ಭೂಮಿಯ ವಿವರಗಳು ಮತ್ತು ತೀರ್ವೆಯ ಕುರಿತು ಶ್ಯಾನುಭೋಗರು **'ಕಡತ'** ಎಂದು ಕರೆಯಲಾಗುತ್ತಿದ್ದ ಕಪ್ಪು ಪುಸ್ತಕದಲ್ಲಿ ಬರೆದಿಡುತ್ತಿದ್ದರು. ಸಂಕಷ್ಟದ ಸಂದರ್ಭದಲ್ಲಿ ತೀರ್ವೆಯನ್ನು ಮನ್ನಾ ಮಾಡಲಾಗುತ್ತಿತ್ತು. ಉದಾಹರಣೆಗೆ ೧೯೨೧ರಲ್ಲಿ ಅತಿವೃಷ್ಟಿ ಉಂಟಾದಾಗ ಉಡುಪಿ ತಾಲೂಕಿನ ಪಾರಂಪಳ್ಳಿ, ಮಣೂರು, ತೆಕ್ಕಟ್ಟೆ ಮತ್ತು ಕುಂಭಾಶಿಯಲ್ಲಿ ತೀರ್ವೆಯನ್ನು ಮನ್ನಾ ಮಾಡಲಾಗಿತ್ತು. ಕಂದಾಯವನ್ನು ಕಟ್ಟುನಿಟ್ಟಾಗಿ ವಸೂಲು ಮಾಡದಿದ್ದರೆ ಪಟೇಲರನ್ನು ಅಮಾನತುಗೊಳಿಸುತ್ತಿದ್ದರು. ಹೊಸ ಮೈಸೂರು ರಾಜ್ಯದ ಉದಯದ ಬಳಿಕ ಸರಕಾರವು ೧೯೬೧ರ ಮೈಸೂರು ಗ್ರಾಮಾಧಿಕಾರಿಗಳ ಕಾಯ್ದೆ (Mysore Village Officers Act) ಯನ್ನು ೧೯೬೩ರ ಫೆಬ್ರವರಿ ೧ ರಿಂದ ಅನುಷ್ಠಾನಿಸಿದಾಗ ಈ ಆನುವಂಶೀಯ ಹುದ್ದೆಗಳು ರದ್ದುಗೊಂಡವು. ಶ್ಯಾನುಭೋಗರ ಬದಲಿಗೆ ಪೂರ್ಣಕಾಲಿಕ ಸರಕಾರಿ ನೌಕರರನ್ನಾಗಿ ಗ್ರಾಮಲೆಕ್ಕಿಗರನ್ನು ನೇಮಿಸಿಕೊಳ್ಳುವ ನಿಯಮ ೧೯೬೮ರ ಮೇ ೧ರಿಂದ ಜಾರಿಗೆ ಬಂದಿತು.

ಏಕೀಕರಣ ಪೂರ್ವದಲ್ಲಿ ಹಲವಾರು ಆಡಳಿತ ಪುನರ್ ವ್ಯವಸ್ಥೆಯನ್ನು ಕೈಗೊಂಡಾಗ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ತಾಲೂಕುಗಳು ಮತ್ತು ಮೂರು ಕಂದಾಯ ಉಪವಿಭಾಗಗಳು ಇದ್ದವು. ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳನ್ನು ಸೇರಿಸಿ, ಕುಂದಾಪುರ ಉಪವಿಭಾಗವನ್ನು

ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳನ್ನು ಸೇರಿಸಿ ಪುತ್ತೂರು ಉಪವಿಭಾಗವನ್ನು ಮತ್ತು ಮಂಗಳೂರು ಮತ್ತು ಬಂಟ್ವಾಳ ತಾಲೂಕುಗಳನ್ನು ಸೇರಿಸಿ ಮಂಗಳೂರು ಉಪವಿಭಾಗವನ್ನಾಗಿ ಮಾಡಲಾಯಿತು. ಪ್ರತಿಯೊಂದು ಕಂದಾಯ ಉಪವಿಭಾಗವು ಸಹಾಯಕ ಆಯುಕ್ತರ ಅಧೀನಕ್ಕೆ ಒಳಪಟ್ಟಿತು. ಪ್ರತೀ ತಾಲೂಕನ್ನು ಕಂದಾಯ ವೃತ್ತ (Revenue Circle) ಅಥವಾ ಹೋಬಳಿಗಳನ್ನಾಗಿ ವಿಂಗಡಿಸಲಾಯಿತು. ಕುಂದಾಪುರ ತಾಲೂಕನ್ನು ಕುಂದಾಪುರ, ವಂಡ್ಸೆ ಮತ್ತು ಬೈಂದೂರು ಹೋಬಳಿಗಳನ್ನಾಗಿ ವಿಭಜಿಸಲಾಯಿತು. ಇದನ್ನು 'ಫಿರ್ಕಾ' ಎಂದೂ ಕರೆಯಲಾಗುತ್ತಿತ್ತು. ಏಕೀಕರಣಕ್ಕೆ ಮೊದಲು ಕಾಸರಗೋಡು ತಾಲೂಕು ದಕ್ಷಿಣಕನ್ನಡ ಜಿಲ್ಲೆಯ ಭಾಗವಾಗಿತ್ತು. ೧೯೫೬ರ ನಂತರ ಕೇರಳ ರಾಜ್ಯಕ್ಕೆ ಸೇರ್ಪಡೆ ಹೊಂದಿತು.

ಏಕೀಕರಣದ ತರುವಾಯ ಜಿಲ್ಲೆಯು ೧೯೭೩ರ ವೇಳೆಗೆ ಮೂರು ಉಪ ವಿಭಾಗಗಳನ್ನು, ಎಂಟು ತಾಲೂಕುಗಳನ್ನು, ಇಪ್ಪತ್ತಾರು ಫಿರ್ಕಾ ಅಥವಾ ಹೋಬಳಿಗಳನ್ನು ಮತ್ತು ೬೮೭ ಗ್ರಾಮಗಳನ್ನು ಒಳಗೊಂಡಿದ್ದಿತು. ಜಿಲ್ಲೆಯ ಆಡಳಿತವನ್ನು ಜಿಲ್ಲಾಧಿಕಾರಿಯು ನಿಯಂತ್ರಿಸುತ್ತಿದ್ದು ಅವರ ಅಧೀನದಲ್ಲಿ ವಿವಿಧ ಶ್ರೇಣಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿದ್ದರು. ಆಡಳಿತವನ್ನು ವಿಕೇಂದ್ರಿಕರಣಗೊಳಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಬೃಹತ್ ಗಾತ್ರದ ಜಿಲ್ಲೆಗಳನ್ನು ವಿಭಜಿಸುವ ನಿರ್ಧಾರವನ್ನು ಕೈಗೊಂಡ ಪರಿಣಾಮ ೧೯೭ನೇ ಆಗಸ್ಟ್ ೨೫ರ ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ.೪೨ ಎಲ್.ಆರ್.ಡಿ. ೮೭ರನ್ವಯ ಏಳು ನೂತನ ಜಿಲ್ಲೆಗಳನ್ನು ರಚಿಸಲಾಯಿತು ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಯನ್ನು ಪ್ರತ್ಯೇಕಗೊಳಿಸಿ ಹೊಸ ಜಿಲ್ಲೆಯನ್ನಾಗಿ ಸೃಜಿಸಲಾಯಿತು. ಹೊಸದಾಗಿ ರಚಿಸಲಾದ ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ಸೇರಿಸಲಾಯಿತು.

ಆಡಳಿತದ ಅನುಕೂಲಕ್ಕಾಗಿ ಇಂದಿನ ಜಿಲ್ಲಾ ಆಡಳಿತದ ವಿವಿಧ ಹಂತಗಳ ಆಡಳಿತಾತ್ಮಕ ಹುದ್ದೆಗಳನ್ನು ಸಂಬಂಧಿಸಿದ ವಿಷಯ ಹಾಗೂ ಶೀರ್ಷಿಕೆಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಇವುಗಳ ಪೈಕಿ ಸಾರ್ವಜನಿಕ ಸುರಕ್ಷೆ, ನಾಗರೀಕರ ರಕ್ಷಣೆ ಮತ್ತು ಅವರ ಎಲ್ಲಾ ಹಕ್ಕುಗಳಿಗೆ ಸಂಬಂಧಿಸಿದ್ದಾಗಿದೆ. ಇವುಗಳ ಪೈಕಿ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ, ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಡಳಿತವನ್ನು ಒಳಗೊಂಡಿದೆ. ಎರಡನೆಯ ವಿಭಾಗವು ಕಂದಾಯ ಮತ್ತು ಅಬಕಾರಿಗೆ ಸಂಬಂಧಪಟ್ಟ ವಿಚಾರಗಳನ್ನು ಒಳಗೊಂಡಿದ್ದು, ಅದು ತೆರಿಗೆ ನಿರ್ಧರಣೆ ಹಾಗೂ ವಸೂಲಿ, ಭೂ ಕಂದಾಯ, ನೀರಾವರಿ ಕರ, ಕೃಷಿ ವರಮಾನ ತೆರಿಗೆ, ಮಾರಾಟ ನೋಂದಣಿ ಶುಲ್ಕ, ಮೋಟಾರು ವಾಹನ ತೆರಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಆದಾಯ ತೆರಿಗೆ, ಅಬಕಾರಿ ಶುಲ್ಕ ಮುಂತಾದ ವಿವಿಧ ರೀತಿಯ ತೆರಿಗೆಗಳನ್ನು ಒಳಗೊಂಡಿರುತ್ತದೆ. ಸಾಗುವಳಿದಾರರಿಗೆ ನೀಡಿದ ಸಾಲಗಳ ವಸೂಲಿ, ಮದ್ಯ ಮತ್ತು ಔಷಧಗಳ ಮೇಲಿನ ಕಂದಾಯ ಹುಟ್ಟುವಳಿ, ಸರ್ಕಾರಿ ಖಜಾನೆಯ ನಿಯಂತ್ರಣ ಮತ್ತು ನಿರ್ವಹಣೆ, ಭೂ ಸ್ವಾಧೀನ, ಭೂ ದಾಖಲೆಗಳ ನಿರ್ವಹಣೆ ಹಿಡುವಳಿಗಳ ಕ್ರೋಢೀಕರಣ ಮತ್ತು ಭೂ ಸುಧಾರಣೆಗಳ ಜಾರಿಯನ್ನು ಈ ವಿಭಾಗದಲ್ಲಿ ಸೇರಿಸಲಾಗುತ್ತದೆ. ಮೂರನೆಯ ಗುಂಪು ಕೃಷಿ, ಪಶುಸಂಗೋಪನೆ, ನೀರಾವರಿ, ಕೈಗಾರಿಕೆಗಳು, ಸಾರಿಗೆ ಮತ್ತು ಸಂಪರ್ಕಗಳಿಗೆ ಸಂಬಂಧಪಟ್ಟಿದೆ. ಈ ಎಲ್ಲಾ ಆಧುನಿಕ ಪ್ರಜಾಸತ್ತೆಯ ಆಡಳಿತಾತ್ಮಕ ಪ್ರಕಾರ್ಯಗಳು ಆರ್ಥಿಕ ವಿಭಾಗಕ್ಕೆ ಸೇರಿವೆ.

ಮುಂದಿನ ಪ್ರಮುಖವಾದ ವಿಭಾಗವೆಂದರೆ, ಕಲ್ಯಾಣ ಮತ್ತು ಅಭಿವೃದ್ಧಿ ಪ್ರಕಾರ್ಯಗಳಿಗೆ ಸಂಬಂಧಪಟ್ಟದ್ದಾಗಿದೆ. ಅದರಲ್ಲಿ ಕೆಲವು ಆರ್ಥಿಕ ಸ್ವರೂಪದ್ದೂ ಆಗಿವೆ. ಸಮುದಾಯ ಅಭಿವೃದ್ಧಿ, ಸಹಕಾರ, ಶಿಕ್ಷಣ, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ, ಸಮಾಜ ಕಲ್ಯಾಣ, ಪಂಚಾಯತ್‌ರಾಜ್ ಮತ್ತು ಅದೇ ಪ್ರವರ್ಗಕ್ಕೆ ಬರುವಂಥವನ್ನು ಸಂಬಂಧಿಸಿದ ವಿಭಾಗಕ್ಕೆ ಸೇರಿಸಲಾಗಿದೆ. ಅಲ್ಲದೆ, ಅಭಾವ ಪರಿಸ್ಥಿತಿ, ಬರ, ಪ್ರವಾಹ, ಅಗ್ನಿದುರಂತ ಮುಂತಾದ ನೈಸರ್ಗಿಕ ವಿಕೋಪಗಳ ಪರಿಸ್ಥಿತಿಯನ್ನು ನಿಭಾಯಿಸುವುದು ಜಿಲ್ಲಾಧಿಕಾರಿಗಳ ಪ್ರಮುಖ ಕರ್ತವ್ಯವಾಗಿರುತ್ತವೆ. ಅಲ್ಲದೆ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದು ಮತ್ತು ಸ್ಥಳೀಯ ಜನಗಣತಿ ನಡೆಸುವುದು

ಇವರ ಕಾರ್ಯವ್ಯಾಪ್ತಿಗೆ ಬರುತ್ತವೆ. ಪುರಸಭೆಗಳು, ತಾಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ಗ್ರಾಮಪಂಚಾಯಿತಿಗಳು, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದರ ಬಗ್ಗೆ ನಿಗಾ ಇಡುವುದು ಮತ್ತು ಸಾರ್ವಜನಿಕರ ಜೀವ ಮತ್ತು ಸುರಕ್ಷತೆಗೆ ಅಪಾಯ ಒದಗುವಂಥ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಸರ್ಕಾರದ ಕಾರ್ಯನಿರ್ವಾಹಕ ಅಧಿಕಾರವನ್ನು ಚಲಾಯಿಸುವುದು ಜಿಲ್ಲಾಡಳಿತದ ಕರ್ತವ್ಯವಾಗಿರುತ್ತದೆ. ಜಿಲ್ಲೆಯಲ್ಲಿ ಸರ್ಕಾರದ ಅನೇಕ ರೀತಿಯ ಕಾರ್ಯಗಳ ಬಗೆಗೆ ಗಮನಹರಿಸಲು ಜಿಲ್ಲೆ, ಉಪವಿಭಾಗ, ತಾಲೂಕು ಮತ್ತು ಗ್ರಾಮಮಟ್ಟದಲ್ಲಿ ವಿವಿಧ ಶ್ರೇಣಿಯ ಅಧಿಕಾರಿಗಳಿರುತ್ತಾರೆ. ಈ ಎಲ್ಲಾ ಆಡಳಿತದ ಸಮಸ್ತ ಹೊಣೆಯು ಜಿಲ್ಲಾಧಿಕಾರಿಯವರದ್ದಾಗಿರುತ್ತದೆ.

೧೯೫೬ರ ಆದೇಶದನ್ವಯ ವಿಭಾಗೀಯ ಕಮಿಷನರ್‌ರ ಹುದ್ದೆಯನ್ನು ಹೊಸ ಮೈಸೂರು ರಾಜ್ಯದಲ್ಲಿ ಸೃಜಿಸಲಾಯಿತು. ೧೯೫೬ರ ರಾಜ್ಯಗಳ ಪುನಾರಚನಾ ಅದಿನಿಯಮದ ಉಪಬಂಧಗಳ ಮೇರೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಮೈಸೂರು ವಿಭಾಗದ ವಿಭಾಗೀಯ ಕಮಿಷನರ್ ಅವರ ವ್ಯಾಪ್ತಿಗೆ ಒಳಪಟ್ಟಿತು. ವಿಭಾಗೀಯ ಕಮಿಷನರ್ ಅವರು ಮೇಲ್ವಿಚಾರಣೆ, ನಿಯಂತ್ರಣ, ಸಹ–ಸಮನ್ವಯ, ಸಲಹೆ ಮತ್ತು ಅಪೀಲಿನಂಥ ವಿಭಿನ್ನ ಪ್ರಕಾರ್ಯಗಳನ್ನು ಹೊಂದಿರುತ್ತಿದ್ದರು. ಈಗ ವಿಭಾಗೀಯ ಕಮಿಷನರ್ ಹುದ್ದೆಯನ್ನು ರದ್ದುಪಡಿಸಲಾಗಿದೆ.

## ಪ್ರಾದೇಶಿಕ ಆಯುಕ್ತರು

ಕರ್ನಾಟಕವು ಏಕೀಕರಣಗೊಂಡ ದಿನದಿಂದಲೇ ಹೊಸ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಯಿತು (1ನೇ ನವೆಂಬರ್ 1956) ಸರ್ಕಾರದ ಆದೇಶ ಸಂಖ್ಯೆ: ಎಸ್‌ಎಸ್ 4817–917/ಎಸ್‌ಆರ್‌ಡಿ 2–56.2 ದಿನಾಂಕ 24ನೇ ಅಕ್ಟೋಬರ್, 1956, ಪತ್ರದ ಪ್ರಕಾರ ವಿಭಾಗೀಯ ಆಯುಕ್ತರನ್ನು ನೇರವಾಗಿ ಕಂದಾಯ ಮತ್ತು ಸ್ಥಳೀಯ ಸ್ವಯಮಾಧಿಕಾರ ಇಲಾಖೆಗಳ ಆಡಳಿತ, ಶಾಂತಿ ಸುವ್ಯವಸ್ಥೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಸಮನ್ವಯ ಕಾರ್ಯಗಳಿಗೆ ಜವಾಬ್ದಾರರನ್ನಾಗಿ ಮಾಡಲಾಯಿತು. ಕರ್ನಾಟಕ ಭೂಕಂದಾಯ ಅಧಿನಿಯಮ, 1964, ಕಲಮು 7(2)ರ ಪ್ರಕಾರ, ಸರಕಾರದ ನಿಯಂತ್ರಣಕ್ಕೊಳಪಟ್ಟ ವಿಭಾಗಾಧಿಕಾರಿಯು, ಆಯಾ ವಿಭಾಗದ ಪ್ರಮುಖ ಕಂದಾಯಾಧಿಕಾರಿಯಾಗಿದ್ದರು. ವಿಭಾಗದ ವ್ಯಾಪ್ತಿಯಲ್ಲಿ ಅವರಿಗೆ ಅಧೀನರಾಗಿರುವ ಎಲ್ಲಾ ಅಧಿಕಾರಿಗಳ ಮೇಲೆ ಅಧೀಕ್ಷಕರ ಅಧಿಕಾರ ಚಲಾಯಿಸಬಲ್ಲವರಾಗಿದ್ದರು. ವಿಭಾಗಾಧಿಕಾರಿಗಳಿಗೆ ಆ ಮೊದಲು ಇದ್ದ ಅಧಿಕಾರಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ. ಉಡುಪಿ ಜಿಲ್ಲೆಯು ಮೈಸೂರು ಪ್ರಾಂತೀಯ ಆಯುಕ್ತರ ಆಡಳಿತ ವ್ಯಾಪ್ತಿಗೆ ಬರುತ್ತದೆ.

ವಿಭಾಗಾಧಿಕಾರಿಯು ವಿಭಾಗೀಯ ಮಟ್ಟದಲ್ಲಿನ ಎಲ್ಲಾ ಇಲಾಖೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿದ್ದರು. ವಿಬಾಗಾಧಿಕಾರಿಯಾಗಿ, ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಮಾಡಲಾದ ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದು, ಪೌರಾಡಳಿತ, ರಾಷ್ಟ್ರೀಯ ವಿಸ್ತರಣಾ ಸೇವಾ ಘಟಕಗಳು, ತಾಲೂಕು ಅಭಿವೃದ್ಧಿ ಮಂಡಳಿ ಹಾಗೂ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಶಿಫಾರಸ್ಸುಗಳೆಲ್ಲಾ ಅವರ ಮೂಲಕವೇ ಸರ್ಕಾರಕ್ಕೆ ಕಳುಹಿಸಲ್ಪಡುತ್ತಿದ್ದವು. ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳಲ್ಲಿ ಅವರು ಮೇಲ್ಮನವಿ ಪ್ರಾಧಿಕಾರ ಹೊಂದಿದ್ದರು. ಅನೇಕ ವಿಷಯಗಳಲ್ಲಿ ಯೋಜನೆ, ಕಾಮಗಾರಿಗಳಿಗೆ ಮಂಜುರಾತಿ ನೀಡುವ ಅಧಿಕಾರ ಅವರಿಗಿತ್ತು. ಅವರ ವಿಭಾಗದಲ್ಲಿ ಬರುವ ಎಲ್ಲಾ ಕಂದಾಯ ಇಲಾಖೆಯ ಕಛೇರಿಗಳ ತಪಾಸಣೆಯನ್ನು ನಡೆಸುವ ಜವಾಬ್ದಾರಿ ವಿಭಾಗಾಧಿಕಾರಿಯದೇ ಆಗಿತ್ತು. ಅವರು ಜಿಲ್ಲಾಧಿಕಾರಿಗಳಿಗೆ, ಯೋಜನಾಧಿಕಾರಿಗಳಿಗೆ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸಮುದಾಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿ ಮುನ್ನಡೆಯುವ ಬಗ್ಗೆ ಸಲಹೆ–ಸೂಚನೆಗಳನ್ನು ನೀಡುತ್ತಿದ್ದರು. ತಹಸೀಲ್ದಾರ್, ವಿಭಾಗ ಅಭಿವೃದ್ಧಿ ಅಧಿಕಾರಿ ಮುಂತಾದ ಕಂದಾಯ ಇಲಾಖೆಯ ಅಧಿಕಾರಿಗಳ ನೇಮಕಾತಿ, ರಜೆ ಮಂಜೂರಾತಿಯೇ ಮುಂತಾದ ವಿಷಯಗಳು ಪ್ರಾಂತೀಯ ಆಯುಕ್ತರ ಜವಾಬ್ದಾರಿಗಳಾಗಿದ್ದವು. ಅವರ ವಿಭಾಗದ ಎಲ್ಲಾ ಸರಕಾರಿ ಇಲಾಖೆಗಳ ಕೆಲಸಗಳಲ್ಲಿ ಅಂತರ ಇಲಾಖಾ ಸಮನ್ವಯ ತರಲು ಪ್ರತಿ ಮೂರು ತಿಂಗಳಿಗೊಮ್ಮೆ

ಸಮನ್ವಯ ಸಮಿತಿಯ ಸಭೆಯನ್ನು ಕರೆಯುತ್ತಿದ್ದರು. ಅಂತಹ ಸಭೆಗಳಲ್ಲಿ ಬೇರೆ ಬೇರೆ ಇಲಾಖೆಗಳ ಕೆಲಸಕಾರ್ಯಗಳಲ್ಲಿ ದೀರ್ಘಕಾಲದಿಂದ ವಿಲೇವಾರಿಯಾಗದೇ ಇರುವ ವಿಷಯಗಳನ್ನು ಜಾಗ್ರತೆಯಾಗಿ ತೀರ್ಮಾನಿಸಿ ಮುಗಿಸಲು ಪ್ರಯತ್ನ ಮಾಡಲಾಗುತ್ತಿತ್ತು. ವಿಭಾಗೀಯ ಆಯುಕ್ತರಿಗೆ ಸಾಮಾನ್ಯವಾಗಿ ಕಂದಾಯ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಗಮನಿಸುವ ಇಬ್ಬರು ಪತ್ರಾಂಕಿತ ಸಹಾಯಕ ಅಧಿಕಾರಿಗಳು ಮತ್ತು ಪತ್ರಾಂಕಿತ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿ, ಆಡಳಿತ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು.

ವಿಭಾಗಾಧಿಕಾರಿಗಳು ಈ ಹಿಂದೆ ಸಂವಿಧಾನಾತ್ಮಕವಾಗಿ ಮೇಲ್ಮನವಿ ಮತ್ತು ಪುನರ್ ಪರಿಶೀಲನೆ (Appeal and revision) ಪ್ರಾಧಿಕಾರಿಯಾಗಿ ಈ ಮುಂದೆ ಕಾಣಿಸಿರುವ ನಿಯಮ-ಅಧಿನಿಯಮಗಳಡಿ ಅಧಿಕಾರವನ್ನು ಚಲಾಯಿಸುತ್ತಿದ್ದರು.

i) ಭಾರತೀಯ ವಿಸ್ಫೋಟಕಗಳ ಅಧಿನಿಯಮ, 1940
ii) ಭಾರತೀಯ ಆಯುಧ ಅಧಿನಿಯಮ, 1959.
iii) ಕರ್ನಾಟಕ ಸಿನೆಮಾ (ವಿನಿಯಮನ) ಅಧಿನಿಯಮ, 1964 ಮತ್ತು ಸಿನೆಮ್ಯಾಟೊಗ್ರಾಫಿಕ್ ಅಧಿನಿಯಮ.
iv) ಕರ್ನಾಟಕ ಎಕ್ಸಿಬಿಷನ್ ಆಫ್ ಫಿಲ್ಮ್ಸ್ ಆನ್ ಟಿ.ವಿ. ಸ್ಕ್ರೀನ್ ಥ್ರೂ ವಿ.ಸಿ.ಆರ್. (ವಿನಿಯಮನ) ಅಧಿನಿಯಮ, 1984.
v) ಕರ್ನಾಟಕ ನೀರಾವರಿ ಅಧಿನಿಯಮ, 1965.
vi) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, 1999.
vii) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964.
viii) ಕರ್ನಾಟಕ ಭೂ ಸುದಾರಣಾ ಅಧಿನಿಯಮ, 1961.
ix) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969.
x) ಕರ್ನಾಟಕ ಪೌರಸಭೆಗಳ ಅಧಿನಿಯಮ, 1964
xi) ಕರ್ನಾಟಕ ಇನಾಮುಗಳು ಮತ್ತು ನಿರ್ದಿಷ್ಟ ಇನಾಮುಗಳ ರದ್ಧತಿ ಅಧಿನಿಯಮ (1954, 1955 ಮತ್ತು 1977)
xii) ಕರ್ನಾಟಕ ಪರಿಶಿಷ್ಟ ಜಾತಿಗಳು/ ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ, ಇತ್ಯಾದಿ) ಅಧಿನಿಯಮ, 1993.
xiii) ಕರ್ನಾಟಕ ಭೂ ಸ್ವಾಧೀನ ಅಧಿನಿಯಮ, 1961.
xiv) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957.
xv) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿಗಳ ಅಧಿನಿಯಮ, 1997.
xvi) ಕರ್ನಾಟಕ ಟ್ರೆ ಝರ್ ಟ್ರೋವ್ ಅಧಿನಿಯಮ.
xvii) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993.
xviii) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1974.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ನಾಲ್ಕು ವಿಭಾಗಾಧಿಕಾರಿ ಕಛೇರಿಗಳನ್ನು ರದ್ದುಗೊಳಿಸಲಾಗಿತ್ತು. ಆದರೆ, ಜಿಲ್ಲೆ, ಉಪವಿಭಾಗ ಮತ್ತು ತಾಲೂಕುಮಟ್ಟದ ಉಸ್ತುವಾರಿ ಹಾಗೂ ಆಡಳಿತಾತ್ಮಕ ನಿಯಂತ್ರಣ ಪ್ರಾಧಿಕಾರವನ್ನು ಸೃಷ್ಟಿಸುವ ಪರ್ಯಾಯ ವ್ಯವಸ್ಥೆಯನ್ನು

ಮಾಡಲಿಲ್ಲ. ವಿಭಾಗಾಧಿಕಾರಿಗಳ ಕಛೇರಿಯನ್ನು ರದ್ದುಗೊಳಿಸಿದ್ದರಿಂದ ಆಡಳಿತದಲ್ಲಿ ಕೆಳಕಂಡ ಪ್ರತಿಕೂಲ ಪರಿಣಾಮಗಳು ಸಂಭವಿಸಿದವು.

ಅ) ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಆಡಳಿತಾತ್ಮಕ ನಿಯಂತ್ರಣವು ಕ್ರಮವಾಗಿ ಹತೋಟಿ ತಪ್ಪುತ್ತಿತ್ತು.

ಆ) ವಿಭಾಗ ಮಟ್ಟದಲ್ಲಿ ನಿಯಂತ್ರಣಾಧಿಕಾರಿಯಾಗಿದ್ದ ವಿಭಾಗಾಧಿಕಾರಿಗಳು ವಿವಿಧ ಅಧಿನಿಯಮಗಳು ಮತ್ತು ನಿಯಮಗಳಡಿಯಲ್ಲಿ ನ್ಯಾಯಿಕ ಸ್ವರೂಪದ ಪ್ರಾಧಿಕಾರಿಗಳಾಗಿದ್ದರು. ವಿಭಾಗೀಯ ಕಛೇರಿಗಳ ರದ್ಧತಿಯಿಂದಾಗಿ, ಆ ಕಾರ್ಯಗಳು ವಿಶೇಷವಾಗಿ ಬಾಧಿತವಾಗಿ ಅತೀ ಹೆಚ್ಚಿನ ಪ್ರಕರಣಗಳು ಬಾಕಿ ಉಳಿದವು.

ಮೇಲೆ ಪಟ್ಟಿ ಮಾಡಿರುವ ಅಧಿನಿಯಮ – ನಿಯಮಗಳಡಿಯಲ್ಲಿ ಬರತಕ್ಕ ಪ್ರಕರಣಗಳನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ವರ್ಗಾಯಿಸಿದ್ದು, ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ. ವಿಭಾಗ ಮಟ್ಟದಲ್ಲಿ ಈ ಹಿಂದೆ ಪರಿಶೀಲಿಸಬೇಕಾದ ಅಗತ್ಯವೂ ಉಂಟಾಯಿತು. ಹೀಗೆ ಸರ್ಕಾರದ ಮಟ್ಟದಲ್ಲಿ ಸಂಭವಿಸಿರುವ ಹೆಚ್ಚುವರಿ ಕಾರ್ಯಬಾಹುಳ್ಯ ಮತ್ತು ಒತ್ತಡವನ್ನು ನಿವಾರಿಸಿಕೊಳ್ಳಲು ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿಗಳಲ್ಲಿ ಸ್ಥಾಪಿಸಲು ಕರ್ನಾಟಕ ಸಚಿವ ಸಂಪುಟವು ತನ್ನ ದಿನಾಂಕ 19–08–2005 ರ ಸಭೆಯಲ್ಲಿ ಅಂಗೀಕರಿಸಿತು. ಅದು ಹೊಸ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳ ಮೇಲುಸ್ತುವಾರಿಯನ್ನು ಕೂಡ ನಿರ್ವಹಿಸಬೇಕೆಂದು ತೀರ್ಮಾನಿಸಿತು.

ಈ ತೀರ್ಮಾನದ ಪ್ರಕಾರ ಸೆಪ್ಟೆಂಬರ್ 2005ರಲ್ಲಿ ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿಗಳಲ್ಲಿ ಸಹಾಯಕ ಸಿಬ್ಬಂದಿ ಸಹಿತ ಸ್ಥಾಪನೆ ಮಾಡಿ ರಾಜ್ಯ ಸರಕಾರವು ಆದೇಶ ಹೊರಡಿಸಿತು. ಮೈಸೂರು ಪ್ರಾದೇಶಿಕ ಆಯುಕ್ತರು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯವ್ಯಾಪ್ತಿ ಹೊಂದಿರುತ್ತಾರೆ. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಅಧೀನರಾಗಿ ಕಾರ್ಯನಿರ್ವಹಿಸುವರು. ಅದರಂತೆ ಉಡುಪಿ ಜಿಲ್ಲೆಯು ಮೈಸೂರು ಪ್ರಾದೇಶಿಕ ಆಯುಕ್ತರ ವ್ಯಾಪ್ತಿಗೊಳಪಟ್ಟಿದೆ.

**ಪ್ರಾದೇಶಿಕ ಆಯುಕ್ತರ ಕಛೇರಿಗಳು ಈ ಕೆಳಕಾಣಿಸಿರುವ ಕಾರ್ಯಗಳನ್ನು ನಿರ್ವಹಿಸುತ್ತವೆ :**

1. ಸಿಬ್ಬಂದಿಗಳ ನಿರ್ವಹಣೆ, ಅಭಿವೃದ್ಧಿ, ತರಬೇತಿ ಮತ್ತು ಕಂದಾಯ ಇಲಾಖೆಯ ಮಾನವ ಸಂಪನ್ಮೂಲದ ಇತರ ವಿಷಯಗಳು.
2. ಜಿಲ್ಲೆ, ಉಪವಿಭಾಗ, ತಾಲ್ಲೂಕು, ಹೋಬಳಿ ಮತ್ತು ಗ್ರಾಮಮಟ್ಟದ ಕಂದಾಯದ ಲೆಕ್ಕ ಮತ್ತು ಲೆಕ್ಕ ಪರಿಶೋಧನೆಗಳ ನಿರ್ವಹಣೆ ಹಾಗೂ ವಾರ್ಷಿಕ ತಪಾಸಣೆ, ಅನಿರೀಕ್ಷಿತ ತಪಾಸಣೆ ಹಾಗೂ ಪರಿಶೀಲನೆ ಮತ್ತು ವಾರ್ಷಿಕ ಕಡ್ಡಾಯ ಜಮಾಬಂದಿ ನಡೆಸುವುದು.
3. ಈ ಹಿಂದೆ ವಿಭಾಗಾಧಿಕಾರಿಗಳು ವಿವಿಧ ನಿಯಮ–ಅಧಿನಿಯಮಗಳಡಿಯಲ್ಲಿ ಚಲಾಯಿಸುತ್ತಿದ್ದ ಶಾಸನಬದ್ಧ (ಮೇಲ್ಮನವಿ ಮತ್ತು ಪುನರಾವಲೋಕನ) ಅಧಿಕಾರ.
4. ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಭೂಮಾಪನ ಮತ್ತು ಭೂದಾಕಲೆಗಳ ಕಾರ್ಯ, ಮುಜರಾಯಿ ಕಛೇರಿಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿದ ಕೆಲಸಗಳ ಮೇಲುಸ್ತುವಾರಿ ಅಧಿಕಾರ.
5. ಅಧೀನ ಕಛೇರಿಗಳಲ್ಲಿ ಕಾನೂನುಬದ್ಧವಾಗಿ, ಸರಕಾರದ ಸೂಚನೆ / ಆಜ್ಞೆಗಳ ಪ್ರಕಾರ ಮತ್ತು ಸ್ಥಾಯಿ ಆದೇಶಗಳನ್ವಯ ಕೆಲಸ – ಕಾರ್ಯಗಳ ನಿರ್ವಹಣೆ ಆಗುತ್ತಿರುವ ಕುರಿತು

ತಪಾಸಣೆ ಮಾಡುವುದು.

6. ನೈಸರ್ಗಿಕ ವಿಕೋಪ ಹಾಗೂ ಬರ ಪರಿಹಾರ ವಿಷಯಗಳ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಬೆಳೆ ಕಟಾವು ಪ್ರಯೋಗ ಮತ್ತು ಭೂ ಕಂದಾಯ ಮಾಫಿ ಕಾರ್ಯಗಳ ಅಧಿಕಾರ.
7. ರಾಜ್ಯದಲ್ಲಿ ಎಲ್ಲಾ ರೀತಿಯ ಚುನಾವಣೆಗಳ ಮೇಲ್ವಿಚಾರಣೆ.
8. ಭೂ ಮಂಜೂರಾತಿ, ಭೂ ಸ್ವಾಧೀನ, ಭೂ ಸುದಾರಣೆ, ಭೂ ಕಂದಾಯ ವಸೂಲಿ, ಭೂ ಮಾಪನ ಮತ್ತು ಕಂದಾಯ ಇಲಾಖೆಯ ಗಣಕೀಕರಣ ಕಾರ್ಯಗಳ ಮೇಲುಸ್ತುವಾರಿ.
9. ಜಿಲ್ಲೆ , ಉಪವಿಭಾಗ ಮತ್ತು ತಾಲೂಕು ಕಛೇರಿಗಳಿಗೆ ಹಣಕಾಸು ಬಿಡುಗಡೆ, ವಾರ್ಷಿಕ ಆಯವ್ಯಯ ತಯಾರಿಕೆ, ಶಾಸನ ಸಭೆಗಳ ಪ್ರಶ್ನೆಗಳಿಗೆ ಉತ್ತರಿಸುವುದು, ಶಾಸಕಾಂಗದ ಉಪಸಮಿತಿಗಳಿಗೆ ವರದಿ ಸಲ್ಲಿಸುವುದು ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲನೆ ಮಾಡುವುದು.
10. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರಿ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಿಂಗಳಿಗೊಮ್ಮೆಯಾದರೂ ವಿಮರ್ಶಿಸುವುದು ಮತ್ತು ಪರಿಶೀಲಿಸುವುದು.
11. ಆರ್ಥಿಕ ಮತ್ತು ಭೌತಿಕ ಗುರಿ ಸಾಧಿಸುವಲ್ಲಿ ಕೊರತೆಯಾದಾಗ ಕಾರಣಗಳನ್ನು ಪತ್ತೆ ಹಚ್ಚಿ ಸಕಾಲಿಕ ಪರಿಹಾರೋಪಾಯಗಳನ್ನು ಸೂಚಿಸಿ ಅದರಂತೆ ಕ್ರಮ ಜರುಗಿಸುವುದು. ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ಮುಖ್ಯಸ್ಥರು, ಕಾರ್ಯದರ್ಶಿಗಳು ಮತ್ತು ಪ್ರಧಾನಕಾರ್ಯದರ್ಶಿಗಳೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಜರುಗಿಸುವುದು.

ನಾಲ್ಕು ಪ್ರಾದೇಶಿಕ ಕಛೇರಿಗಳಿಗೆ ಐ.ಎ.ಎಸ್. ಸೂಪರ್ ಟೈಮ್ ಸ್ಕೇಲ್ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಪ್ರಾದೇಶಿಕ ಆಯುಕ್ತರ ಪ್ರಕಾರ್ಯಗಳಲ್ಲಿ ನೆರವಾಗಲು ಇಬ್ಬರು ಸೂಪರ್ ಟೈಮ್ ಸ್ಕೇಲ್ ಅಧಿಕಾರಿಗಳಿರುತ್ತಾರೆ. ಅವರುಗಳೆಂದರೆ, (ಅ) ಹೆಚ್ಚುವರಿ ಆಯುಕ್ತರು (ಕಂದಾಯ ಆಡಳಿತ); ಮತ್ತು ಹೆಚ್ಚುವರಿ ಆಯುಕ್ತರು (ಭೂ ನಿರ್ವಹಣೆ, ಯೋಜನೆಗಳು ಮತ್ತು ಇನ್ನಿತರೆ ವಿಷಯಗಳು). ಇವರಲ್ಲದೆ ಅಗತ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವನ್ನು ಸಹ ಸೃಷ್ಟಿಸಿ ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ರೂಪಿಸಲಾಗಿದೆ.

## ಜಿಲ್ಲಾಧಿಕಾರಿ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕೀಕರಣ ಪೂರ್ವದಲ್ಲಿ, ಜಿಲ್ಲೆಯ ಕಂದಾಯ ಮುಖ್ಯಸ್ಥರನ್ನು ಕಲೆಕ್ಟರ್ ಎಂದು ಕರೆಯಲಾಗುತ್ತಿತ್ತು. ಏಕೀಕರಣದ ನಂತರ ಆ ಪದನಾಮವನ್ನು 'ಡೆಪ್ಯುಟಿ ಕಮಿಷನರ್' (ಜಿಲ್ಲಾಧಿಕಾರಿ) ಎಂದು ಬದಲಾಯಿಸಲಾಯಿತು ಮತ್ತು ಅವರು ಜಿಲ್ಲೆಯ ಸಾರ್ವತ್ರಿಕ ಆಡಳಿತವನ್ನು ನಿರ್ವಹಣೆ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಮತ್ತು ಇವರು ನ್ಯಾಯಾಂಗದತ್ತವಾದ ಜಿಲ್ಲಾ ದಂಡಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಜಿಲ್ಲಾಧಿಕಾರಿಯು ನಿರ್ವಹಿಸುವ ಪ್ರಮುಖ ಕರ್ತವ್ಯಗಳನ್ನು ೧) ರಾಜಸ್ವ ೨) ಕಾನೂನು ಮತ್ತು ಸುವ್ಯವಸ್ಥೆ ೩) ಅಭಿವೃದ್ಧಿ ೪) ಸಮನ್ವಯ ಮತ್ತು ೫) ಸಾರ್ವಜನಿಕ ಕಲ್ಯಾಣವೆಂದು ವಿಂಗಡಿಸಲಾಗಿದೆ. ಜಿಲ್ಲಾಧಿಕಾರಿಯು ಜಿಲ್ಲೆಯ ಪರಿಪಾಲಕರಾಗಿದ್ದು, ಸರ್ಕಾರದ ಎಲ್ಲಾ ಭೂಮಿ ಹಾಗೂ ಸರ್ಕಾರಿ ಭೂಮಿಗಳು ಅದು ಎಲ್ಲೇ ಇರಲಿ ಹೇಗೇ ಇರಲಿ ಅದರ ಸಂರಕ್ಷಕರಾಗಿರುತ್ತಾರೆ ಮತ್ತು ಅದೇ ಸಮಯದಲ್ಲಿ ತಮಗೆ ವಹಿಸಲಾದ ಪ್ರದೇಶದಲ್ಲಿ ಸರ್ಕಾರದ ಹಿತಾಸಕ್ತಿಯನ್ನು ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡ ಬೇಕಿರುವುದು ಅವರ ಪ್ರಮುಖ ಕರ್ತವ್ಯವಾಗಿರುತ್ತದೆ. ಜಿಲ್ಲಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಂದಾಯ ಭೂಮಿಗಳ ಕಂದಾಯ ನಿರ್ಧರಣೆ, ಕಂದಾಯ ವಸೂಲಿ ಮತ್ತು ಅದರ ಲೆಕ್ಕವಿಡುವಿಕೆಯ ಬಗೆಗೆ ಗಮನಹರಿಸಬೇಕಾದುದು ಜಿಲ್ಲಾಧಿಕಾರಿಯ ಕರ್ತವ್ಯವಾಗಿರುತ್ತದೆ. ಅಲ್ಲದೇ ಅವರು ಸರ್ಕಾರಕ್ಕೆ ಬಾಕಿಯಿರುವ

ಕಂದಾಯವನ್ನು ನಿಯತವಾಗಿ ವಸೂಲು ಮಾಡಲಾಗುತ್ತಿದೆಯೆ; ಅಂಥ ಎಲ್ಲ ವಸೂಲಿಗಳ ಲೆಕ್ಕವನ್ನು ಸರಿಯಾಗಿ ಇಡಲಾಗುತ್ತಿದೆಯೆ ಮತ್ತು ಅದನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆಯೆ; ಎಂಬುದನ್ನು ಎಚ್ಚರಿಕೆಯಿಂದ ಗಮನಿಸಿ ಸೂಕ್ತ ಕ್ರಮಕೈಗೊಳ್ಳಬೇಕಾಗುತ್ತದೆ. ಈ ಕರ್ತವ್ಯಗಳನ್ನು ಹಾಗೂ ಇದಕ್ಕೆ ಸಂಬಂಧ ಪಟ್ಟಂಥ ಇತರ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಮೈಸೂರು ಭೂಕಂದಾಯ ಅಧಿನಿಯಮ ಮತ್ತು ನಿಯಮಗಳು ಜಿಲ್ಲಾಧಿಕಾರಿಗೆ ಸಾಕಷ್ಟು ಅಧಿಕಾರವನ್ನು ನೀಡಲಾಗಿದೆ. ಭೂಕಂದಾಯವೇ ಅಲ್ಲದೆ, ಜಿಲ್ಲಾಧಿಕಾರಿಯು ಸ್ಟಾಂಪುಗಳು ಮತ್ತು ನೋಂದಣಿಗೆ ಸಂಬಂಧಪಟ್ಟ ಶುಲ್ಕಗಳು, ನೀರಾವರಿಗೆ ಸಂಬಂಧಪಟ್ಟ ಕರಗಳು ಹಾಗೂ ಇತರ ಅಧಿನಿಯಮಗಳನ್ವಯ ವಿವಿಧ ಶುಲ್ಕಗಳು ಮತ್ತು ತೆರಿಗೆಗಳ ವಸೂಲಾತಿಗಳ ಬಗ್ಗೆ ವಿಶೇಷ ಗಮನಹರಿಸಬೇಕಾಗುತ್ತದೆ.

ಜಿಲ್ಲಾ ಕಂದಾಯ ಆಡಳಿತದ ಮುಖ್ಯಸ್ಥರಾಗಿ, ಜಿಲ್ಲಾಧಿಕಾರಿಯು ೧೯೬೪ರ ಮೈಸೂರು ಭೂ ಕಂದಾಯ ಅಧಿನಿಯಮ ಮತ್ತು ಅದರಡಿ ಮಾಡಿರುವ ನಿಯಮಗಳಲ್ಲಿ ನಮೂದಿಸಲಾದ ಎಲ್ಲ ಅಧಿಕಾರಗಳನ್ನು ಚಲಾಯಿಸುವ ಹಕ್ಕನ್ನು ಪಡೆದಿರುತ್ತಾರೆ. ಇದರ ಜೊತೆಗೆ, ಮೈಸೂರು ಭೂಕಂದಾಯ ಅಧಿನಿಯಮ, ಭೂ ಸ್ವಾಧೀನ ಅಧಿನಿಯಮ, ಮೈಸೂರು ನೀರಾವರಿ ಅಧಿನಿಯಮ, ಹಿಂದೂ ಧಾರ್ಮಿಕ ಮತ್ತು ದತ್ತಿ ಅಧಿನಿಯಮ, ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ, ಮೈಸೂರು ಪುರಸಭಾ ಅಧಿನಿಯಮ ಹಾಗೂ ಇನ್ನೂ ಮುಂತಾದ ವಿವಿಧ ಇತರ ಅಧಿನಿಯಮಗಳಡಿ ಕ್ರಮಬದ್ಧ ಅಧಿಕಾರಗಳನ್ನು ಚಲಾಯಿಸುವ ಹಕ್ಕನ್ನು ಇವರು ಹೊಂದಿರುತ್ತಾರೆ. ಅವರು ಕಂದಾಯ ವ್ಯಾಜ್ಯಗಳಲ್ಲಿ ಅರೆ ನ್ಯಾಯಿಕ ಅಧಿಕಾರವನ್ನೂ ನಿರ್ವಹಿಸುತ್ತಾರೆ. ಜಿಲ್ಲಾಧಿಕಾರಿಯು ಜಿಲ್ಲೆಯ ಕಾರ್ಯನಿರ್ವಾಹಕ ದಂಡಾಧಿಕಾರಿಯಾಗಿರುತ್ತಾರೆ (ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್) ಮತ್ತು ಈ ಸಾಮರ್ಥ್ಯದಲ್ಲಿ ಅವರು ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಗುರುತರವಾಗಿ ಜವಾಬ್ದಾರರಾಗಿರುತ್ತಾರೆ. ಅವರು ಎಲ್ಲ ಕಾರ್ಯನಿರ್ವಾಹಕ ದಂಡಾಧಿಕಾರಿಗಳ ಅಂದರೆ ಉಪವಿಭಾಗೀಯ ಮತ್ತು ತಾಲೂಕು ದಂಡಾಧಿಕಾರಿಗಳ ಮುಖ್ಯಸ್ಥರಾಗಿ ಮತ್ತು ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ದಂಡ ಪ್ರಕ್ರಿಯಾ ಸಂಹಿತೆ, ಕರ್ನಾಟಕ ಪೋಲೀಸು ಅಧಿನಿಯಮ ಮತ್ತು ಇತರ ಅಧಿನಿಯಮಗಳ ಮೇರೆಗೆ ವ್ಯಾಪಕ ಅಧಿಕಾರಗಳನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ಜಿಲ್ಲಾ ಪೋಲೀಸು ದಳದ ಮೇಲೆ ನಿಯಂತ್ರಣವನ್ನು ಮತ್ತು ಜಿಲ್ಲೆಯಲ್ಲಿನ ಕಾರಾಗೃಹ ಮತ್ತು ಲಾಕಪ್‌ಗಳ ಆಡಳಿತದ ಮೇಲೆ ಮೇಲ್ವಿಚಾರಣಾ ಅಧಿಕಾರವನ್ನು ಇವರು ಹೊಂದಿರುತ್ತಾರೆ. ಜಿಲ್ಲಾಧಿಕಾರಿಯು ಜಿಲ್ಲಾ ದಂಡಾಧಿಕಾರಿಯಾಗಿ, ಜಿಲ್ಲಾ ದಂಡಾಧಿಕಾರಿಯ ಮಾರ್ಗದರ್ಶನದಲ್ಲಿ ಭಾರತೀಯ ಸಶಸ್ತ್ರ ಅಧಿನಿಯಮ, ಭಾರತೀಯ ಸ್ಫೋಟಕಗಳ ಅಧಿನಿಯಮದ ಮೇರೆಗೆ ಲೈಸೆನ್ಸ್‌ಗಳನ್ನು ಮತ್ತು ಪರ್ಮಿಟ್‌ಗಳನ್ನು ನೀಡಲು ಜವಾಬ್ದಾರರಾಗಿರುತ್ತಾರೆ. ಅಲ್ಲದೆ, ಕರ್ನಾಟಕ ಸಿನಿಮೆಟೊಗ್ರಾಫ್ ಅಧಿನಿಯಮದ ಮೇರೆಗೆ ಚಿತ್ರಮಂದಿರಗಳಿಗೆ ಲೈಸೆನ್ಸ್ ನೀಡಿಕೆ ಅಧಿಕಾರವನ್ನೂ ಹೊಂದಿರುತ್ತಾರೆ.

ಜಿಲ್ಲಾಧಿಕಾರಿಗಳು ಜಿಲ್ಲೆಯ ಉಪ ಅಭಿವೃದ್ಧಿ ಆಯುಕ್ತರಾಗಿಯೂ ಕಾರ್ಯನಿರ್ವಹಿಸುತ್ತಾರೆ ಹಾಗೂ ಈ ಅಧಿಕಾರ ವ್ಯಾಪ್ತಿಯಲ್ಲಿ ಜಿಲ್ಲೆಯ ಸಮಗ್ರ ಸಮುದಾಯದ ಬೆಳವಣಿಗೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಇವರ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಈಚೆಗೆ ಈ ಕಾರ್ಯವನ್ನು ವಿಶೇಷ-ಜಿಲ್ಲಾಧಿಕಾರಿಯವರು ನಿರ್ವಹಿಸುತ್ತಿದ್ದು, ಅಭಿವೃದ್ಧಿ ಕಾರ್ಯಗಳನ್ನು ಪರಿವೀಕ್ಷಿಸುತ್ತಾರೆ. ಜಿಲ್ಲೆಯ ವಿವಿಧ ಇಲಾಖೆಗಳು ಕಾರ್ಯರೂಪಗೊಳಿಸುವ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಾಮರ್ಶಿಸುವ ಅಧಿಕಾರವನ್ನು ಹೊಂದಿರುವ ಜಿಲ್ಲಾ ಅಭಿವೃದ್ಧಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿ ಜಿಲ್ಲಾಧಿಕಾರಿಯು ಸ್ವಾಭಾವಿಕವಾಗಿಯೇ ನೇಮಕವಾಗಿರುತ್ತಾರೆ. ಜಿಲ್ಲೆಯ ಜವಾಬ್ದಾರಿಯುತ ಆಡಳಿತದ ನಿರ್ವಹಣೆಯಲ್ಲಿ ಜಿಲ್ಲೆಯ ಕೇಂದ್ರಸ್ಥಾನಿಕ ಸಹಾಯಕರು ಜಿಲ್ಲಾಧಿಕಾರಿಗಳಿಗೆ ಪ್ರಮುಖವಾಗಿ ನೆರವಾಗುತ್ತಾರೆ. ಕೇಂದ್ರಸ್ಥಾನಿಕ ಸಹಾಯಕರ ಜೊತೆಗೆ ಕಚೇರಿ ಸಹಾಯಕರು ಮತ್ತು ಇತರೆ ಕೆಳಸ್ತರದ ಅಧಿಕಾರಿ ವರ್ಗದವರು, ಆಹಾರ

ಸಹಾಯಕ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಮೊದಲಾದವರು ಜಿಲ್ಲಾಧಿಕಾರಿಗಳಿಗೆ ಆಡಳಿತದಲ್ಲಿ ಪ್ರಮುಖವಾಗಿ ನೆರವಾಗುತ್ತಾರೆ. ಇವರುಗಳೇ ಅಲ್ಲದೇ ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಧೀನ ಅಧಿಕಾರಿಗಳೂ ಆಡಳಿತದಲ್ಲಿ ನೆರವಾಗುತ್ತಾರೆ.

## ಸಹಾಯಕ ಆಯುಕ್ತರು

ಉಡುಪಿ ಜಿಲ್ಲೆಯಲ್ಲಿ ಕುಂದಾಪುರ ಉಪ ವಿಭಾಗವಿದ್ದು, ಅದರಡಿ ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳು ಬರುತ್ತವೆ. ಈ ವಿಭಾಗವು ಸಹಾಯಕ ಆಯುಕ್ತರ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಸಹಾಯಕ ಆಯುಕ್ತರು, ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರರ ನಡುವಿನ ಕೊಂಡಿಯಂತೆ ಕಾರ್ಯನಿರ್ವಹಿಸುತ್ತಾರೆ. ಸಹಾಯಕ ಆಯುಕ್ತರು ಕಂದಾಯ ಅಧಿಕಾರ ಮತ್ತು ದಂಡಾಧಿಕಾರಿಯ ಅಧಿಕಾರಗಳೆರಡನ್ನು ಚಲಾಯಿಸುತ್ತಾರೆ. ಅವರ ಪ್ರಮುಖ ಕರ್ತವ್ಯಗಳೆಂದರೇ ತಹಸೀಲ್ದಾರರ, ಕಂದಾಯ ನಿರೀಕ್ಷಕರು ಮತ್ತು ಗ್ರಾಮಾಧಿಕಾರಿಗಳ ಕೆಲಸದ ಮೇಲ್ವಿಚಾರಣೆ ಮತ್ತು ತನಿಖೆ ಕೈಗೊಳ್ಳುವುದು ಸೇರಿದೆ. ಅಲ್ಲದೇ ಸರ್ಕಾರಿ ಜಮೀನಿನ ಒತ್ತುವರಿಗಳ ವಿಷಯದಲ್ಲಿ ನಿಯತಕಾಲಿಕ ತನಿಖೆಗಳನ್ನು ನಡೆಸಿ ಸರ್ಕಾರಿ ಭೂಮಿಯ ಹಿತಾಸಕ್ತಿಗಳನ್ನು ಕಾಪಾಡುವುದು, ತಹಸೀಲ್ದಾರರ ನಿರ್ಣಯಗಳ ವಿರುದ್ಧದ ಮೇಲ್ಮನವಿಗಳ ವಿಚಾರಣೆ ನಡೆಸುವುದು ಭೂ ಸ್ವಾಧೀನ ವಿಚಾರಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸುವುದು, ವಾರ್ಷಿಕ ಜಮಾಬಂದಿಗಳನ್ನು ನಡೆಸುವುದು, ಬೆಳೆ ಮತ್ತು ಎಲ್ಲೆ ಗಡಿ ಗುರುತುಗಳನ್ನು ತನಿಖೆ ಮಾಡುವುದು ಮತ್ತು ಕಂದಾಯ ಮತ್ತು ಹಕ್ಕು ದಾಖಲೆಗಳ ತನಿಖೆ ನಡೆಸುವುದು, ಕಂದಾಯ ಮತ್ತು ಅಭಿವೃದ್ಧಿ ಶುಲ್ಕ, ತಕಾವಿ ಸಾಲಗಳ ಮರುಪಾವತಿಯಂಥ ಸರ್ಕಾರಿ ಕಂದಾಯ ವಸೂಲಿಗಳ ಮೇಲ್ವಿಚಾರಣೆ ನಡೆಸುವುದು ಸಹಾಯಕ ಆಯುಕ್ತರ ಕರ್ತವ್ಯಗಳಾಗಿರುತ್ತವೆ.

ಸಹಾಯಕ ಆಯುಕ್ತರು ಉಪವಿಭಾಗೀಯ ದಂಡಾಧಿಕಾರಿಯಾಗಿದ್ದು, ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ನಿಗದಿಪಡಿಸಿದಂತೆ ಕೆಲವು ನಿರ್ದಿಷ್ಟ ಅಧಿಕಾರಗಳನ್ನು ಚಲಾಯಿಸುವ ಹಲವು ವಿಶೇಷ ಅಧಿಕಾರವನ್ನು ಹೊಂದಿರುತ್ತಾರೆ. ಅವುಗಳ ಪೈಕಿ ಸಾರ್ವಜನಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು, ಸಾರ್ವಜನಿಕ ಶಾಂತಿಗೆ ಭಂಗ ತರಬಹುದೆಂದು ತೋರಬಹುದಾದ ಸಂದರ್ಭದಲ್ಲಿ ಅಪಾಯವನ್ನು ತಡೆಯಲು ಆದೇಶಗಳನ್ನು ಹೊರಡಿಸುವ ಅಧಿಕಾರ, ಶವ ಮಹಜರ್ ನಡೆಸುವ ಅಧಿಕಾರ ಮುಂತಾದವನ್ನು ಒಳಗೊಳ್ಳುತ್ತವೆ. ಅವರು ತಮ್ಮ ಉಪವಿಭಾಗಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯ ಬಗೆಗೆ ಜಿಲ್ಲಾಧಿಕಾರಿಗೆ ಆಗಿಂದಾಗ್ಗೆ ಮಾಹಿತಿ ನೀಡುತ್ತಿರಬೇಕು. ಕಂದಾಯ ವಿಭಾಗದಲ್ಲಿ ಸಹಾಯಕ ಆಯುಕ್ತರು ಮೇಲ್ಮನವಿಯ ಪ್ರಥಮ ಹಂತದ ಅಧಿಕಾರಿಯಾಗಿದ್ದು, ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ೩೬ನೆಯ ಪ್ರಕರಣದ ಮೇರೆಗೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸುತ್ತಾರೆ. ಇವರು ಭೂ ಸ್ವಾಧೀನದ ಅಧಿಕಾರಿಯಾಗಿ ಮತ್ತು ಭೂ ಅಭಿವೃದ್ಧಿ ಹಾಗೂ ಭೂ ತೆರಿಗೆ ಅಧಿಕಾರಿಯಾಗಿಯೂ ಕೆಲಸ ನಿರ್ವಹಿಸುತ್ತಾರೆ. ಕರ್ನಾಟಕ ಭೂ ಸುಧಾರಣಾ ಕಾನೂನು ೧೯೬೧ರ ಮೇರೆಗೆ ರಚಿತವಾದ ಭೂ ನ್ಯಾಯಮಂಡಳಿಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ವಿಧಾನಸಭಾ ಚುನಾವಣೆಗೆ ಚುನಾವಣಾ ನಿರ್ವಾಚನಾ ಅಧಿಕಾರಿ ಆಗಿರುತ್ತಾರೆ. ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ (ಪ್ರಸ್ತುತ ಪ್ರಾದೇಶಿಕ ಆಯುಕ್ತರು)ಯ ಆದೇಶದಂತೆ ಕಾನೂನು ಪ್ರಕರಣಗಳ ತನಿಖೆ ಮತ್ತು ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುತ್ತಾರೆ. ತಾಲೂಕು ಮಟ್ಟದ ಹಲವಾರು ಸಮಿತಿಗಳಿಗೆ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

## ತಹಸೀಲ್ದಾರರು

ಹಿಂದೆ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ತಾಲೂಕುಗಳಿದ್ದವು. ಆದರೆ ೧೯೯೭ರಲ್ಲಿ ಉಡುಪಿ ಜಿಲ್ಲೆ ರೂಪುಗೊಂಡ ನಂತರ ದಕ್ಷಿಣ ಕನ್ನಡ ಜಿಲ್ಲೆಯು ಎರಡು ವಿಭಾಗಗಳು ಅಂದರೆ ಮಂಗಳೂರು ಉಪ ವಿಭಾಗದಡಿ ಬಂಟ್ವಾಳ ಮತ್ತು ಮಂಗಳೂರು, ಪುತ್ತೂರು ಉಪವಿಭಾಗದಡಿ ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ ಹೀಗೆ ಒಟ್ಟು ಐದು ತಾಲೂಕುಗಳನ್ನು ಮಾತ್ರ ಹೊಂದಿರುತ್ತದೆ. ಹೊಸದಾಗಿ ರೂಪುಗೊಂಡ

ಉಡುಪಿ ಜಿಲ್ಲೆಯ ಕುಂದಾಪುರ ಉಪವಿಭಾಗದ ಆಡಳಿತ ವ್ಯಾಪ್ತಿಯಡಿ ಕುಂದಾಪುರ, ಕಾರ್ಕಳ ಮತ್ತು ಉಡುಪಿ ತಾಲೂಕುಗಳು ಸೇರಿವೆ.

ಈ ಪ್ರತಿಯೊಂದು ತಾಲೂಕು ತಹಸೀಲ್ದಾರರ ಆಡಳಿತ ಹತೋಟಿಯಲ್ಲಿರುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ತಹಸೀಲ್ದಾರರು ತಮ್ಮ ಉಪ ವಿಭಾಗದ ಸಹಾಯಕ ಆಯುಕ್ತರಿಗೆ ಹಾಗೂ ಅವರ ಮೂಲಕ ಜಿಲ್ಲಾಧಿಕಾರಿಗೆ ಜವಾಬ್ದಾರರಾಗಿರುತ್ತಾರೆ. ತಹಸೀಲ್ದಾರರು ತಾಲೂಕಿನ ಸಾರ್ವತ್ರಿಕ ಆಡಳಿತಕ್ಕೆ ಸಂಬಂಧಪಟ್ಟಂತೆ ಪ್ರಮುಖ ಅಧಿಕಾರಿಯಾಗಿರುತ್ತಾರೆ. ಅವರು ಭೂ ಕಂದಾಯ ವಸೂಲಿ ಮಾಡಲು ಜವಾಬ್ದಾರರಾಗಿರುತ್ತಾರೆ ಮತ್ತು ತಾಲೂಕು ಆಡಳಿತಕ್ಕೆ ಸಂಬಂಧಪಟ್ಟಂತೆ, ಭೂಕಂದಾಯ ಅಧಿನಿಯಮ, ಭೂ ಸುಧಾರಣಾ ಅಧಿನಿಯಮ ಮತ್ತು ಅಂಥ ಇತರ ಅಧಿನಿಯಮಗಳಡಿ ಅವರಿಗೆ ಪ್ರದತ್ತವಾಗಿರುವ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಇದರ ಜೊತೆಗೆ, ತಕಾವಿ ಸಾಲಗಳ ವಸೂಲಿ, ನೀರು ತೆರಿಗೆ, ನಿರ್ವಹಣಾ ಕರ ಮತ್ತು ಸಂಬಂಧಪಟ್ಟ ಇಲಾಖೆಗಳ ಕೋರಿಕೆಯ ಮೇರೆಗೆ ಇತರೆ ಬಾಕಿಯ ವಸೂಲಿ ಮಾಡುವ ಬಗ್ಗೆ ಅವರು ಅಧಿಕಾರ ಹೊಂದಿರುತ್ತಾರೆ. ಅವರು ದಿತ್ತಂ ಜಮಾಬಂದಿ ನಡೆಸುವುದು, ಹುಜೂರು ಜಮಾಬಂದಿಯ ಲೆಕ್ಕಪತ್ರಗಳ ಪರಿಶೀಲನೆ, ವಿವಾದಗಳ ಪ್ರಕರಣಗಳ ತನಿಖೆ ಮುಂತಾದವುಗಳಿಗೆ ಅಗತ್ಯವಾದಂಥ ಭೂ ಕಂದಾಯಗಳ ತಗಾದೆ, ವಸೂಲಿ ಮತ್ತು ಬಾಕಿಗೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಅಲ್ಲದೆ ಬೆಳೆ ವೈಫಲ್ಯ ಇತ್ಯಾದಿಗಳ ಕಾರಣದಿಂದಾಗಿ ಭೂ ಕಂದಾಯವನ್ನು ತಡೆಯುವ ಮತ್ತು ಮಾಫಿಯ ಲೆಕ್ಕಪತ್ರಗಳನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟ ಅತ್ಯಂತ ನಿಕಟ ಅಧಿಕಾರಿಯಾಗಿರುತ್ತಾರೆ.

ತಹಸೀಲ್ದಾರರು ತಾಲೂಕಿನ ದಂಡಾಧಿಕಾರಿಯೂ ಆಗಿರುತ್ತಾರೆ ಮತ್ತು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿದಂತೆ ಕೆಲವು ದಂಡಾಧಿಕಾರಗಳನ್ನು ಚಲಾಯಿಸುತ್ತಾರೆ. ಅವು ಸಿವಿಲ್ ಬಲದ ಬಳಕೆಯಿಂದ, ಯಾವುದೇ ಕಾನೂನುಬಾಹಿರ ದೊಂಬಿಯನ್ನು ಚದುರಿಸುವ ಅಧಿಕಾರವನ್ನು ಸಹ ಒಳಗೊಂಡಿರುತ್ತದೆ. ತೆರಿಗೆ ಮುಂತಾದವನ್ನು ಸಂದಾಯ ಮಾಡಲು ತಪ್ಪಿದಲ್ಲಿ ಮತ್ತು ಸಂದಾಯ ಮಾಡದಿರುವಲ್ಲಿ ಸ್ವತ್ತಿನ ವಿಲೇವಾರಿಗೆ ಸಂಬಂಧಪಟ್ಟ ಆದೇಶಗಳನ್ನು ಹೊರಡಿಸುವ ಮತ್ತು ತಪ್ಪಿತಸ್ಥ ವ್ಯಕ್ತಿಯಿಂದ ದಂಡವನ್ನು ವಸೂಲು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಯಾಗಿರುವುದರಿಂದ, ಅವರು ಚುನಾವಣಾ ಪಟ್ಟಿಯ ತಯಾರಿಕೆ ಮತ್ತು ನಿರ್ವಹಣೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಸಹಾಯಕ ಚುನಾವಣಾ ಅಧಿಕಾರಿಯ ಸಾಮರ್ಥ್ಯದಲ್ಲಿ ತಾಲೂಕಿನ ಚುನಾವಣಾ ಆಡಳಿತ ಯಂತ್ರವನ್ನು ಮುನ್ನಡೆಸುತ್ತಾರೆ. ಅಲ್ಲದೆ, ಭೂ ನ್ಯಾಯಮಂಡಳಿ ಕಾರ್ಯದರ್ಶಿಯಾಗಿ, ೧೯೬೬ರ ಕರ್ನಾಟಕ ಹಿಡುವಳಿಗಳ ಕ್ರೋಡೀಕರಣ ಮತ್ತು ಜಮೀನುಗಳ ಪುನರ್ ವಿಭಜನೆ (ಫ್ರಾಗ್‌ಮೆಂಟೇಷನ್) ಅಧಿನಿಯಮ, ೧೯೫೧ರ ಕರ್ನಾಟಕ ಗಿರವಿದಾರರ ಅಧಿನಿಯಮ, ೧೯೫೨ರ ಕರ್ನಾಟಕ ಜನನ ಮತ್ತು ಮರಣಗಳ ವಿಶೇಷ ನಿಯಮಗಳು, ೧೯೬೯ರ ಸಾರ್ವಜನಿಕ ವಿನೋದ, ಸಾರ್ವಜನಿಕ ವಿನೋದದ ಸ್ಥಳಗಳ ನಿಯಂತ್ರಣ ಆದೇಶ ಇತ್ಯಾದಿಯ ಮೇರೆಗೆ ಕೆಲವು ಅಧಿಕಾರಗಳನ್ನು ಚಲಾಯಿಸುತ್ತಾರೆ. ಆದಾಯ, ಜಾತಿ, ಉತ್ತರದಾಯಿತ್ವ, ಜನನ ಮತ್ತು ಮರಣ, ನೆಲಸಿಕೆ (ಡೊಮಿಸೈಲ್), ದಿವಾಳಿ ಮುಂತಾದ ಪ್ರಮಾಣಪತ್ರಗಳನ್ನು ನೀಡುವ ಅಧಿಕಾರಗಳನ್ನು ನಿರ್ವಹಿಸುತ್ತಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳ ಕೃಷಿ ಸಾಲ ಮತ್ತು ಕೆಲವು ಸಣ್ಣ ಪ್ರಮಾಣದ ಸಾಲಗಳ ವಸೂಲಾತಿಯ ಜವಾಬ್ದಾರಿಯು ತಹಸೀಲದಾರರ ಅಧಿಕಾರ ವ್ಯಾಪ್ತಿಗೆ ಬರುತ್ತದೆ.

### ಕಂದಾಯ ನಿರೀಕ್ಷಕರು

ಹೋಬಳಿ ಮಟ್ಟದಲ್ಲಿ ಕಂದಾಯ ಅಧಿಕಾರಿಗಳ ಶ್ರೇಣಿಯಲ್ಲಿ ತಹಸೀಲ್ದಾರರ ನಿಕಟ ಕೆಳಗಿನ ಅಧಿಕಾರಿ ಉಪ ತಹಸೀಲ್ದಾರ್‌ರು ಹಾಗೂ ಕಂದಾಯ ನಿರೀಕ್ಷಕರು ಆಗಿರುತ್ತಾರೆ. ಅವರು ತಹಸೀಲ್ದಾರರ ಕಾರ್ಯನಿರ್ವಹಣೆಯಲ್ಲಿ ಸಹಾಯಕರಾಗಿರುತ್ತಾರೆ. ಜಿಲ್ಲೆಯ ಪ್ರತಿಯೊಂದು ತಾಲೂಕನ್ನು ಹೋಬಳಿಗಳ

ಸಂಖ್ಯೆ ಅಥವಾ ಕಂದಾಯ ವೃತ್ತಗಳ ಸಂಖ್ಯೆಯೆಂದು ವಿಂಗಡಿಸಲಾಗಿದೆ. ಪ್ರತಿಯೊಂದು ವೃತ್ತವು ನಿರ್ದಿಷ್ಟ ಗ್ರಾಮಗಳನ್ನು ಒಳಗೊಂಡಿರುತ್ತದೆ. ವೃತ್ತವು, ೧೯೬೪ರ ಕರ್ನಾಟಕ ಭೂಕಂದಾಯ ಅಧಿನಿಯಮದ ಪ್ರಕರಣ ನಾಲ್ಕರಲ್ಲಿ ನಿರ್ದಿಷ್ಟಪಡಿಸಿದ ಆಡಳಿತ ಘಟಕಗಳಲ್ಲಿ ಒಂದಾಗಿದೆ. ಒಬ್ಬ ಕಂದಾಯ ನಿರೀಕ್ಷಕರನ್ನು ಕಂದಾಯ ವೃತ್ತದ ಗಾತ್ರವನ್ನು ಅವಲಂಬಿಸಿ, ನೇಮಕ ಮಾಡಲಾಗುತ್ತದೆ ಮತ್ತು ಅವರು ಸಾಧಾರಣ ೧೦ ರಿಂದ ೨೦ ಗ್ರಾಮಲೆಕ್ಕಿಗರಿಗೆ ಮುಖ್ಯಸ್ಥರಾಗಿರುತ್ತಾರೆ. ಅವರು ಗ್ರಾಮಲೆಕ್ಕಿಗ ಮತ್ತು ತಹಸೀಲ್ದಾರರೊಂದಿಗೆ ಸತತ ಸಂಪರ್ಕ ಇಟ್ಟುಕೊಳ್ಳಬೇಕು. ಅಲ್ಲದೆ, ಅವರು ೧೯೬೪ರ ಕರ್ನಾಟಕ ಭೂಕಂದಾಯ ಅಧಿನಿಯಮ ಮತ್ತು ೧೯೬೧ರ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ ಮತ್ತು ಈ ಅಧಿನಿಯಮಗಳ ಉಪಬಂಧಗಳ ಮೇರೆಗೆ ಯಾವುದೇ ಇತರ ಕಾನೂನಿನ ಮೇರೆಗೆ ನಿರ್ದಿಷ್ಟಪಡಿಸಿದ ಎಲ್ಲ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಕಂದಾಯ ಕಾರ್ಯಾಧಿಕಾರಿಯಾಗಿ, ಕಂದಾಯ ಸಂಗ್ರಹಣೆಯು ಅವರ ಪ್ರಮುಖ ಕರ್ತವ್ಯವಾಗಿದ್ದರೂ, ಅವರನ್ನು ಸಾಮಾನ್ಯ ಆಡಳಿತ ಮತ್ತು ಅಭಿವೃದ್ಧಿ, ಆರೋಗ್ಯ, ಚುನಾವಣೆ, ಜನಗಣತಿ ಮೊದಲಾದ ಇಲಾಖೆಗಳಿಗೆ ಸಂಬಂಧಪಟ್ಟ ಇತರ ಆಡಳಿತಾತ್ಮಕ ಪ್ರಭಾರಿ ಕಾರ್ಯಗಳನ್ನು ನಿರ್ವಹಿಸಲು ತಹಸೀಲ್ದಾರ್ ಅವರು ನಿಯೋಜಿಸಬಹುದಾಗಿದೆ. ಅದರ ಜೊತೆಗೆ, ಅವರು ಗ್ರಾಮಲೆಕ್ಕಿಗರ ಕೆಲಸದ ಮೇಲ್ವಿಚಾರಣೆಯನ್ನು ನಡೆಸುತ್ತಾರೆ. ಅದಕ್ಕಾಗಿ ಅವರು ಗ್ರಾಮಲೆಕ್ಕಿಗರಿಂದ ಮಾಡಲಾದ ಕಂದಾಯ ವಸೂಲಿಯು ಕ್ರಮಬದ್ಧವಾಗಿದೆಯೆ ಹಾಗೂ ತಿಂಗಳ ೨೫ಕ್ಕೆ ಮುಂಚಿತವಾಗಿ ಖಜಾನೆಗೆ ಅದನ್ನು ಜಮಾ ಮಾಡಲಾಗುತ್ತಿದೆಯೆ ಎಂಬ ವಿಷಯಗಳನ್ನು ಖಚಿತ ಪಡಿಸಿಕೊಳ್ಳಬೇಕು. ಹಕ್ಕು ಬದಲಾವಣೆ ಮತ್ತು ವಾರೀಸು ಹಕ್ಕು ಬದಲಾವಣೆ ಮಾಡುವ ಅಧಿಕಾರವು ಕರ್ನಾಟಕ ಭೂಕಂದಾಯ ಅಧಿನಿಯಮದ ಮೇರೆಗೆ ಕಂದಾಯ ನಿರೀಕ್ಷಕರು ಹೊಂದಿದ್ದು ಈ ಎಲ್ಲ ಪ್ರಕರಣಗಳಲ್ಲಿ ಅವರ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಹಾಯಕ ಆಯುಕ್ತರಿಗೆ ಸಲ್ಲಿಸಲು ಅವಕಾಶವಿದೆ. ಕಂದಾಯ ನಿರೀಕ್ಷಕರು ಗ್ರಾಮಲೆಕ್ಕಿಗರು ಹಕ್ಕುಗಳ ದಾಖಲೆ ರಿಜಿಸ್ಟರ್ ಮತ್ತು ಹಕ್ಕು ಬದಲಾವಣೆ ರಿಜಿಸ್ಟರ್ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಸಾರ್ವಜನಿಕ ತನಿಖೆಗಾಗಿ ಅರ್ಜಿದಾರರಿಗೆ ದಾಖಲೆಗಳ ಪ್ರಮಾಣಿತ ಪ್ರತಿಗಳನ್ನು ನೀಡುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಅಭಿವೃದ್ಧಿ ಕರ, ನೀರು ತೆರಿಗೆಗಳು ಫಲಾನುಭವಿಗಳಿಂದ ಸರ್ಕಾರದ ಸಾಲ ಮತ್ತು ಮುಂಗಡಗಳ ಬಾಕಿಯ ವಸೂಲಿ ಮುಂತಾದಂಥ ಕೆಲಸಗಳಿಗೆ ಗಮನಹರಿಸಬೇಕು. ಭೂಮಿ ನೀಡಿಕೆ, ಭೂ ಸ್ವಾಧೀನತೆ ಮತ್ತು ವೃದ್ಧಾಪ್ಯ ವಿಶ್ರಾಂತಿ ವೇತನ, ವಾರಸು, ಉತ್ತರದಾಯಿತ್ವದಂಥ ಇತರ ವಿಷಯಗಳ ಬಗೆಗೆ ದಾಖಲೆಗಳನ್ನು ಸಿದ್ಧಪಡಿಸಲು ಅವರು ಜವಾಬ್ದಾರರಾಗಿರುತ್ತಾರೆ.

## ಗ್ರಾಮಾಧಿಕಾರಿ

ಕೆಲವು ವರ್ಷಗಳ ಹಿಂದಿನವರೆಗೂ ಮದರಾಸು ರಾಜ್ಯಕ್ಕೆ ಸೇರಿದ್ದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಸಂಸ್ಥೆಯನ್ನು ಹಿಂದಿನ ಬಾರಬಲೂತಿ ಪದ್ಧತಿಯ ಉಪಬಂಧಗಳ ಮೇರೆಗೆ ಆನುವಂಶಿಕವಾಗಿ ಬರುತ್ತಿದ್ದ ಗ್ರಾಮಾಧಿಕಾರಿಗಳಿಗೆ ವಹಿಸಲಾಗುತ್ತಿತ್ತು. ಇವರನ್ನು ಗ್ರಾಮ ಪಟೇಲರು ಎಂದು ಕರೆಯಲಾಗುತ್ತಿತ್ತು. ಈ ಪದ್ಧತಿಗನುಗುಣವಾಗಿ, ಸಮುದಾಯದಲ್ಲಿನ ಪ್ರತಿಯೊಂದು ಗ್ರಾಮವು ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟರಾಗಿ ಗೌಡ ಅಥವಾ ಪಟೇಲನನ್ನು ಹೊಂದಿದ್ದವು. ಇಡೀ ಗ್ರಾಮದ ಅಳತೆ, ನಕ್ಷೆಗಳ ದಾಖಲಾತಿ ಶ್ಯಾನುಭೋಗರಲ್ಲಿ ಇರುತ್ತಿತ್ತು. ಭೂಮಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅವರಿಂದಲೇ ಪಡೆಯಬೇಕಿತ್ತು. ಶಾನುಭೋಗ ಅಥವಾ ಕರಣಮ್ ರಿಜಿಸ್ಟ್ರಾರರಾಗಿದ್ದರು. ತಲಾರಿ ಅಥವಾ ಉಗ್ರಾಣಿ ಗ್ರಾಮ ಅಥವಾ ಬೆಳೆಗಳ ಕಾವಲುಗಾರರಾಗಿದ್ದರು. ಉಗ್ರಾಣಿಗಳು, ಸರ್ಕಾರಿ ಅಧಿಕಾರಿಗಳು ಮತ್ತು ಪ್ರಮುಖ ಪ್ರವಾಸಿಗಳಿಗೆ ಮಾರ್ಗದರ್ಶಿಯಂತೆ ಕಾರ್ಯನಿರ್ವಹಿಸಬೇಕಾಗುತ್ತಿತ್ತು. ಎಲ್ಲ ಗಡಿವಿವಾದಗಳಲ್ಲಿ ಉಗ್ರಾಣಿಗಳ ಸಾಕ್ಷ್ಯವನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತಿತ್ತು. ತಲಾರಿಗಳು ಕಳ್ಳರನ್ನು ಹಿಡಿಯುವುದು, ಸಂಶಯಾಸ್ಪದ ಆಗಂತುಕರ ಮೇಲೆ ನಿಗಾ ಇಡುವುದರಿಂದಾಗಿ, ಅವರನ್ನು ಬೇಹುಗಾರರೆಂದು ವರ್ಣಿಸಲಾಗಿರುತ್ತದೆ.

ಆದರೆ ೧೯೭೦ರ ನಿಯಮಗಳ ಮೇರೆಗೆ ಆನುವಂಶಿಕ ಪಟೇಲಿಕೆ ಮತ್ತು ಶಾನುಭೋಗಿಕೆಯು ರದ್ದಾಗಿರುವುದರಿಂದ, ಗ್ರಾಮ ಆಡಳಿತವನ್ನು ಹೊಸದಾಗಿ ಸೃಜಿಸಲಾದ ಗ್ರಾಮಲೆಕ್ಕಿಗರಿಗೆ ವಹಿಸಲಾಯಿತು. ಅವರು ಗ್ರಾಮಮಟ್ಟದಲ್ಲಿ ಕೆಳದರ್ಜೆಯ ರೆವಿನ್ಯೂ ಅಧಿಕಾರಿಯಾಗಿರುತ್ತಾರೆ. ಗ್ರಾಮಲೆಕ್ಕಿಗರು ಗ್ರಾಮೀಣ ಕಂದಾಯ ದಾಖಲೆಗಳ ಅಭಿಲೇಖಕರಾಗಿದ್ದು, ಆಡಳಿತ ಸರಪಣಿಯಲ್ಲಿ ಕೊನೆಯ ಕೊಂಡಿಯಾಗಿದ್ದಾರೆ ಕೆಲವೊಮ್ಮೆ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಗ್ರಾಮಸಹಾಯಕ ಅಥವಾ ಗ್ರಾಮಸೇವಕ ಭೂಮಾಪನ ಕೆಲಸದಲ್ಲಿ ಗ್ರಾಮಲೆಕ್ಕಿಗರಿಗೆ ನೆರವಾಗುತ್ತಿದ್ದು, ಉಗ್ರಾಣಿ ಅಥವಾ ತಲಾರಿಗೆ ಬದಲಾಗಿ ಸಂದೇಶವಾಹಕರಂತೆ ಕೆಲಸ ಮಾಡುತ್ತಾರೆ.

## ಗ್ರಾಮಲೆಕ್ಕಿಗ

ಗ್ರಾಮಲೆಕ್ಕಿಗರ ಅಧಿಕಾರವು ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಗ್ರಾಮಲೆಕ್ಕಿಗರು ತಮ್ಮ ಹೋಬಳಿಗಳ ಕಂದಾಯ ನಿರೀಕ್ಷಕರ ಮಾರ್ಗದರ್ಶನದಲ್ಲಿ ಕೆಲಸ ಮಾಡಬೇಕಿರುತ್ತದೆ. ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮಲೆಕ್ಕಿಗರನ್ನು ನೇಮಿಸಲಾಗುತ್ತದೆ. ಅವರು ೧೯೬೪ರ ಕರ್ನಾಟಕ ಭೂ ಕಂದಾಯ ಅಧಿನಿಯಮ ಅಥವಾ ತತ್ಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಗೊತ್ತುಪಡಿಸಿದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವರು ಸರ್ಕಾರವು ನಿರ್ದಿಷ್ಟಪಡಿಸಿದ ಎಲ್ಲ ರಿಜಿಸ್ಟರ್‌ಗಳನ್ನು ಮತ್ತು ಇತರ ದಾಖಲೆಗಳನ್ನು ನಿರ್ವಹಿಸಿಕೊಂಡು ಬರಬೇಕು. ದಾಖಲೆಗಳೆಂದರೆ ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಅಗತ್ಯವಾದ ನೋಟೀಸುಗಳು, ಸಾಕ್ಷ್ಯಗಳು, ಮಹಜರುಗಳು ಅಥವಾ ವರದಿಗಳಾಗಿರಬಹುದು. ಗ್ರಾಮಲೆಕ್ಕಿಗರು ಕಂದಾಯ ನಿರೀಕ್ಷಕರ (Revenue Inspector) ನೇರ ಮೇಲ್ವಿಚಾರಣೆ ಮತ್ತು ನಿಯಂತ್ರಣದಡಿ ಇರುತ್ತಾರೆ. ಗ್ರಾಮಲೆಕ್ಕಿಗರು ಇರಬೇಕಾದ ಕೇಂದ್ರ ಕಚೇರಿಯನ್ನು ಉಪ ಆಯುಕ್ತರು ಗೊತ್ತುಪಡಿಸಬೇಕು. ಗ್ರಾಮಮಟ್ಟದಲ್ಲಿ ಇವರು ಕಂದಾಯ ಆಡಳಿತದ ಪ್ರಮುಖ ಅಧಿಕಾರಿಯಾದ್ದರಿಂದ ಗ್ರಾಮಲೆಕ್ಕಿಗರು ತಮ್ಮ ಕಂದಾಯವೃತ್ತದ ಕೇಂದ್ರಸ್ಥಾನದಲ್ಲೇ ವಾಸಿಸಬೇಕಾಗುತ್ತದೆ. ಪಂಚಾಯಿತಿ ಆದಾಯವು ವರ್ಷವೊಂದಕ್ಕೆ ರೂ.೧೨,೦೦೦/- ಕ್ಕಿಂತ ಕಡಿಮೆಯಿರುವಲ್ಲಿ ಅಥವಾ ಪಂಚಾಯಿತಿ ಕಾರ್ಯದರ್ಶಿಯು ನೇಮಕವಾಗದಿರುವಲ್ಲಿ, ಗ್ರಾಮಲೆಕ್ಕಿಗರು ಪದನಿಮಿತ್ತ ಪಂಚಾಯಿತಿ ಕಾರ್ಯದರ್ಶಿಯಾಗಿಯೂ ಕೆಲಸ ನಿರ್ವಹಿಸುತ್ತಾರೆ. ಪಂಚಾಯಿತಿ ಕಾರ್ಯದರ್ಶಿಯಾಗಿ ಅವರು ಗ್ರಾಮಮಟ್ಟದಲ್ಲಿ ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ನಿರ್ಣಯಗಳ ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರರಾಗಿರುತ್ತಾರೆ. ೧೯೮೩ರಲ್ಲಿ ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕು ಪಂಚಾಯಿತಿ ಸಮಿತಿಗಳು, ಮಂಡಲ್ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮದ ಪ್ರಾರಂಭದೊಂದಿಗೆ ಈ ವ್ಯವಸ್ಥೆಯು ಕೊನೆಗೊಂಡಿತು. ಗ್ರಾಮಲೆಕ್ಕಿಗರು ಈ ಉದ್ದೇಶಕ್ಕಾಗಿ ನಿಯೋಜಿಸಲಾದಂಥ ಕಂದಾಯ ನಿರೀಕ್ಷಕ, ತಹಸೀಲ್ದಾರ್ ಮತ್ತು ಇತರ ವರಿಷ್ಠ ಅಧಿಕಾರಿಗಳ ಆದೇಶಗಳನ್ನು ಕಾರ್ಯರೂಪಕ್ಕೆ ತರಬೇಕು. ಗ್ರಾಮಲೆಕ್ಕಿಗನು ತನ್ನ ವೃತ್ತದ (೨/೩ ಗ್ರಾಮಗಳ ವ್ಯಾಪ್ತಿ) ಗ್ರಾಮಗಳ ಭೂಕಂದಾಯ ಮತ್ತು ಇತರ ಸರ್ಕಾರಿ ಬಾಕಿಗಳನ್ನು ವಸೂಲಿ ಮಾಡುವ ಕರ್ತವ್ಯ ನಿರ್ವಹಿಸುತ್ತಾನೆ. ರೈತರು ಹೊಂದಿರುವ ಜಮೀನುಗಳ ಪಹಣಿ ಪತ್ರಿಕೆ (ಆರ್‌ಟಿಸಿ) ಗಳನ್ನು ಗ್ರಾಮಲೆಕ್ಕಿಗರು ನಿರ್ವಹಿಸಬೇಕಿದ್ದು, ಪ್ರತೀವರ್ಷ ರೈತರು ಬೆಳೆಯುವ ಬೆಳೆಗಳ ವಿವರ, ಪ್ರಮಾಣಗಳ ವಿವರಗಳನ್ನು, ಹಾಗೆಯೇ ಜಮೀನಿನಲ್ಲಿರುವ ಮರಗಳ, ನೀರಿನ ಆಶ್ರಯದ ವಿವರಗಳನ್ನು ದಾಖಲಿಸಿಡಬೇಕಾಗುತ್ತದೆ.

## ನಾಡಕಚೇರಿ

ಕಂದಾಯ ಆಡಳಿತವನ್ನು ವಿಕೇಂದ್ರೀಕರಣಗೊಳಿಸುವ ದೃಷ್ಟಿಯಿಂದ ಮತ್ತು ಅಧಿಕಾರ ಅಧಿಕವಾಗಿರುವಂಥ ತಾಲೂಕು ಕಚೇರಿಗಳಲ್ಲಿನ ಕಾರ್ಯದ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ೧೯೮೨ರಲ್ಲಿ ಪ್ರಾಯೋಗಿಕ ಆಧಾರದ ಮೇಲೆ ನಾಡಕಚೇರಿ ಅಥವಾ ಹೋಬಳಿ ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲಾಯಿತು. ತಹಸೀಲ್ದಾರರ ಹಲವಾರು ಜವಾಬ್ದಾರಿಯುತ ಕಾರ್ಯಗಳನ್ನು ನಾಡಕಚೇರಿಗೆ

ಒಂಬತ್ತು ಪ್ರಕಾರ್ಯಗಳನ್ನಾಗಿ ವಿಂಗಡಿಸಿ ಹಸ್ತಾಂತರಿಸಲಾಯಿತು. ಆಯ್ದ ಕಂದಾಯ ವೃತ್ತಗಳಲ್ಲಿ ತಲಾ ಎರಡು ನಾಡಕಚೇರಿಗಳು ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕೆಲಸ ಮಾಡುತ್ತಿವೆ. ನಾಡಕಚೇರಿ ಪದ್ಧತಿಯು ತಹಸೀಲ್ದಾರನ ಕೆಲವು ಅಧಿಕಾರವನ್ನು ದೈನಂದಿನ ಕೆಲಸಗಳನ್ನು ನೋಡಿಕೊಳ್ಳುವ ಉಪತಹಸೀಲ್ದಾರರಿಗೆ ಹಸ್ತಾಂತರಿಸಲು ಅವಕಾಶ ಒದಗಿಸಿದೆ. ಇದರಿಂದಾಗಿ ಗ್ರಾಮೀಣ ಜನರು ವಿಶೇಷವಾಗಿ ರೈತಾಪಿ ಜನರು ತಾಲೂಕು ಕೇಂದ್ರ ಕಚೇರಿಗೆ ಹೋಗದೆಯೇ ಹೋಬಳಿ ಮಟ್ಟದಲ್ಲಿಯೇ ತಮ್ಮ ಕೆಲಸವನ್ನು ಶೀಘ್ರವಾಗಿ ಮಾಡಿಕೊಳ್ಳುವ ಸೌಲಭ್ಯವು ಇದರಿಂದ ಕಲ್ಪಿತವಾಗಿದೆ. ಈ ಪದ್ಧತಿಯಂತೆ ನಾಡಕಚೇರಿಗೆ ಉಪ ತಹಸೀಲ್ದಾರರು ಮುಖ್ಯಸ್ಥರಾಗಿದ್ದು, ಅವರಿಗೆ ಕನಿಷ್ಠ ಸಿಬ್ಬಂದಿಯನ್ನು ಒದಗಿಸಲಾಗಿದೆ. ನಾಡಕಚೇರಿ ಪದ್ಧತಿಯ ಮೇರೆಗೆ ಮುಂದೆ ತಿಳಿಸಿರುವ ತಹಸೀಲ್ದಾರರ ಅಧಿಕಾರಗಳನ್ನು ಉಪ ತಹಸೀಲ್ದಾರರಿಗೆ ಹಸ್ತಾಂತರಿಸಲಾಗಿದೆ. ವೃದ್ಧಾಪ್ಯ ವೇತನದ ಮಂಜೂರಾತಿ, ದೈಹಿಕ ಅಂಗವೈಕಲ್ಯ ಭತ್ಯದ ಮಂಜೂರಾತಿ, ಅಗ್ನಿದುರಂತಕ್ಕೆ ತುತ್ತಾದವರಿಗೆ ಪರಿಹಾರ ನೀಡಿಕೆ, ದಂಡಗಳನ್ನು ಹಾಕುವುದು, ಹಕ್ಕು ಬದಲಾವಣೆ ವಿಲೇವಾರಿ, ಸೀಮೆಎಣ್ಣೆ ಮತ್ತು ಆಹಾರ ಧಾನ್ಯಗಳ ಶೋಧನೆ ಮತ್ತು ಮುಟ್ಟುಗೋಲು ಹಾಕಿಕೊಳ್ಳುವಿಕೆ ಮತ್ತು ತಪ್ಪಿತಸ್ಥರಿಗೆ ದಂಡನೆ, ಸರ್ಕಾರಿ ಬಾಕಿಗಳ, ಇರಸಾಲುಗಳ ವಸೂಲಿ ಮತ್ತು ಡಿಸಿಬಿ ಲೆಕ್ಕಗಳ ನಿರ್ವಹಣೆ, ೧೯೬೫ರ ಕರ್ನಾಟಕ ನೀರಾವರಿ ಅಧಿನಿಯಮದ ಮೇರೆಗೆ ಅಭಿವೃದ್ಧಿ ವಂತಿಗೆ, ನೀರಿನ ದರ ವಿಧಿಸುವುದು ಮತ್ತು ಪ್ರಮಾಣಿತ ಪ್ರತಿಗಳನ್ನು ನೀಡುವುದು. ನಾಡಕಚೇರಿಗಳು ಇರುವ ಹೋಬಳಿಗಳಲ್ಲಿ ಕಂದಾಯ ಪರಿವೀಕ್ಷಕರು ನಾಡಕಚೇರಿ ಉಪತಹಸೀಲ್ದಾರರ ಕೈಕೆಳಗೆ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ತಾಲೂಕು ಕಚೇರಿಯಿಂದ ಕಡತಗಳು ನಾಡಕಚೇರಿಗೆ ಬಂದು, ಬಳಿಕ ಕಂದಾಯ ಪರಿವೀಕ್ಷಕರಿಂದ ಅಗತ್ಯ ವರದಿಗಳನ್ನು ಪಡೆದುಕೊಳ್ಳಲಾಗುತ್ತದೆ.

## ಕಂದಾಯ ಆಡಳಿತ

ಪ್ರಾಚೀನ ಕಾಲದಿಂದಲೂ ರಾಜ್ಯದ ರಾಜಸ್ವದ ಮೂಲ ಆದಾಯದಲ್ಲಿ ಭೂಕಂದಾಯವು ಪ್ರಮುಖ ಪಾತ್ರವನ್ನು ವಹಿಸುತ್ತಲಿದೆ. ಬ್ರಿಟಿಷರ ಆಡಳಿತಕ್ಕೆ ಮೊದಲು ಆಳ್ವಿಕೆ ಮಾಡಿದ ಸ್ಥಳೀಯ ರಾಜರುಗಳ ತಮ್ಮ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಯನ್ನು ಮೂಲ ಉದ್ದೇಶವಾಗಿಟ್ಟುಕೊಂಡು ವ್ಯವಸ್ಥಿತ ಆಡಳಿತ ಯಂತ್ರವನ್ನು ಕಾರ್ಯರೂಪಕ್ಕೆ ತಂದಿದ್ದು ಐತಿಹಾಸಿಕವಾಗಿ ತಿಳಿದುಬರುತ್ತದೆ. ಹೀಗಾಗಿ ಪ್ರಸಕ್ತ ಚಾಲ್ತಿಯಲ್ಲಿರುವ ಕಂದಾಯ ವ್ಯವಸ್ಥೆಗೆ ಚಾರಿತ್ರಿಕ ಹಿನ್ನೆಲೆ ಇದೆ. ಜಿಲ್ಲೆಯಲ್ಲಿ ಕಂಡುಬರುವ ಕೆಲವು ಶಾಸನಗಳಿಂದ, ಆಳುಪರ ಕಾಲದಲ್ಲಿ ಕೃಷಿ ಸಾಮಗ್ರಿಗಳ ಮೇಲೆ ಹಣದ ರೂಪದಲ್ಲಿ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಅಲ್ಲದೆ, ಸ್ಥಳಸುಂಕ ಮತ್ತು ಜಲಸುಂಕಗಳನ್ನು ವಿಧಿಸಲಾಗುತ್ತಿತ್ತು. ಮೀನುಗಾರಿಕೆ ಮತ್ತು ನೌಕಾ ವ್ಯಾಪಾರಗಳು ಕರವಿಧಿಗೆ ಒಳಪಟ್ಟಿದ್ದವು. ಮಧ್ಯಕಾಲೀನ ಮತ್ತು ನಂತರದ ಅವಧಿಯಲ್ಲಿ ಹಲವು ರೀತಿಯ ತೆರಿಗೆಗಳಿದ್ದು, ಅದನ್ನು ಅನ್ಯರೂಪದಲ್ಲಿ ಅಥವಾ ನಗದು ರೂಪದಲ್ಲಿ ಸಂದಾಯ ಮಾಡಲಾಗುತ್ತಿದ್ದ ಬಗ್ಗೆ ಶಾಸನಗಳಿಂದ ವ್ಯಕ್ತವಾಗುತ್ತದೆ.

ಕೃಷಿ ಭೂಮಿಯ ಒಟ್ಟು ಉತ್ಪನ್ನದ ಆರನೆ ಒಂದರಷ್ಟು (೧/೬) ಭಾಗವನ್ನು ಸರ್ಕಾರಕ್ಕೆ ಕಂದಾಯದ ರೂಪದಲ್ಲಿ ಸಲ್ಲಿಸಬೇಕಾಗಿತ್ತು ಮತ್ತು ಈ ಪಾಲಿಗೆ ಸುಮಾರು ಶೇಕಡಾ ೧೦ರಷ್ಟು ಸ್ಥಳೀಯ ಬೆಲೆಯನ್ನು ಸೇರಿಸಲಾಗುತ್ತಿತ್ತು. ವಿಜಯನಗರ ದೊರೆಯಾದ ಹರಿಹರರಾಯನ ಕಂದಾಯ ಕೈಪಿಡಿಯಲ್ಲಿ ಸರ್ಕಾರಿ ಪಾಲಾಗಿ ಉತ್ಪತ್ತಿಯ ನಾಲ್ಕನೆಯ ಒಂದು (೧/೪) ಭಾಗ ಬೆಳೆಯನ್ನು ಮತ್ತು ಸರ್ಕಾರದ ಖಜಾನೆಗೆ ಆರನೆಯ ಒಂದು ಭಾಗದ (೧/೬) ಬೆಳೆಯನ್ನು ತೆಗೆದುಕೊಳ್ಳಲು ಮತ್ತು ರಾಜ್ಯ ಖಜಾನೆಯಿಂದ ಸಂಗ್ರಹಿಸಿದ ಉಳಿದ ಬೆಳೆಯನ್ನು ಪೂಜಾರಿಗಳಿಗೆ ಮತ್ತು ದೇವಾಲಯಕ್ಕೆ ನೀಡಬೇಕಾದುದು ನಿಯಮವಾಗಿತ್ತು. ಈ ರೀತಿಯ ಕರನಿರ್ಧರಣೆಯು ೧೬೧೮ರ ವರೆಗೆ ಅಂದರೆ ಇಕ್ಕೇರಿಯ ನಾಯಕರ ಆಡಳಿತ ಆರಂಭವಾಗುವವರೆಗೆ ಯಾವುದೇ ಬದಲಾವಣೆಯಿಲ್ಲದೆ ಹಾಗೆಯೇ ರೂಢಿಯಲ್ಲಿತ್ತು. ೧೬೧೮ ಮತ್ತು ೧೬೬೦ರ ನಡುವಿನ ಅವಧಿಯಲ್ಲಿ ತೆಂಗು ಮತ್ತು ಇತರ ತೋಟದ ಬೆಳೆಗಳ ಮೇಲೆ ವಿಶೇಷ ತೆರಿಗೆಯನ್ನು ವಿಧಿಸಲಾಯಿತು.

೧೭೬೩ರಲ್ಲಿ ಪ್ರದೇಶವು ಹೈದರಾಲಿಯ ನಿಯಂತ್ರಣದಡಿ ಬಂದಾಗ, ೧೬೧೮ರ ಕರ ನಿರ್ಧರಣೆಗೆ ಹೆಚ್ಚುವರಿಯಾಗಿ ಪೂರ್ಣ ಶೇಕಡಾ ೫೦ರಷ್ಟು ತೆರಿಗೆಯನ್ನು ವಿಧಿಸುವ ಕ್ರಮ ಜಾರಿಗೆ ಬಂದಿತು. ನಂತರ, ಟೀಪುಸುಲ್ತಾನನ ಕಾಲದಲ್ಲಿ ಹಲವಾರು ಇತರ ಹೊಸ ಕರಗಳನ್ನು ವಿಧಿಸಲಾಯಿತು ಮತ್ತು ಇನಾಂಗಳನ್ನು ಹಿಂದಕ್ಕೆ ಪಡೆದುಕೊಳ್ಳಲಾಯಿತು. ಜಿಲ್ಲೆಯು ಬ್ರಿಟಿಷರ ಆಡಳಿತಕ್ಕೆ ಒಳಪಡುವ ಮೊದಲು, ಅಂದರೆ ಆಳುಪರ ಆಳ್ವಿಕೆಯಿಂದ ಟಿಪ್ಪುಸುಲ್ತಾನನ ಆಳ್ವಿಕೆಯ ತನಕವು ಕಂದಾಯ ಆಡಳಿತದಲ್ಲಿ ಸ್ಥಳೀಯರೇ ಅಧಿಕಾರಿಗಳಾಗಿರುತ್ತಿದ್ದರು ಮತ್ತು ಅವರ ಹುದ್ದೆಗಳು ವಂಶಪಾರಂಪರ್ಯವಾಗಿರುತ್ತಿದ್ದವು. ಹೀಗಾಗಿ ವಂಶಪಾರಂಪರ್ಯವಾಗಿ ಬಂದ ಶಾನುಭೋಗರು ಅಥವಾ ಕರಣಂಗಳು ತಮ್ಮ ಲೆಕ್ಕಪತ್ರಗಳನ್ನು ಕಪ್ಪು ಪುಸ್ತಕಗಳಲ್ಲಿ ಅಥವಾ ಕಡತಗಳಲ್ಲಿ ಸಿದ್ಧಪಡಿಸುತ್ತಿದ್ದರು. ಅದರಲ್ಲಿ ಭೂ ಹಿಡುವಳಿಯ ವಿವರ, ಬಿಡಿ (ಚಿಲ್ಲರೆ) ಹಿಡುವಳಿದಾರರಲ್ಲಾದ ಭೂ ವರ್ಗಾವಣೆ, ನಿರ್ಧರಿಸಿರುವ ತೆರಿಗೆ ಮತ್ತು ಸರ್ಕಾರಕ್ಕೆ ಸಂದಾಯಿಸಿರುವ ಕಿಸ್ತಿನ (ಕಂತಿನ) ಮೊಬಲಗು–ಈ ವಿವರಗಳು ಇರುತ್ತಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೭೯೯ರಲ್ಲಿ ಟಿಪ್ಪು ಸುಲ್ತಾನನ ಆಳ್ವಿಕೆಯ ಕೊನೆಯಿಂದ, ಜಿಲ್ಲೆಯಲ್ಲಿ ಬ್ರಿಟಿಷ್ ಆಡಳಿತವು ಆರಂಭಗೊಂಡಿದ್ದು ಒಂದು ಮುಖ್ಯವಾದ ಐತಿಹಾಸಿಕ ಘಟನೆಯಾಗಿದೆ. ಆಗ ಈ ಪ್ರದೇಶದ ಪ್ರಭಾರವನ್ನು ವಹಿಸಿಕೊಳ್ಳಲು ನಿಯುಕ್ತನಾದ ಥಾಮಸ್ ಮನ್ರೊ ಹೈದರ್ ಮತ್ತು ಟಿಪ್ಪು ನಿಗದಿ ಮಾಡಿದ್ದ ಕಂದಾಯ ದರ ರೈತರ ಮೇಲೆ ಭಾರಿ ಹೊರೆಯಂತೆ ಇತ್ತೆಂದು ಅಭಿಪ್ರಾಯಪಟ್ಟನು. ಆದ್ದರಿಂದ ಸಾಗುವಳಿ ಆಗುತ್ತಿರುವ ಸಮಸ್ತ ಜಮೀನಿನ ಮೇಲಿನ ತೆರಿಗೆ ಹೈದರನ ದಾಳಿಯ ಪ್ರಾರಂಭ ಕಾಲದಲ್ಲಿ ಜಾರಿಯಲ್ಲಿದ್ದ ಬಿದನೂರು ಅರಸರು ವಿಧಿಸಿದ್ದ ದರಕ್ಕಿಂತ ಅಧಿಕವಾಗಿರಕೂಡದೆಂದು ಮನ್ರೋ ರೆವಿನ್ಯೂ ಬೋರ್ಡ್‌ಗೆ ಶಿಫಾರಸ್ಸು ಮಾಡಿದನು (ಮೇ. ೧೮೦೦). ವಾಡಿಕೆಯಲ್ಲಿದ್ದ ಸುಂಕದ ದರಗಳಲ್ಲೂ ಕಡಿತ ಮಾಡಬೇಕೆಂದು ಅವನು ಸಲಹೆ ನೀಡಿದ್ದನು. ಅವನು ಮಾಡಿದ್ದ ಶಿಫಾರಸ್ಸುಗಳನ್ನು ಮದರಾಸ್ ಸರ್ಕಾರವು ಒಪ್ಪಿಕೊಂಡಿತ್ತಲ್ಲದೆ ೧೮೮೯ನೇ ಇಸವಿಯವರೆಗೂ ಉಳಿಸಿಕೊಂಡಿತ್ತು. ಇದರ ಪರಿಣಾಮವಾಗಿ ಆಗಿನ ಕೆನರಾ ಜಿಲ್ಲೆಯ ರೈತರು ವಾರ್ಷಿಕ ಭೂ ಕಂದಾಯದಲ್ಲಿ ಸುಮಾರು ೮೦,೦೦೦ ಸ್ಟಾರ್ ಪಗೋಡಾಗಳಷ್ಟು (ರೂ.೩,೨೦,೦೦೦) ಮೊತ್ತದ ರಿಯಾಯಿತಿ ಪಡೆದುಕೊಳ್ಳಲು ಸಾಧ್ಯವಾಯಿತು. ಬಿದನೂರಿನ ಅರಸರು ನಿಗದಿ ಮಾಡಿದ್ದ ಭೂ ಕಂದಾಯದ ಒಟ್ಟು ಮೊತ್ತ ೧೪,೩೪,೦೦೦ ಪಗೋಡಗಳಿಗಿಂತ ಹೆಚ್ಚಾಗಿರಲಿಲ್ಲ ಎನ್ನಲಾಗಿದೆ.

ಜಿಲ್ಲೆಯಲ್ಲಿ ೧೮೧೦ ರಿಂದ ೧೮೧೮ರ ವರೆಗಿನ ತೀರ್ವೆ ನಿಶ್ಚಯದ ವರದಿಗಳಲ್ಲಿ ಕಂದಾಯದ ಭಾರವನ್ನು ತಗ್ಗಿಸುವ ಅಗತ್ಯದ ಬಗ್ಗೆ ಆಗಾಗ ಪ್ರಸ್ತಾಪಿಸಲಾಗುತ್ತಿದ್ದುದು ವ್ಯಕ್ತವಾಗುತ್ತದೆ. ಈ ಕುರಿತು ಅಧ್ಯಯನ ನಡೆಸಿ ವಿಶೇಷ ವರದಿ ಸಲ್ಲಿಸುವಂತೆ ಕಂದಾಯ ಮಂಡಳಿಯು ಕಲೆಕ್ಟರ್ ರೀಡ್ ಅವರನ್ನು ಕೋರಿತು. ಅದರ ಪರಿಣಾಮವಾಗಿ ಮಿ.ರೀಡ್ ಕಲೆಕ್ಟರಾಗಿದ್ದ ಅವಧಿಯಲ್ಲಿ ಮನ್ರೊ ಹೇಳಿರುವ ಕೆಲವು ವಿಚಾರಗಳನ್ನು ಒಪ್ಪಿಕೊಂಡರೂ ಬೇರೆ ಬೇರೆ ಪ್ರದೇಶಗಳಿಗೆ ಸುಮಾರು ಪ್ರತಿಶತ ೪ ರಿಂದ ೭ರಷ್ಟು ತೀರ್ವೆ ಕಡಿತಗೊಳಿಸುವಂತೆ ರೆವಿನ್ಯೂ ಮಂಡಳಿಗೆ ಶಿಫಾರಸು ಮಾಡಿದನು. ಸರಕಾರ ನಿಗದಿಪಡಿಸಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ (ಹಳೆಯ ಪುತ್ತೂರು ತಾಲೂಕು ಹೊರತುಪಡಿಸಿ) ಕಂದಾಯ ದುಬಾರಿಯಾಯಿತೆಂದು ದೂರುಗಳು ಕೇಳಿಬಂದಾಗ ೧೮೧೯–೨೦ರಲ್ಲಿ ಬ್ರಿಟಿಷ್ ಆಡಳಿತದ ಆರಂಭದಿಂದ ಮಾಡಲಾದ ವಸೂಲಾತಿಯ ಸರಾಸರಿಯನ್ನು ಮುಂದಿನ ಕಂದಾಯ ನಿರ್ಧರಿಸಲು ಆಧಾರವಾಗಬೇಕೆಂದು ನಿಶ್ಚಯಿಸಿ ಸರ್ಕಾರ ಆ ವ್ಯವಸ್ಥೆಯನ್ನು ಜಾರಿಗೆ ತಂದಿತು. ಇದೇ 'ಸರಾಸರಿ' ತತ್ವದ ಅನ್ವಯ ಕಂದಾಯ ಯೋಗ್ಯ ಭೂಮಿಯನ್ನು 'ಭರ್ತಿ' ಮತ್ತು 'ಕಂಭರ್ತಿ'ಯೆಂದು ವಿಭಾಗಿಸಲಾಯಿತು. 'ಭರ್ತಿ'ಯೆಂದರೆ ಪೂರ್ಣ ಸರಾಸರಿ ತೆರಿಗೆಯನ್ನು ನೀಡುವ ಭೂಮಿ ಮತ್ತು 'ಕಂಭರ್ತಿ'ಯೆಂದು 'ಭರ್ತಿ'ಗೆ ಕಮ್ಮಿಯಿರುವ, ಅಂದರೆ, ಪೂರ್ಣ ಸರಾಸರಿ ತೆರಿಗೆಯನ್ನು ನೀಡದೇ ಇರುವ ಭೂಮಿ. 'ಕಂಭರ್ತಿ' ಭೂಮಿಯನ್ನು ಪುನ: ಮೂರು ವಿಭಾಗಗಳನ್ನಾಗಿ ಮಾಡಲಾಯಿತು. (ಅ) ವಾಯ್ದೆಭೂಮಿ: ಕಂತುಗಳ

ಪ್ರಕಾರ ಪೂರ್ಣ ಕಂದಾಯವನ್ನು ಕಟ್ಟುವ ಭೂಮಿ. (ಆ) ಮಂಡಳಿ ಶಿಫಾರಸು ಭೂಮಿ: ಕಂದಾಯವನ್ನು ಖಾಯಂ ಮಾಡುವಂತೆ ಶಿಫಾರಸು ಮಾಡಲ್ಪಟ್ಟ ಭೂಮಿ. (ಇ) ತನಿಖೆ ಭೂಮಿ: ಆದಾಯದ ಬಗ್ಗೆ ಇನ್ನೂ ತನಿಖೆಗೆ ಒಳಪಟ್ಟಿರುವ ಭೂಮಿ. ಆದರೆ ಸರಾಸರಿ ಪದ್ಧತಿಯೂ ತೃಪ್ತಿಕರವಾಗದೆ, ಆದಾಗಲೇ ಆರ್ಥಿಕ ಕುಸಿತದಿಂದ ಬಳಲಿದ್ದ ಜನರಿಗೆ ತೀರ್ವೆ ಸಲ್ಲಿಕೆ ಮತ್ತಷ್ಟು ತ್ರಾಸದಾಯಕವಾಗಿ ೧೮೩೧ರಲ್ಲಿ ಕರ ನಿರಾಕರಣಾ ಚಳವಳಿಯನ್ನು ಹೂಡಿದರೆಂಬುದು ಈ ಜಿಲ್ಲೆಯ ಕಂದಾಯ ಇತಿಹಾಸದಿಂದ ತಿಳಿದುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸ್ಥಿರಾಸ್ತಿಯ ಜಮೀನುಗಳಿಗೆ (ಎಸ್ಟೇಟುಗಳಿಗೆ) 'ವರ್ಗ' (ಲೀಫ್ ಅಕೌಂಟ್) (ಸಂಸ್ಕೃತದಲ್ಲಿ ಪುಟ ೧ ಎಂದು ಅರ್ಥ) ಎಂದು ಕರೆಯಲಾಗುವುದು. ವರ್ಗ ಎಂಬ ಶಬ್ದವು ಲೆಕ್ಕವಿಡಲಾದ ಹಿಡುವಳಿಯನ್ನು ತಿಳಿಸುತ್ತದೆ.

## ಕುಮ್ಕಿ ಹಕ್ಕುಗಳು

ಹಿಂದಿನ ಮದರಾಸ್ ರಾಜ್ಯದ ಕಂದಾಯ ಬೋರ್ಡಿನ ಸ್ಥಾಯಿ ಆದೇಶ (B.S.O) ನಂಬರ್ ೧೫ (೪) ರನ್ವಯ ೧೨೭೬ನೇ ಫಸಲಿ (ಜುಲೈ ೧ ರಿಂದ ಪ್ರಾರಂಭವಾಗುವ ಫಸಲಿ ವರ್ಷ) ಅಂದರೆ ಸುಮಾರು ೧೮೮೬ನೇ ಇಸವಿಯ ಹಿಂದಿನಿಂದಲೂ ತೀರ್ವೆ ಹೊರಿಸಿದ ಖಾತೆಯಲ್ಲಿ ಇದ್ದ ಭೂಮಿಗಳನ್ನು 'ಕದೀಂ ವರ್ಗ' ಭೂಮಿ ಎಂದು ಕರೆಯಲಾಗುತ್ತಿದೆ. ಇಂತಹ ಕದೀಂ ವರ್ಗ ಭೂಮಿಯ ಸುತ್ತಲೂ ೧೦೦ ಗಜ (೪೫೦ ಲಿಂಕ್ಸ್) ಗಳ ವ್ಯಾಪ್ತಿಯಲ್ಲಿ ಬರುವ ಸರಕಾರೀ ಅಧೀನ ಸ್ಥಳಗಳು ಆ ಕದೀಂ ವರ್ಗದಾರನ ಕುಮ್ಕಿ ಹಕ್ಕಿಗೆ ಒಳಪಡುತ್ತವೆ. ಈ ರೀತಿಯ ಕುಮ್ಕಿ ಹಕ್ಕು ಗ್ರಾಮದ ಹೊರಗೂ ರಸ್ತೆಯ ಮತ್ತೊಂದು ಬದಿಗೂ ಕೂಡಾ ವ್ಯಾಪಿಸಿರುತ್ತದೆ. ಹೀಗೆ ಸ್ವಾಧೀನ ಹೊಂದಿದ ಭೂಮಿಗೆ ಭೂಮಾಲೀಕ ತೀರ್ವೆ ತೆರಬೇಕಾಗಿರಲಿಲ್ಲ. ಈ ವ್ಯವಸ್ಥೆಯು ವಿಶೇಷವಾಗಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾತ್ರ ರೂಢಿಯಲ್ಲಿದ್ದುದು ವ್ಯಕ್ತವಾಗುತ್ತದೆ.

## ಭೂ ಹಿಡುವಳಿಯ ಕೆಲವು ಸೌಲಭ್ಯಗಳು

ಕುಮ್ಕಿದಾರನು ಈ ರೀತಿಯ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸಬಹುದು. ಕೃಷಿ ಹಾಗೂ ಮನೆ ವಾರ್ತೆ ಉಪಯೋಗಕ್ಕೆ ಸಂಬಂಧಿಸಿದಂತೆ ಸೌದೆ, ಸೊಪ್ಪು ಹಾಗೂ ಮೋಪುಗಳನ್ನು ಬೆಳೆಯಲು ಉಪಯೋಗಿಸುವ ಸೌಲಭ್ಯವನ್ನು ಹೊಂದಿದ್ದನು. ನೀರಾವರಿಗೆ ಸಂಬಂಧಿಸಿದಂತೆ ಕೆರೆ, ಬಾವಿ ತೋಡಬಹುದು. 'ಹಕ್ಕು ಸಾಗುವಳಿ' ಅಂದರೆ ತಾತ್ಕಾಲಿಕ ನೆಲೆಯಲ್ಲಿ ಖುಷ್ಕಿ ಬೆಳೆಯನ್ನು ಬೆಳೆಸಬಹುದು. ಕುಮ್ಕಿ ನೆಲೆಯ ಜಮೀನುಗಳಿಗೆ ತೀರ್ವೆ ಹೊರಿಸಿರುವುದಿಲ್ಲ. ಸುಳ್ಯ ತಾಲೂಕಿನ ಕೆಲವು ಗ್ರಾಮಗಳಲ್ಲಿ (ಹಿಂದೆ ಕೊಡಗು ರಾಜರಿಗೆ ಸೇರಿದ ಗ್ರಾಮಗಳಲ್ಲಿ) ಕುಮ್ಕಿ ಹಕ್ಕಿನ ಬದಲು, ಪಟ್ಟಾ ನಂಬರ್ ಹೊಂದಿರುವ 'ಹಕ್ಕಿನ ಭೂಮಿಗಳು' ಇವೆ. ಈ ಭೂಮಿಗಳಿಗೆ ತೀರ್ವೆ (ಎಕರೆಗೆ ೪ ಆಣೆ) ಕೂಡಾ ಹೊರಿಸಲಾಗಿದೆ. ಈ ಹಕ್ಕಿನ ಜಮೀನುಗಳನ್ನು ಕಾನ ಎಂದು ಕರೆಯಲಾಗುತ್ತಿದ್ದು, ಪಟ್ಟಾ ಭೂಮಿಗೆ ಕಾನ ಭೂಮಿಯು ತಾಗಿಕೊಂಡು ಇರಬೇಕೆಂದೇನು ಇಲ್ಲ. ಕಾನ ಭೂಮಿಯ ವಿಸ್ತೀರ್ಣವು ಪಟ್ಟಾ ಭೂಮಿಯ ವಿಸ್ತೀರ್ಣದ ಇಷ್ಟೇ ಪಾಲು ಇರಬೇಕೆಂದೂ ಇಲ್ಲ ಎಷ್ಟಾದರೂ ಇರಬಹುದು. ಬಾಣೆ ಭೂಮಿಯು ಕಾನ ಭೂಮಿಯಂತೆ ಇರುವ ಸ್ಥಳವಾಗಿದ್ದು ಈ ಸ್ಥಳಕ್ಕೆ ಖಾತಾ ನಂಬರ್ ಇರುವುದಿಲ್ಲ. ಕಂದಾಯವೂ ಇರುವುದಿಲ್ಲ. ಸಾಮಾನ್ಯವಾಗಿ ಬಾಣೆ ಭೂಮಿಯು ಪಟ್ಟಾ ಭೂಮಿಯ ಎರಡರಷ್ಟು ಇರುತ್ತದೆ. ಇದಕ್ಕೆ ಪ್ರತ್ಯೇಕ ದಾಖಲೆ ಇದ್ದು, ಕುಮ್ಕಿ ಹಕ್ಕಿನಂತೆ ಪಟ್ಟಾದಾರರು ಹಕ್ಕು ಹೊಂದಿರುತ್ತಾರೆ.

ವರ್ಗ ಅಥವಾ ಸ್ಥಿರಾಸ್ತಿ ವರ್ಗದಲ್ಲಿ ಪಾಲು ಉಂಟಾದಾಗ ಅದನ್ನು 'ಕುಡ್ತಲ' ಎಂದು ಕರೆಯುತ್ತಿದ್ದರು. ಎರಡು ವರ್ಗವನ್ನು ಮೂಲಿ ಮತ್ತು ಗೇಣಿಯೆಂದು ಅದನ್ನು ಮತ್ತೆ ಕದೀಂ ಮತ್ತು ಹೊಸಗೇಣಿ ಎಂದು ವರ್ಗೀಕರಿಸಲಾಗಿತ್ತು. ಮೂಲಿ ಅವಧಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವಂಥ ಅವಧಿ. ೧೮೮೯ಕ್ಕೂ ಮೊದಲು ವರ್ಗದ ಒಂದು ಭಾಗವನ್ನು ಖರೀದಿಸುವ ಅಥವಾ ಮಾರುವ ಸ್ವಾತಂತ್ರ್ಯ ವರ್ಗದಾರರಿಗಿತ್ತು. ಈ ವರ್ಗದಾರರು ತಮ್ಮ ಅನುಕೂಲತೆಗೆ ತಕ್ಕಂತೆ ಕಂದಾಯದ ಹೊರೆಯನ್ನು

ಹಂಚಿಕೊಳ್ಳುತ್ತಿದ್ದರು. ಇದು ಕಂದಾಯ ಅಸಮಾನತೆಗೆ ಕಾರಣವಾದ್ದರಿಂದ ಸರಕಾರವು ೧೮೯೯ರಲ್ಲಿ ವರ್ಗದ ಈ ತರಹದ ವಿಂಗಡಣೆಯನ್ನು ಅನಧಿಕೃತವೆಂದು ಘೋಷಿಸಿತು. ಸರಾಸರಿ ಕಂದಾಯ ಪದ್ಧತಿಯು ಜಾರಿಗೆ ಬಂದಾಗ ಸರಾಸರಿ 'ಚಿಟ್ಟಾ' ಅಥವಾ ಖಾತೆಯನ್ನು ರೂಪಿಸಲಾಯಿತು. ಪ್ರತಿಯೊಂದು ಹಿಡುವಳಿಗೆ ಸಮರ್ಪಕವಾಗಿ ರೂಪಿಸಿದ 'ಚಿಟ್ಟಾ'ದಲ್ಲಿ ಕಂದಾಯದ ಬದಲಾವಣೆ, ಭೂಮಿಯ ಅಳತೆಯ ವಿವರ, ಮೌಲ್ಯ ಮತ್ತು ಕಾಲಕಾಲಕ್ಕೆ ನಡೆಸಿದ ತಪಾಸಣೆಗಳ ವಿವರಗಳನ್ನು ನಮೂದಿಸುವುದು ರೂಢಿಯಲ್ಲಿತ್ತು. ಮೂಲಿ ಮತ್ತು ಮಿರಾಸ್, ಕಣವಟ್ಟಿ, ಸ್ವಸ್ಥ್ಯಂ ಮತ್ತು ಜಮಕಾರಿ ಅವಧಿಗಳು ಈ ಜಿಲ್ಲೆಯಲ್ಲಿ ಕಂಡುಬರುವ ರೈತನ ಪ್ರಾಚೀನ ಒಡೆತನ (ಮಾಲೀಕತ್ವ) ಹಕ್ಕುಗಳ ಅನೇಕ ಹೆಸರುಗಳಾಗಿವೆ. ಮಾಲೀಕರು ಪರಿತ್ಯಕ್ತರಾದಾಗ ಅಥವಾ ವಾರುಸುದಾರರು ಇಲ್ಲದಾದಾಗ ಅವು ಸಹಜವಾಗಿಯೇ ಸರ್ಕಾರದ ಆಸ್ತಿಗೆ ಹೈದರಾಲಿ ಮತ್ತು ಟೀಪು ಆಳ್ವಿಕೆಯ ಅವಧಿಯಲ್ಲಿ ಈ ರೀತಿ ಸರ್ಕಾರದ ವಶಕ್ಕೆ ಹೋದ ಪ್ರಕರಣಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಇದ್ದರೂ, ನಂತರ ಜಮೀನುಗಳಲ್ಲಿ ಹಳೆಯ ಗೇಣಿದಾರರೋ ಅಥವಾ ಹೊಸದಾಗಿ ಭೂಮಿಯನ್ನು ಪಡೆದುಕೊಂಡವರೋ ಬೇಸಾಯ ಮಾಡುತ್ತಿದ್ದರು. ಸರ್ಕಾರಕ್ಕೆ ಅವರು ನೇರವಾಗಿ ತೆರಿಗೆ ಸಲ್ಲಿಸುತ್ತಿದ್ದರು. ಆದ್ದರಿಂದ ಅವರನ್ನು ಸರ್ಕಾರದ ಗೇಣಿ ಎಂದು ಕರೆಯಲಾಗುತ್ತಿತ್ತು.

ಕುಂದಾಪುರ ವರ್ಗದಾರರ ಪಟ್ಟಿಯಲ್ಲಿ ಬರುವ ಒಕ್ಕಲುಗಳಲ್ಲಿ 'ಮೂಲಗೇಣಿದಾರ' ಮತ್ತು 'ಚಾಲಗೇಣಿದಾರ' ಎಂಬ ಎರಡು ವಿಧಗಳೇ ಪ್ರಮುಖವಾಗಿದ್ದವು. ಮೂಲಗೇಣಿ ಒಕ್ಕಲುತನವೆಂದರೇ ಶಾಶ್ವತ ಅವಧಿಯದ್ದು (Permanent Tenure) ಎಂದೂ, ಚಾಲಗೇಣಿ ಒಕ್ಕಲುತನವನ್ನು ಐಚ್ಛಿಕ ಒಕ್ಕಲುತನ (Tenancy at will) ಎಂದೂ ಅರ್ಥೈಸಲಾಗಿದೆ. ಚಾಲಗೇಣಿ ಪದ್ಧತಿಯಲ್ಲಿ ಭೂಮಾಲಿಕನು ತನ್ನ ಇಷ್ಟದಂತೆ ಒಕ್ಕಲನ್ನು ಭೂಮಿಯಿಂದ ಬಿಡಿಸಬಹುದಾಗಿತ್ತು. ಮೂಲಗೇಣಿದಾರನಾಗಲಿ ಅಥವಾ ಅವನ ಉತ್ತರಾಧಿಕಾರಿಗಳಾಗಲಿ ಗೇಣಿ ಭೂಮಿಯನ್ನು ಮಾರುವಂತಿರಲಿಲ್ಲ. ತುರ್ತಿನ ಸಂದರ್ಭದಲ್ಲಿ ಅದನ್ನು ಅಡಮಾನ ಮಾಡುವ ಅವಕಾಶವಿತ್ತು. ಈ ಪದ್ಧತಿಯಿಂದಾಗಿ ಭೂ ಮಾಲಿಕನ ಒಟ್ಟು ಹಿಡುವಳಿಯ ಮೂಲಗೇಣಿ ಭಾಗವು ಶಾಶ್ವತವಾಗಿ ಪ್ರತ್ಯೇಕಗೊಂಡಂತಾಗಿತ್ತು. ಒಂದು ವೇಳೆ ಒಕ್ಕಲಿಗೆ ಉತ್ತರಾಧಿಕಾರಿ ಇಲ್ಲದೇ ಇದ್ದರೆ ಆ ಭೂಮಿ ಒಡೆಯನಿಗೇ ಸಲ್ಲುತ್ತಿತ್ತು. ಈ ಎರಡೂ ಒಕ್ಕಲುತನಗಳ ಜತೆಗೆ ವಾಯಿದೆಗೇಣಿ ಮತ್ತು ನ್ಯಾಯಗೇಣಿ (ವಿರಳವಾಗಿ) ಎಂಬ ಪದ್ಧತಿಗಳೂ ಕುಂದಾಪುರ ತಾಲೂಕಿನಲ್ಲಿದ್ದವು ಎಂದು ಹೇಳಲಾಗಿದೆ.

ವಿವಿಧ ಕೃಷಿ ಯೋಗ್ಯ ಭೂಮಿಯನ್ನು ೧. ಬೈಲು (ಯಥೇಚ್ಛ ನೀರು ಪೂರೈಕೆಯಿರುವ ವರ್ಷದಲ್ಲಿ ಮೂರು ಬತ್ತದ ಬೆಳೆ ಬೆಳೆಯುವಂಥ ಸಾಮರ್ಥ್ಯವುಳ್ಳ) ೨. ಮಜಲು (ವರ್ಷದಲ್ಲಿ ಭತ್ತದ ಮೂರು ಬೆಳೆಗಳನ್ನು ಬೆಳೆಯುವ ಸಾಮರ್ಥ್ಯವುಳ್ಳ) ೩. ಬೆಟ್ಟು (ವಾರ್ಷಿಕವಾಗಿ ಒಂದು ಬೆಳೆ ಬೆಳೆಯುವ ಸಾಮರ್ಥ್ಯವುಳ್ಳ) ೪. ಬಾಗಾಯಿತು (ತೋಟಗಾರಿಕೆಗೆ ಅನುಕೂಲವಾದ ಭೂಮಿ) ಎಂದು ವರ್ಗೀಕರಿಸಲಾಗಿದೆ.

ಈ ನಾಲ್ಕು ವಿಧಗಳಲ್ಲದೆ 'ಕುಮರಿ' ಭೂಮಿ ಎಂಬ ಇನ್ನೊಂದು ವರ್ಗವನ್ನೂ ಕುಂದಾಪುರ ತಾಲೂಕಿನಲ್ಲಿ ಕಾಣಬಹುದು. ಕಾಡುಗಳನ್ನು ಕಡಿದು, ಸುಟ್ಟು, ಆ ಸ್ಥಳದಲ್ಲಿ ಭತ್ತ ಅಥವಾ ಹತ್ತಿ, ಹರಳು ಮೊದಲಾದ ಒಣ ಬೆಳೆಯನ್ನು ಬೆಳೆಯುವ ಪ್ರದೇಶವನ್ನು ಕುಮರಿ ಭೂಮಿ ಎನ್ನುತ್ತಾರೆ. ಸ್ವಾತಂತ್ರ್ಯಾನಂತರ ಕುಂದಾಪುರ ತಾಲೂಕಿನ ಮುದೂರು, ವಂಡ್ಸೆ, ಜಡ್ಕಲ್, ಬೈಂದೂರು ಮೊದಲಾದ ಪ್ರದೇಶಗಳಲ್ಲಿ ಕೇರಳದಿಂದ ಬಂದಿರುವ ಮಲಯಾಳಿಗಳು ಈ ತರಹದ ಕುಮರಿ ಭೂಮಿಯನ್ನು ಪಡೆದುಕೊಂಡು ಅದರಲ್ಲಿ ಎಣ್ಣೆಹುಲ್ಲು, ಮರಗೆಣಸು, ಲಾವಂಚ ಮತ್ತು ಇತ್ತೀಚೆಗೆ ರಬ್ಬರ್ ಹಾಗೂ ರೇಷ್ಮೆಯನ್ನು ಬೆಳೆಯುತ್ತಿದ್ದರು. ಜಿಲ್ಲೆಯಲ್ಲಿ ಪ್ರಥಮ ತೀರ್ವೆ ನಿಶ್ಚಯ ಅನುಷ್ಠಾನಗೊಂಡಾಗ ವಿಧಿಸಿದ ತೀರ್ವೆದರಗಳು ಹೀಗಿದ್ದವು.

| | | |
|---|---|---|
| | | **ರೂ.–ಆಣೆ–ಕಾಸು (ಪೈಸೆ)** |
| ಅ) | ಬೈಲು ಅಥವಾ ಬಯಲು ಭೂಮಿ (ಎಕರೆಗೆ) | : ೬–೧೪–೧ |
| ಆ) | ಮಜಲು ಭೂಮಿ (ಎಕರೆಗೆ) | : ೪–೧೦–೧ |

ಇ) ಬೆಟ್ಟು ಭೂಮಿ (ಎಕರೆಗೆ) : ೨-೫-೫

ಈ) ಬಾಗಾಯ್ತು ಭೂಮಿ (ಎಕರೆಗೆ) : ೪-೧೩-೭

ಉ) ಕುಮರಿ ಭೂಮಿ (ಎಕರೆಗೆ) : ೦-೨-೧೧

(೧ ರೂಪಾಯಿಗೆ ೧೬ ಆಣೆ, ೧ ಆಣೆಗೆ ೧೨ ಕಾಸು)

ಬ್ರಿಟಿಷ್ ಸರ್ಕಾರದ ಕಂದಾಯ ನೀತಿಯ ಪರಿಣಾಮವಾಗಿ ಜಿಲ್ಲೆಯಲ್ಲಿ ಮಧ್ಯವರ್ತಿಗಳು ಬೆಳೆಯುವುದಕ್ಕೆ ಕಾರಣವಾಯಿತು. ೧೮೩೧ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ರೈತರ ಕರ ನಿರಾಕರಣೆ ಕರೆ, ಜನರ ಒತ್ತಡದಿಂದಾಗಿ ಸರಕಾರ ಕೆಲವೊಂದು ರಿಯಾಯಿತಿ ಘೋಷಿಸಿತು. ೧೮೪೪ರಲ್ಲಿ ಒಳನಾಡು ಸುಂಕಗಳನ್ನು, ೧೮೫೨ರಲ್ಲಿ ಹೊಗೆಸೊಪ್ಪಿನ ಮತ್ತು ೧೮೭೭ರಲ್ಲಿ ಉಪ್ಪಿನ ಏಕಸ್ವಾಮ್ಯವನ್ನು ತೆಗೆದುಹಾಕಿತು. ಆದರೂ ರೈತವರ್ಗದ ಸ್ಥಿತಿ ಸುಧಾರಿಸಲಿಲ್ಲ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬ್ರಿಟಿಷ್ ಸರ್ಕಾರ ರೈತವಾರಿ ಪದ್ಧತಿಯನ್ನು ಅನುಷ್ಠಾನಗೊಳಿಸಿ ೧೮೮೯ರಲ್ಲಿ ಕಂದಾಯ ಭೂಮಾಪನ ಸರ್ವೇಕ್ಷಣೆ ಕೆಲಸವನ್ನು ಪ್ರಾರಂಭಿಸಿ ೧೮೯೬ರಲ್ಲಿ ಪೂರ್ಣಗೊಳಿಸಿತು.

ತರುವಾಯ ೧೮೯೭ರಲ್ಲಿ ಉಡುಪಿ ಮತ್ತು ಕುಂದಾಪುರ ತಾಲೂಕುಗಳ ವರದಿಗಳನ್ನು ತಯಾರಿಸಲಾಯಿತು. ಇವುಗಳಿಂದ ಅದುವರೆಗೆ ಪ್ರಚಲಿತದಲ್ಲಿದ್ದ ತರಿ, ಖುಷ್ಕಿ, ಬಾಗಾಯಿತು ಹಾಗೂ ಒಂದೇ ಸರ್ವೆ ನಂಬರಿನಲ್ಲಿ ಹಲವು ಬಗೆಯ ತರಿ ಜಮೀನುಗಳ ವಿವರಗಳು ಒಳಪಟ್ಟಿದ್ದವು. ಈ ರೀತಿಯ ವಿವಿಧ ವರ್ಗಗಳ ವಿಂಗಡಣೆಯು ವ್ಯವಸ್ಥಿತವಾಗಿರಲಿಲ್ಲವೆಂಬ ಅಂಶವು ನಂತರ ಬೆಳಕಿಗೆ ಬಂದಿತು. ಇದರ ನಂತರ ಜಿಲ್ಲೆಯಲ್ಲಿ ಭೂ ಸರ್ವೇಕ್ಷಣೆಯಡಿಯಲ್ಲಿ ಪೂರಕ ಭೂಮಾಪನ ಕಾರ್ಯವು ಆರಂಭಗೊಂಡು ೧೯೦೩ರವರೆಗೂ ನಡೆದು ಭೂಮಿಯ ಫಲವತ್ತತೆಯ ಆಧಾರದ ಮೇಲೆ ಕೃಷಿ ಭೂಮಿಯನ್ನು ವಿಂಗಡಿಸಲು ಸಾಧ್ಯವಾಯಿತು. ಈ ಭೂಮಾಪನಗಳ ಪರಿಣಾಮವಾಗಿ ಭೂಕಂದಾಯ ಮತ್ತು ಇತ್ಯರ್ಥಗಳ ಉದ್ದೇಶಕ್ಕಾಗಿ ಕೆಲವು ಸಾಮಾನ್ಯ ತತ್ವಗಳನ್ನು ರೂಪಿಸಲಾಯಿತು. ಎಲ್ಲ ಕೃಷಿ ಭೂಮಿಗಳನ್ನು ಒಂದು, ಎರಡು ಮತ್ತು ಮೂರು ಎಂದು ಮೂರು ಪ್ರವರ್ಗಗಳನ್ನಾಗಿ ವಿಭಜಿಸಲಾಯಿತು. ಪ್ರಥಮ ದರ್ಜೆ ತರಿ ಭೂಮಿಯನ್ನು ಎರಡು ತರಿ ಬೆಳೆ ನೀಡುವಂಥ ಅಧಿಕ ಮಳೆಯಿಂದ ನೇರವಾಗಿ ಹರಿಯುವ ಜಲಮೂಲದ ಭೂಮಿಯೆಂದು ಪರಿಭಾಷಿಸಲಾಗಿದೆ. ಎರಡನೇ ದರ್ಜೆ ತರಿ ಭೂಮಿ ನದಿ ಕಣಿವೆಯ ಕೆಳಗೆ ಇರುವ ಪ್ರದೇಶಗಳಲ್ಲಿ ಎರಡು ತರಿ ಬೆಳೆಗಳ ನೀಡುವಂಥದು. ಮೂರನೆಯ ದರ್ಜೆ ತರಿ ಭೂಮಿ ಕಡಿಮೆ ಅನುಕೂಲಕರವಾಗಿರುವಂಥದು. ಎಲ್ಲಾ ತರಿ ಅಥವಾ ತೋಟವೆಂದು ವರ್ಗೀಕರಣಗೊಳ್ಳದವನ್ನು ಒಣಭೂಮಿಯೆಂದು ಪರಿಗಣಿಸಲಾಗುತ್ತಿತ್ತು. ಒಣ ಭೂಮಿಗಳಿಗೂ ತರಿ ಭೂಮಿಯಂತೆಯೇ ಒಂದು ಅಥವಾ ಒಂಭತ್ತು ತರಂ ಅಥವಾ ವರ್ಗಗಳಾಗಿ ಹಂಚಲಾಗುತ್ತಿತ್ತು. ಭೂಮಿಯ ಒಂದು ಎಕರೆ ಹತ್ತು ತೆಂಗಿನ ಹಾಳೆಗಳನ್ನು ಹೊಂದಿದ್ದಲ್ಲಿ ಅಥವಾ ಇತರ ತೋಟದ ಬೆಳೆಗಳಲ್ಲಿ ಅದಕ್ಕೆ ಸಮವಾದದ್ದನ್ನು ಒಳಗೊಂಡಿದ್ದಲ್ಲಿ ಅಂಥ ಜಮೀನನ್ನು ಬಾಗಾಯಿತಿನಂತೆ ಕರನಿರ್ಧಾರ ಯೋಗ್ಯವೆಂದು ಪರಿಗಣಿಸಲಾಗುತ್ತಿತ್ತು.

ಪ್ರಾಚೀನ ಭೂ ಹಿಡುವಳಿಯ ಆಧಾರದ ಮೇಲೆ ಬಾಗಾಯಿತು ಭೂಮಿಯನ್ನು ಏಳು ವಿಧಗಳಾಗಿ ವರ್ಗೀಕರಿಸಲಾಯಿತು. ಈ ಪ್ರಕಾರ ಕರ ನಿರ್ಧಾರ (ಕಂದಾಯ) ದರಗಳು ಎಕರೆಗೆ ರೂ. ಎರಡರಿಂದ ಆರಂಭಿಸಿ ಎಂಟು ರೂ.ಗಳವರೆಗೆ ವಿವಿಧ ತೆರನಾಗಿದ್ದವು. ತೆಂಗು, ಅಡಿಕೆ, ಸೀಬೆ, ಮಾವು, ಭತ್ತ, ಹುಣಸೇಹಣ್ಣು ಮರಗಳು ಮತ್ತು ಮೆಣಸು ಗಿಡಗಳ ಸಂಖ್ಯೆಗನುಸಾರವಾಗಿ ವರ್ಗೀಕರಿಸಲಾಗಿದೆ. ಸಾಮಾನ್ಯವಾಗಿ ಭತ್ತವನ್ನು ಭೂಮಿಯ ಅಧಿಕ ಪ್ರಮಾಣಿತ ಬೆಲೆಯೆಂದು ಪರಿಗಣಿಸಲಾಗಿತ್ತು. ಇದೇ ಆಧಾರದ ಮೇಲೆ ಒಣಭೂಮಿಯ ಕರನಿರ್ಧಾರದ ವಿಷಯದಲ್ಲಿ ಯಾವುದೇ ಹೆಚ್ಚಳವನ್ನೂ ಮಾಡಿರುವುದಿಲ್ಲ. ನಂತರ ೧೯೩೪-೩೫ರಲ್ಲಿ ವಾರ್ಷಿಕವಾಗಿ ಸಂಭವಿಸುವ ಎರಡು ಮುಖ್ಯ ಬೆಳೆಗಳ ಬೆಲೆಗಳಲ್ಲಾದ ಹೆಚ್ಚಳದಿಂದಾಗಿ ಕಂದಾಯ ದರವನ್ನು ಹೆಚ್ಚಿಸಲಾಯಿತು. ಹೀಗೆ ಬ್ರಿಟಿಷ್ ಆಡಳಿತದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ವ್ಯವಸ್ಥೆಯಲ್ಲಿ ಅನೇಕ ಪ್ರಯೋಗಗಳನ್ನು ಅನುಷ್ಠಾನಕ್ಕೆ ತರಲಾಯಿತು ಮತ್ತು ಅವುಗಳ ಮುಖ್ಯ ಉದ್ದೇಶವು ಸರ್ಕಾರಕ್ಕೆ ಆದಾಯ ತರುವುದಾಗಿತ್ತು.

ವಿಶಾಲ ಮೈಸೂರು ರಾಜ್ಯದಲ್ಲಿ ಜಿಲ್ಲೆಗಳಿಗಾಗಿ ಏಕರೂಪದ ಆಧಾರದ ಮೇಲೆ ಈ ಪರಿಷ್ಕೃತ ವ್ಯವಸ್ಥೆಯ ಪ್ರಕ್ರಿಯೆಯನ್ನು ನಡೆಸಬೇಕಿತ್ತು. ಹೀಗಾಗಿ ಅದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವುದರಿಂದ, ಮಧ್ಯಕಾಲೀನ ಕ್ರಮದಂತೆ ಸರ್‌ಚಾರ್ಜ್ ವಿಧಿಸುವುದು ಅಗತ್ಯವೆಂದು ಮತ್ತು ಅನಿವಾರ್ಯವೆಂದು ಭಾವಿಸಿತು. ಆದ್ದರಿಂದ ೧೯೬೧ರ ಮೈಸೂರು ಭೂ ಕಂದಾಯ, ಭೂ ಕಂದಾಯ ಅಧಿನಿಯಮವನ್ನು ೧೯೬೧ರ ಏಪ್ರಿಲ್ ೧ ರಿಂದ ಜಾರಿಗೊಳಿಸಿತು. ಸರ್‌ಚಾರ್ಜ್ ದರವನ್ನು ವಿಧಿಸಲಾಯಿತು ಮತ್ತು ೧೯೬೨-೬೩ ಮತ್ತು ೧೯೬೩-೬೪ರ ಕಂದಾಯ ವರ್ಷಗಳಿಗೆ ಅದನ್ನು ವಸೂಲು ಮಾಡಲಾಯಿತು. ಹೆಚ್ಚಳವು ತಾತ್ಕಾಲಿಕ ಸ್ವರೂಪದಾದ್ದರಿಂದ ಮತ್ತು ಕೆಲವು ವರ್ಷಗಳಿಗೆ ಮಾತ್ರ ಸೀಮಿತವಾದುದರಿಂದ, ಅದನ್ನು ಮುಂದೆ ಬದಲಾದ ಪರಿಸ್ಥಿತಿಗನುಗುಣವಾಗಿ ಕಂದಾಯ ವ್ಯವಸ್ಥೆಯ ಕಾರ್ಯವಿಧಾನವನ್ನು ರೂಪಿಸುವ ಮೂಲಕ ಶೀಘ್ರದಲ್ಲಿಯೇ ನಿಯತ ಏರಿಕೆಗೆ ಬದಲಾಯಿಸಲಾಯಿತು.

ಏಕೀಕೃತ ಕರ್ನಾಟಕ ರಾಜ್ಯಕ್ಕೆ ತೀರ್ವೆ ಏಕರೂಪ ಪದ್ಧತಿಯೊಂದರ ಅಗತ್ಯತೆಯನ್ನು ಮನಗಂಡು, ಹಲವಾರು ಸಂಘಟಿತ ಪ್ರದೇಶಗಳಲ್ಲಿನ ವಿವಿಧ ಪದ್ಧತಿಗಳ ಗುಣ-ದೋಷಗಳ ಆಧಾರದ ಮೇಲೆ ಹೊಸ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಈ ಪದ್ಧತಿಯ ಪ್ರಮುಖ ಗುಣಲಕ್ಷಣಗಳು (ಎ) ಮುಖ್ಯ ಬೆಳೆಗಳ ಉತ್ಪನ್ನ ಮತ್ತು ಅವುಗಳ ಬೆಲೆಗಳು ಕರನಿರ್ಧಾರದ ಏರಿಕೆಯನ್ನು ನಿರ್ಣಯಿಸುವಲ್ಲಿನ ಪ್ರಮುಖ ಅಂಶಗಳಾಗಿರುತ್ತಿತ್ತು. (ಬಿ) ಭೂ ಕಂದಾಯ ವ್ಯವಸ್ಥೆ ಕಾರ್ಯಾಚರಣೆಯ ಪ್ರದೇಶವು ತಾಲೂಕಿನಂಥ ಸಣ್ಣ ಆಡಳಿತಾತ್ಮಕ ಘಟಕವು ರೂಪುಗೊಳ್ಳಬೇಕೆಂಬ ನಿಯಮವಿರಲಿಲ್ಲ. ಅದು ಅದೇ ಜಿಲ್ಲೆಯ ತಾಲೂಕು ಅಥವಾ ತಾಲೂಕನ್ನೊಳಗೊಂಡ ವಲಯವಾಗಿರಬೇಕು ಅಥವಾ ಭೌಗೋಳಿಕ ವಿವರಣೆ, ಪ್ರಾಕೃತಿಕ ರಚನೆ, ಹವಾಮಾನ ಮತ್ತು ಮಳೆ ಸುರಿಯುವಿಕೆ, ಆ ಪ್ರದೇಶದಲ್ಲಿ ಮುಖ್ಯವಾಗಿ ಬೆಳೆಯುವಂಥ ಬೆಳೆಗಳ ಸ್ವರೂಪದ ವಿಷಯದಲ್ಲಿ ಒಂದೇ ಬಗೆಯಿರುವ ಒಂದು ಜಿಲ್ಲೆಗಿಂತ ಹೆಚ್ಚಿನ ಗುಂಪನ್ನು ಮಣ್ಣಿನ ಗುಣ, ಋತುಮಾನ ಪರಿಸ್ಥಿತಿ, ಬೆಳೆಯುವ ಬೆಳೆಗಳ ಸ್ವರೂಪ ಮತ್ತು ಬೆಲೆಗಳ ಮೇರೆಗೆ ಗುಂಪು ಎಂದು ಗುರುತಿಸಲ್ಪಡುತ್ತಿತ್ತು. (ಸಿ) ೧೬ ಆಣೆಗಳ ಭೂಮಿಯ ಒಂದು ಎಕರೆಗಾಗಿ ನಿರ್ಣಯಿಸುವ ಪ್ರಮಾಣಿತ ದರವು ಈ ಬೆಳೆಗಳ ಸರಾಸರಿ ಬೆಲೆಗಳ ರೂಪದಲ್ಲಿ ನಿರ್ಣಯಿಸಿದ ಮುಖ್ಯ ಬೆಳೆಗಳ ಒಟ್ಟು ಉತ್ಪನ್ನದ ಬೆಲೆಯ ೧/೧೬ ಆಗಿರುತ್ತಿತ್ತು. ಇದು ಐದು ವರ್ಷಗಳ ಅವಧಿಗೆ ಚಾಲ್ತಿಯಲ್ಲಿತ್ತು. (ಡಿ) ಖಾತರಿಯ ಅವಧಿಯು ೩೦ ವರ್ಷಗಳಾಗಿಯೇ ಉಳಿದಿರಬೇಕು.

ಏಕರೂಪ ಭೂಕಂದಾಯ ಅಧಿನಿಯಮವಾಗಿ ರಾಜ್ಯಕ್ಕೆ ೧೯೬೪ರ ಮೈಸೂರು ಭೂ ಕಂದಾಯ ಅಧಿನಿಯಮವೆಂದು ಕರೆಯಲಾಗುವ ಅಧಿನಿಯಮವನ್ನು ಏಕೀಕೃತ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಜಾರಿಗೊಳಿಸಲಾಯಿತು. ಹೊಸ ಪದ್ಧತಿಯಿಂದ ಭೂ ಕಂದಾಯದ ನಿರ್ಧರಣೆಯು ಭೂಕಂದಾಯ ವ್ಯವಸ್ಥೆಯ ಕಾರ್ಯಾಚರಣೆಗಳ ಘಟಕವನ್ನು ರೂಪಿಸಿತು. ಈ ಘಟಕವು ಪ್ರಾಕೃತಿಕ ರಚನೆ, ಹವಾಮಾನ ಮತ್ತು ಮಳೆ ಪ್ರದೇಶದಲ್ಲಿ ಬೆಳೆಯುವ ಮುಖ್ಯ ಬೆಳೆಗಳ ಮತ್ತು ಮಣ್ಣಿನ ಗುಣಗಳ ವಿಷಯದಲ್ಲಿ ಒಂದೇ ಬಗೆಯಿರುವ ಮತ್ತು ಒಂದಕ್ಕೊಂದು ಹತ್ತಿರದ ತಾಲೂಕು ಅಥವಾ ತಾಲೂಕುಗಳ ಗುಂಪು ಅಥವಾ ಅದರ ಒಂದು ಭಾಗವನ್ನು ಒಳಗೊಂಡಿರುವುದು.

ಭೂಕಂದಾಯ ನಿರ್ಧರಣಾ ಅಧಿಕಾರಿಯು ತಮ್ಮ ವ್ಯಾಪ್ತಿಗೆ ಒಳಪಡುವ ಭೂಮಿಯ ಬಗ್ಗೆ ಕೃಷಿ ಆಧಾರಿತ ಆರ್ಥಿಕ ಮೌಲ್ಯದ ಆಧಾರದ ಮೇಲೆ ಸವಿಸ್ತಾರ ಭೂಮಾಪನ ಹಾಗೂ ವಿವರಣಾತ್ಮಕ ಸರ್ವೇಕ್ಷಣೆ ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ನಂತರ ಅವರು ಹಿಂದಿನ ೩೦ ವರ್ಷಗಳ ಅವಧಿಯಲ್ಲಿ ಬಳಸಿದ ಮತ್ತು ಬೇಸಾಯ ಮಾಡಿದ ಪ್ರದೇಶದಲ್ಲಿನ ಮಾರುಕಟ್ಟೆ ಸೌಲಭ್ಯಗಳು, ಸಂಪರ್ಕ ವ್ಯವಸ್ಥೆ, ಪಶುಸಂಗೋಪನೆಯ ಗುಣಮಟ್ಟ, ಜನಸಂಖ್ಯೆ ಮತ್ತು ಕಾರ್ಮಿಕರ ಪೂರೈಕೆ, ಕೃಷಿ ಸಂಪನ್ಮೂಲಗಳ ವೈವಿಧ್ಯತೆ, ಬೇಸಾಯಗಾರನು ತನ್ನ ದುಡಿಮೆಗಾಗಿ ಪಡೆಯುವ ಕೂಲಿ ಮತ್ತು ಕೃಷಿ, ಮಣ್ಣಿನ ಗುಣಮಟ್ಟಕ್ಕೆ ತಕ್ಕಂತೆ ಭೂಮಿಯ ಮೌಲಿಕ ಬೆಲೆಯು ಒಳಗೊಂಡಂತೆ ಮುಖ್ಯ ಬೆಳೆಗಳ ಬೇಸಾಯಗಾರರ ಕೂಲಿ,

ಮತ್ತು ಸಾಮಾನ್ಯ ವೆಚ್ಚಗಳ ಬಗೆಗೆ ಹಲವಾರು ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಭೂಮಿಯನ್ನು ನೆಲದ ಗುಣ ವಿಶೇಷತೆ, ನೀರಿನ ಸೌಕರ್ಯ ಮತ್ತು ಇತರ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಭೂಮಾಪನ ದಾಖಲೆಗಳಲ್ಲಿ ದಾಖಲಿಸಿದ ಭೂಮಿಯ ಸಾಪೇಕ್ಷ ಮೌಲ್ಯಕ್ಕನುಸಾರವಾಗಿ ಪ್ರತಿಯೊಂದು ಜಮೀನನ್ನು ವರ್ಗೀಕರಿಸಲಾಗುವುದು. ಅನಂತರ ಭೂ ಕಂದಾಯ ವ್ಯವಸ್ಥೆ ಅಧಿಕಾರಿಯು ಪ್ರತ್ಯೇಕವಾಗಿ ಭೂಮಿಯ ಪ್ರತಿಯೊಂದು ವರ್ಗಕ್ಕಾಗಿ ತಾತ್ಕಾಲಿಕ ಪ್ರಮಾಣದ ದರವನ್ನು ನಿರ್ಧರಿಸುವರು. ಈ ದರವು ವರ್ಗೀಕೃತ ಜಮೀನಿನಲ್ಲಿ ಬೆಳೆದ ಮುಖ್ಯ ಬೆಳೆಗಳ ಒಟ್ಟು ಇಳುವರಿಯ ಆರನೆಯ ಒಂದು ಭಾಗವನ್ನು ಮೀರಬಾರದು. ಭೂ ಕಂದಾಯ ವ್ಯವಸ್ಥೆ ಅಧಿಕಾರಿಯು ಪ್ರಾತಿನಿಧಿಕ ಗ್ರಾಮಗಳಲ್ಲಿ ಬೆಳೆ ಕುಯ್ಲು ಪ್ರಯೋಗ ನಡೆಸುವರು ಅಥವಾ ಇತರ ಇಲಾಖೆಗಳು ನಡೆಸುವ ಬೆಳೆ ಕುಯ್ಲು ಪ್ರಯೋಗ ನಿಯಮಗಳ (Crop cutting experiment) ಪರಿಣಾಮಗಳನ್ನು ಅಂಗೀಕರಿಸುತ್ತಿದ್ದರು. ಇದರಿಂದ ಅವರು ಪ್ರತಿಯೊಂದು ವರ್ಗದ ಅಂದರೆ ತೋಟ, ಖುಷ್ಕಿ, ತರಿ, ಬಾಗಾಯಿತು ಮತ್ತು ನೆಡುತೋಪುಗಳಲ್ಲಿನ ಮುಖ್ಯ ಬೆಳೆಗಳ ಸರಾಸರಿ ಇಳುವರಿಯನ್ನು ಲೆಕ್ಕಹಾಕುತ್ತಿದ್ದರು ಮತ್ತು ನಂತರ ಪ್ರತಿ ಎಕರೆಯ ಸರಾಸರಿ ಇಳುವರಿಯ ನಗದು ಮೌಲ್ಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ರೂಢಿಯಲ್ಲಿತ್ತು. ಭತ್ತ, ತೆಂಗು ಮತ್ತು ಅಡಿಕೆ ಜಿಲ್ಲೆಯ ಅಧಿಸೂಚಿತ ಬೆಳೆಗಳೆಂದು ಘೋಷಿತವಾಗಿತ್ತು.

ನಂತರ ತಾತ್ಕಾಲಿಕ ಪ್ರಮಾಣಿತ ದರವನ್ನು ನಗದು ಮೌಲ್ಯದ ಶೇಕಡಾ ಕೆಲವು ಭಾಗದಂತೆ ಜಮೀನಿನ ಪ್ರತಿಯೊಂದು ವರ್ಗಕ್ಕಾಗಿ ನಿರ್ಧರಿಸಲಾಗುತ್ತದೆ. ಅವರು ನಂತರ ಜಿಲ್ಲಾಧಿಕಾರಿಗೆ ಪರಿಷ್ಕೃತ ಪ್ರಮಾಣಿತ ದರವನ್ನು ತಿಳಿಸಿ ತಮ್ಮ ವರದಿಯನ್ನು ನೀಡುತ್ತಾರೆ. ಹಾಗೆ ತಿಳಿಸಿದ ಪ್ರಮಾಣಿತ ದರಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಅಧಿಸೂಚಿಸಲಾಗುತ್ತದೆ. ಭೂ ಕಂದಾಯ ವ್ಯವಸ್ಥೆ ಅಧಿಕಾರಿಯ ವರದಿಯ ಪ್ರತಿಯೊಂದನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿಟ್ಟು, ವರದಿ ಪ್ರಕಟವಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಬಾಧಿತ ವ್ಯಕ್ತಿಗಳಿದ್ದಲ್ಲಿ ಅವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತಿತ್ತು. ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಮತ್ತು ಅಪೇಕ್ಷಿಸಿದಲ್ಲಿ ಅಂಥ ಅರ್ಜಿದಾರರ ವಿಚಾರಣೆ ಕೈಗೊಳ್ಳಲಾಗುತ್ತದೆ. ನಂತರ ಜಿಲ್ಲಾಧಿಕಾರಿಯು ಪ್ರತಿಯೊಂದು ಆಕ್ಷೇಪಣೆಯ ಬಗೆಗೆ ತಮ್ಮ ಷರಾದೊಂದಿಗೆ ಭೂಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಆಯುಕ್ತರ ಮೂಲಕ ಸರ್ಕಾರಕ್ಕೆ ಕಂದಾಯ ವ್ಯವಸ್ಥೆ ವರದಿಗಳನ್ನು ಕಳುಹಿಸುವುದು ರೂಢಿಯಲ್ಲಿದೆ. ಕಂದಾಯ ವ್ಯವಸ್ಥೆಯ ವರದಿಗಳನ್ನು ಆಕ್ಷೇಪಣೆಯೊಂದಿಗೆ ರಾಜ್ಯ ವಿಧಾನಮಂಡಲದ ಎರಡು ಸದನಗಳ ಮುಂದೆ ಮಂಡಿಸುವ ಕ್ರಮ ಜಾರಿಯಲ್ಲಿದೆ. ನಂತರ ಠರಾವುಗಳನ್ನು ಮಂಡಿಸಿ, ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುಗಳಿಲ್ಲದೆ ಅಂಗೀಕರಿಸಿದ ನಂತರ ಠರಾವಿಗೆ ಅನುಗುಣವಾಗಿ ರಾಜ್ಯ ಸರ್ಕಾರವು ಈ ಬಗ್ಗೆ ಆದೇಶಗಳನ್ನು ಹೊರಡಿಸುವುದು, ಸರ್ಕಾರವು ನಂತರ ಅಂಗೀಕರಿಸಿದ ಪ್ರಮಾಣಿತ ದರಗಳನ್ನು ಮತ್ತು ಈ ದರವು ಜಾರಿಗೆ ಬರುವಂಥ ದಿನಾಂಕವನ್ನು ಅಧಿಕೃತ ರಾಜ್ಯಪತ್ರದಲ್ಲಿ, ಪ್ರಕಟಿಸುವುದು. ಇವೇ ಮೊದಲಾದ ಕರ್ತವ್ಯಗಳನ್ನು ಭೂಕಂದಾಯ ನಿರ್ಧಾರಣಾ ಅಧಿಕಾರಿಯು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ನೆರವೇರಿಸುತ್ತಾರೆ.

## ನಿಗದಿತ ಪ್ರಮಾಣಿತ ದರಗಳು

೧೯೬೪ರ ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕರಣ ೨(೨೭)ರ ಪ್ರಕಾರ ಪ್ರಮಾಣಿತ ದರ ಎಂದರೆ ಯಾವುದೇ ನಿಗದಿತ ಜಮೀನಿಗೆ ಸಂಬಂಧಪಟ್ಟಂತೆ ಶೇಕಡಾ ೧೦೦ರಷ್ಟು 'ವರ್ಗೀಕರಣ ಮೌಲ್ಯ' ಪಡೆದಿರುವ ಒಂದು ವರ್ಗದ ಜಮೀನಿನಲ್ಲಿ ಬೆಳೆದ ಒಂದು ಎಕರೆಯ ಸರಾಸರಿ ಇಳುವರಿಯ ಶೇಕಡಾ ನಾಲ್ಕರಷ್ಟು ಮೌಲ್ಯಕ್ಕೆ ಸಮನಾದುದು ಎಂದರ್ಥ. ಆದಾಗ್ಯೂ ಯಾವುದೇ ನೆಡುತೋಪಿಗೆ ಸಂಬಂಧಪಟ್ಟಂತೆ ಪ್ರಮಾಣಿತ ದರವು ಶೇಕಡಾ ೧೦೦ರಷ್ಟು ವರ್ಗೀಕರಣ ಮೌಲ್ಯ ಪಡೆದಿರುವ ಒಂದು ಎಕರೆಯ ಸರಾಸರಿ ಇಳುವರಿಯ ೧೦೦ರಷ್ಟು ಮೌಲ್ಯವಾಗಿರುತ್ತದೆ. ಪ್ರಮಾಣಿತ ದರ ಲೆಕ್ಕ ಹಾಕುವಾಗ ಜಮೀನಿನ ಒಟ್ಟು ಸರಾಸರಿ ಇಳುವರಿಯ ಖಚಿತವಾದ ಪಾಲು, ಸಂಪರ್ಕ ಸಾಧನಗಳ ಬೆಳವಣಿಗೆ,

ಜಾನುವಾರುಗಳ ಸ್ಥಿತಿ, ಸಂಗೋಪನೆಯ ಮಟ್ಟ, ಕಳೆದ ೩೦ ವರ್ಷಗಳ ಮಳೆಯ ಮಾಹಿತಿ, ಕಳೆದ ೧೦ ವರ್ಷಗಳಲ್ಲಿನ ಪ್ರಧಾನ ಬೆಳೆಗಳ ಬೆಳೆ ಪ್ರಾತ್ಯಕ್ಷಿಕೆ (Major Crops Demonstration) ಮುಂತಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು.

ಆರಂಭದಲ್ಲಿ ಪರಿಷ್ಕೃತ ಕರ ನಿರ್ಧಾರ ಮಾಡುವ ಖಾತರಿಯ ಅವಧಿಯು ೧೯೬೩-೬೪ ವರ್ಷಕ್ಕೆ ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಸಂಬಂಧಪಟ್ಟಂತೆ ಕೊನೆಗೊಂಡಿದ್ದರಿಂದ, ಹೊಸ ಪರಿಷ್ಕೃತ ಕರನಿರ್ಧರಣೆಯು ಅಗತ್ಯವಾಗಿತ್ತು. ಕುಂದಾಪುರ ತಾಲೂಕಿನಲ್ಲಿ ಪರಿಷ್ಕೃತ ತೀರ್ವೆ ನಿಶ್ಚಯ ಕಾರ್ಯವು ೧೯೬೪ರಲ್ಲಿ ನಡೆಯಿತು. ಈ ಕಾರ್ಯಕ್ಕಾಗಿ ಜಿಲ್ಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಮಂಗಳೂರು, ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳನ್ನೊಳಗೊಂಡ ಮೊದಲನೇ ವಿಭಾಗಕ್ಕೆ ಉಡುಪಿ ಮುಖ್ಯ ಕೇಂದ್ರವಾಗಿತ್ತು. ೧೯೬೫ರ ಜೂನ್ ೨೫ ರಂದು ಸರ್ಕಾರವು ಪ್ರಕಟಿಸಿದ ಪರಿಷ್ಕೃತ ದರಗಳು ಕುಂದಾಪುರ ತಾಲೂಕು ಸೇರಿರುವ ಮೊದಲನೇ ವಿಭಾಗದಲ್ಲಿ ಈ ಕೆಳಗಿನಂತಿದ್ದವು.

## ನೀರು ದರಗಳು

೧೯೫೬ರಲ್ಲಿ ರಾಜ್ಯ ಪುನರ್ ವಿಂಗಡಣೆಯ ಸಮಯದಲ್ಲಿ ಏಕೀಕೃತಗೊಂಡ ಪ್ರದೇಶಗಳಲ್ಲಿ ಆಯಾ ಪ್ರಾಂತ್ಯಕ್ಕೆ ಸೀಮಿತವಾಗಿದ್ದ ನೀರಾವರಿ ಕಾನೂನುಗಳು ಜಾರಿಯಲ್ಲಿದ್ದವು. ಆದರೇ, ಹಳೆಯ ಮೈಸೂರು ರಾಜ್ಯದಲ್ಲಿ ವ್ಯವಸ್ಥಿತ ನೀರಾವರಿ ನಿಯಮಗಳು ಇದ್ದುದರಿಂದ ಅವುಗಳನ್ನೇ ಆಧಾರವಾಗಿಟ್ಟುಕೊಂಡು (ಲೆವಿ, ಅಭಿವೃದ್ಧಿ ತೆರಿಗೆಗಳು ಮತ್ತು ನೀರಿನ ದರಗಳು) ೧೯೫೭ರಲ್ಲಿ ಹೊಸದಾಗಿ ಮಾರ್ಪಡಿಸಿದ ನೀರಿನ ಕಾಯ್ದೆಯನ್ನು ಸರ್ಕಾರವು ಪರಿಗಣಿಸಲಾಗಿ ಜಾರಿಗೊಳಿಸಿತು. ಈ ಕಾಯ್ದೆಯನ್ನು ಮೈಸೂರು ನೀರಾವರಿ (ಲೆವಿ ಅಭಿವೃದ್ಧಿ ತೆರಿಗೆಗಳು ಮತ್ತು ನೀರಿನ ದರ) ೧೯೬೫ರಲ್ಲಿ ಕಾರ್ಯರೂಪಗೊಳಿಸಲಾಯಿತು. ಈ ಕಾಯ್ದೆಯ ಪ್ರಕಾರ ಪ್ರಸ್ತುತವಾಗಿ ನೀರಾವರಿಯ ಕ್ರಮಕ್ಕಾಗಿ ಉಪಯೋಗಿತವಾಗುವ ನೀರು ದರವನ್ನು

| ಭೂ ವರ್ಗ | ಒಣಭೂಮಿ | ತೇವಭೂಮಿ | ತೋಟ | ಅಡಿಕೆ ತೋಟ |
|---|---|---|---|---|
| | ರೂ.ಪೈಸೆ | ರೂ.ಪೈಸೆ | ರೂ.ಪೈಸೆ | ರೂ.ಪೈಸೆ |
| ೧ನೇ ವರ್ಗ | ೧-೬೦ | ೯-೪೪ | ೧೮-೯೨ | ೫೧-೬೦ |
| ೨ನೇ ವರ್ಗ | ೧-೬೦ | ೮-೬೨ | ೧೩-೩೫ | ೫೧-೬೦ |
| ೩ನೇ ವರ್ಗ | ೧-೬೦ | ೭-೪೮ | ೮-೦೫ | ೫೧-೬೦ |

ರಾಜ್ಯಾದ್ಯಂತ ಸರ್ಕಾರವು ಜಾರಿಗೆ ತಂದಿರುತ್ತದೆ. ನೇರವಾಗಿ (ನದಿಗಳಿಂದ) ಅಥವಾ ಅಪರೋಕ್ಷವಾಗಿ ಕೃಷಿ ಅಥವಾ ಕೆರೆಕಟ್ಟೆಗಳ ನಿರ್ಮಾಣಗಳಿಗೆ ಸರ್ಕಾರದ ನೆರವಿನಿಂದ ಬಳಕೆಯಾಗುವ ನೀರಿನ ಮೇಲೆ ನಿಗದಿತ ದರವನ್ನು ವಿಧಿಸಲಾಗುತ್ತದೆ. ಈ ದರವು ಸಾಮಾನ್ಯವಾಗಿ ಉತ್ಪನ್ನವಾಗುವ ಬೆಳೆಗಳ ಪ್ರಮಾಣದ ಮೇಲೆ ನಿಶ್ಚಯಗೊಳ್ಳುತ್ತದೆ. ಇದಕ್ಕೆ ಸರ್ಕಾರವು ಎರಡು ನಿಯಮಗಳ (ಶೆಡ್ಯೂಲ್‌ಗಳಲ್ಲಿ) ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ತಕ್ಕಂತೆ ಕನಿಷ್ಟ ನೂರು ಎಕರೆಗಳಿಗೆ ಸೀಮಿತಗೊಂಡಂತೆ ನೀರು ದರವನ್ನು ವಿಧಿಸುತ್ತದೆ. ಇದರಲ್ಲಿ ನೂರು ಎಕರೆಗಳ ಕಮ್ಯಾಂಡ್ ಏರಿಯಾ ಪರಿಮಿತಿಯೂ ಸೇರಿರುತ್ತದೆ.

ಹೀಗೆ ೧೯೬೫ರಲ್ಲಿ ಜಾರಿಯಾದ ನೀರು ದರಗಳಿಗೆ ಸಂಬಂಧಿಸಿದ ನಿಯಮಗಳಲ್ಲಿ ನೀರಾವರಿ ಯೋಜನೆಗಳ ನಿರ್ವಹಣೆ ವೆಚ್ಚವು ಒಳಗೊಳ್ಳುವುದೆಂದು ಸಾಧ್ಯವಾದಲ್ಲಿ ಸರ್ಕಾರಿ ಸಾಲ ಮತ್ತು ಮೇಲ್ವೆಚ್ಚಗಳನ್ನು ತುಂಬಿಸಿಕೊಡಬಹುದೆಂದು ನಿರೀಕ್ಷಿಸಲಾಗಿತ್ತು. ಈ ಕಾರಣದಿಂದಾಗಿ ನೀರಿನ ತೆರಿಗೆಯನ್ನು ಜಾರಿಯಲ್ಲಿದ್ದ ದರಕ್ಕಿಂತ ಶೇಕಡಾ ೩೩ ೧/೩ ಅಂಶದಷ್ಟು ನೀರಿನ ದರವನ್ನು ಹೆಚ್ಚಿಸಿ ೧೯೬೬ ರಿಂದ ಜಾರಿಗೆ ತರಲಾಯಿತು. ೧೯೭೨ ಮತ್ತು ೧೯೮೧ರ ನಡುವಿನ ಅವಧಿಯಲ್ಲಿ ಹಲವಾರು ತಿದ್ದಪಡಿಗಳನ್ನು ಕೈಗೊಂಡು ನೀರಿನ ದರವನ್ನು ಈ ಮುಂದಿನಂತೆ ನಿಗದಿಪಡಿಸಲಾಯಿತು (ಎಕರೆಗಳಲ್ಲಿ) ಕಬ್ಬಿನ ಬೆಳೆಗೆ (೧೨ ತಿಂಗಳುಗಳು– ರೂ. ೧೫೦), ಕಬ್ಬಿನ ಬೆಳೆ (೧೩ ರಿಂದ ೧೮ ತಿಂಗಳಿಗೆ –ರೂ.೨೨೪) ಭತ್ತದ ಬೆಳೆಗೆ – ರೂ.೪೫,

ಗೋಧಿ –ರೂ.೨೪, ಜೋಳ – ರೂ.೨೪, ನೆಲಗಡಲೆ –ರೂ.೨೪, ಹತ್ತಿ –ರೂ.೪೮ ರಾಗಿ, ಸಜ್ಜೆ, ಹೆಸರುಬೇಳೆ, ಗೆಣಸು, ತಂಬಾಕು, ಧನಿಯ – ರೂ.೨೪, ಬೇಳೆಕಾಳು – ರೂ.೧೮, ಗೊಬ್ಬರದ ಬೆಳೆ – ರೂ.೯ ಮತ್ತು ತೋಟದ ಬೆಳೆ –ರೂ.೫೦.

## ಭೂ ಕಂದಾಯ ಲೆಕ್ಕ

ಭೂ ಕಂದಾಯ ಕಾರ್ಯಾಚರಣೆ ಮುಗಿದ ನಂತರ, ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯು ಭೂ ಕಂದಾಯ ವ್ಯವಸ್ಥೆ ನೋಂದಣಿ ಪುಸ್ತಕ (ರಿಜಿಸ್ಟರು) ಎಂದು ಕರೆಯಲಾಗುವ ಒಂದು ರಿಜಿಸ್ಟರನ್ನು ತಯಾರಿಸುತ್ತದೆ. ಈ ಪುಸ್ತಕದಲ್ಲಿ ಪ್ರತಿ ಸರ್ವೆ ಸಂಖ್ಯೆಯ ಕಂದಾಯ, ಅದರಲ್ಲಿ ಕೃಷಿಯಾಗದ ಭೂ ಭಾಗದ ವಿವರ, ಹೊಲದ ಅನುಭೋಗದಾರನ ಹೆಸರು ನಮೂದಾಗಿರುತ್ತದೆ. ಇಲಾಖೆಯು ಸರ್ವೆ ಸಂಖ್ಯೆಗಳನ್ನು ಒಳಗೊಂಡ ಮತ್ತೊಂದು ರಿಜಿಸ್ಟರನ್ನು ತಯಾರಿಸುತ್ತದೆ. ಅದರಲ್ಲಿ ಕೃಷಿಯೋಗ್ಯ ಹಾಗೂ ಕೃಷಿಯೋಗ್ಯವಲ್ಲದ, ಖುಷ್ಕಿ, ತರಿ ಮತ್ತು ಬಾಗಾಯಿತು ವಿವರಗಳು, ಪ್ರತಿ ಎಕರೆಯ ದರ ಕಂದಾಯ, ಒಟ್ಟು ಸರ್ವೆ ಸಂಖ್ಯೆಗೆ ನಿಗದಿಯಾದ ಕಂದಾಯ ಇವೆಲ್ಲವೂ ನಮೂದಾಗಿರುತ್ತದೆ. ಇದನ್ನು 'ಆಕಾರ್ ಬಂದ್' ಎಂದು ಕರೆಯಲಾಗುವುದು. ಇದನ್ನು ಪಡೆದ ಮೇಲೆ ಗ್ರಾಮಲೆಕ್ಕಿಗರು 'ಖೇತ್‌ವಾರು' ಅಥವಾ ಭೂ ಸೂಚಿಯನ್ನು ತಯಾರಿಸಬೇಕಾಗುದುದು ಇಲಾಖೆಯ ಪ್ರಮುಖ ಕರ್ತವ್ಯವಾಗಿರುತ್ತದೆ.

ಈ ಖೇತವಾರು ರಿಜಿಸ್ಟರ್ ಆಧಾರದ ಮೇಲೆ ಗ್ರಾಮದ ಎಲ್ಲಾ ಜಮೀನುಗಳ ವಾಸ್ತವಾಂಶಗಳನ್ನು ಗ್ರಾಮಲೆಕ್ಕಿಗನು ಪ್ರತೀ ವರ್ಷ ದಾಖಲು ಮಾಡುವುದು ರೂಢಿಯಲ್ಲಿದೆ. ಆದ್ದರಿಂದ ಇದು ಕಂದಾಯ ದಾಖಲೆಗಳಲ್ಲಿ ಬಹುಮುಖ್ಯ ದಾಖಲೆಯಾಗಿರುತ್ತದೆ. ಇದರಲ್ಲಿ ಪ್ರತೀ ಮಾಲೀಕನ ಹೆಸರಲ್ಲಿರುವ ಭೂ

**ಕೋಷ್ಟಕ ೯.೧ : ೧೯೬೪ರ ಪರಿಷ್ಕೃತ ಕಂದಾಯ ವ್ಯವಸ್ಥೆ II ಮತ್ತು III ರ ಮಾಹಿತಿಯ ವಿವರಗಳು**

| ದಕ್ಷಿಣ ಕನ್ನಡ–ಉಡುಪಿ ವಲಯ | | | ಕಂದಾಯ ನಿರ್ಧರಣೆಯ ಪ್ರಮಾಣಿತ ದರ | | | | ಷರಾ |
|---|---|---|---|---|---|---|---|
| ತಾಲೂಕಿನ ಹೆಸರು | ಗುಂಪು | ಗ್ರಾಮಗಳ ಸಂಖ್ಯೆ | ಖುಷ್ಕಿ ರೂ.ಪೈ. | ತರಿ ರೂ.ಪೈ. | ತೋಟ ಪಾಟ್ ಗಾರ್ಡನ್ | ತೋಟ ಮಾಟ್ ಗಾರ್ಡನ್ | |
| ಉಡುಪಿ | I | ೯೮ | ೧–೬೦ | ೯–೪೪ | ೧೮–೯೨ | ೫೧–೬೦ | ಅಡಿಕೆ |
| | II | ೧೭ | ೧–೬೦ | ೮–೬೨ | ೧೩–೩೫ | ೫೧–೬೦ | |
| ಕುಂದಾಪುರ | I | ೧೧ | ೧–೬೦ | ೯–೪೪ | ೧೮–೯೨ | ೫೧–೬೦ | |
| | II | ೬೫ | ೧–೬೦ | ೮–೬೨ | ೧೩–೩೫ | ೫೧–೬೦ | |
| | III | ೨೫ | ೧–೬೦ | ೭–೪೮ | ೮–೦೫ | ೫೧–೬೦ | |
| ಮಂಗಳೂರು | I | ೧೧೩ | ೧–೬೦ | ೯–೪೪ | ೧೮–೯೨ | ೫೧–೬೦ | |
| ಕಾರ್ಕಳ | I | ೨೨ | ೧–೬೦ | ೯–೪೪ | ೧೮–೯೨ | ೫೧–೬೦ | |
| | II | ೩೮ | ೧–೬೦ | ೮–೬೨ | ೧೩–೩೫ | ೫೧–೬೦ | |
| | III | ೧೯ | ೧–೬೦ | ೭–೪೮ | ೮–೦೫ | ೫೧–೬೦ | |
| ಪುತ್ತೂರು ವಲಯ | | | | | | | |
| ಪುತ್ತೂರು | I | ೪೩ | ೧–೬೦ | ೯–೪೭ | ೧೨–೩೯ | ೭೭–೫೧ | |
| | II | ೬೫ | ೧–೬೦ | ೬–೫೦ | ೮–೮೪ | ೫೧–೮೨ | |
| ಬಂಟ್ವಾಳ | I | ೮೫ | ೧–೬೦ | ೯–೪೭ | ೧೨–೩೯ | ೭೭–೫೧ | |
| ಬೆಳ್ತಂಗಡಿ | I | ೩೫ | ೧–೬೦ | ೯–೪೭ | ೮–೮೪ | ೭೭–೫೧ | |
| ಸುಳ್ಯ | II | ೪೬ | ೧–೬೦ | ೬–೫೦ | | ೫೧–೮೨ | |

*ಆಧಾರ: ಕರ್ನಾಟಕ ರೆವಿನ್ಯೂ ಕೈಪಿಡಿ ಸಂ. II, ಶ್ರೀ ಕೆ.ಬಾಲಸುಬ್ರಹ್ಮಣ್ಯಂ, ಐ.ಎ.ಎಸ್.,*

ವಿಸ್ತೀರ್ಣ, ಕಂದಾಯ, ಭೂ ವರ್ಗೀಕರಣ, ನೀರಿನ ದರ, ಗೇಣಿದಾರನ ಹಕ್ಕಿನ ಸ್ವರೂಪ, ಗೇಣಿ ವಿವರ, ಉತ್ಪಾದಿಸಿದ ಬೆಳೆಗಳ ವಿವರ ಹೀಗೆ ಭೂಮಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯು ಒಳಗೊಂಡಿರುತ್ತದೆ. ಹಕ್ಕುಗಳಲ್ಲಾದ ಎಲ್ಲ ಬದಲಾವಣೆಗಳನ್ನು, ಅವುಗಳನ್ನು ಕುರಿತ ವರದಿ ಬಂದ ನಂತರ, ಅಧಿಕೃತ ಅಧಿಕಾರಿಯು ಪರಿಶೀಲಿಸಿದ ನಂತರ ಈ ರಿಜಿಸ್ಟರ್‌ನಲ್ಲಿ ಸೇರಿಸಲಾಗುತ್ತದೆ. ಗೇಣಿಯ ಮತ್ತು ಬೆಳೆಗಳ ಮೂಲ ದಾಖಲೆಯನ್ನು ಐದು ವರ್ಷಗಳಿಗೊಮ್ಮೆ ಹೊಸದಾಗಿ ಬರೆಯಲಾಗುತ್ತದೆ. ಪ್ರತೀ ವರ್ಷ ಜುಲೈ ಒಂದನೆಯ ತಾರೀಖಿನಂದು ಖಾತಾ ನೋಂದಣಿ ಪುಸ್ತಕವನ್ನು ತೆರೆಯಲಾಗುವುದು. ಈ ಖಾತಾ ರಿಜಿಸ್ಟರು ಭೂ ಹಿಡುವಳಿದಾರನಿಂದ ಬಾಕಿಯಿರುವ ಕಂದಾಯ, ಸಹಜ ನಿರ್ಧರಿತ ಬೆಲೆ ಅಥವಾ ಪರಿವರ್ತನ ದಂಡ ಮತ್ತು ಇತರ ದಂಡಗಳ ವಿವರಗಳನ್ನೊಳಗೊಂಡ ಮೂಲ ದಾಖಲೆಯಾಗಿರುತ್ತದೆ. ಗ್ರಾಮಲೆಕ್ಕಿಗನು ವಸೂಲಿ ಮಾಡಿದ ಎಲ್ಲ ಹಣವನ್ನು ಅಧಿಕೃತ ನಮೂನೆಯಲ್ಲಿನ ರಸೀದಿ ಪುಸ್ತಕದಲ್ಲಿ ಬರೆದು ಹಣ ಸ್ವೀಕೃತಿಯನ್ನು ನೀಡಬೇಕು. ಅವನು ಮಾಸಿಕ ಬೇಡಿಕೆ, ವಸೂಲಿ ಮತ್ತು ಬಾಕಿ ತಃಖ್ತೆಯನ್ನು ಬೇಡಿಕೆ ರಿಜಿಸ್ಟರಿನಲ್ಲಿ ತಯಾರಿಸಬೇಕು. ಪ್ರತಿವರ್ಷದ ಅಂತ್ಯದಲ್ಲಿ ಅಂದರೆ ೩೦ನೆಯ ಜೂನ್‌ನಲ್ಲಿ ಭೂ ಕಂದಾಯ ವಸೂಲಿ, ಕಂದಾಯ ಬಾಕಿ ಮತ್ತು ಕರಗಳನ್ನು ಮುಕ್ತಾಯಗೊಳಿಸಬೇಕು. ಕಂದಾಯದ ಪ್ರತೀ ಬಾಬಿನಡಿಯ ಗ್ರಾಮದ ವಾರ್ಷಿಕ ಲೆಕ್ಕಗಳನ್ನು ಈ ರಿಜಿಸ್ಟರಿನ ಆಧಾರದ ಮೇಲೆ ಅಂತಿಮಗೊಳಿಸಬೇಕು.

## ಜಮಾಬಂದಿ

'ಜಮಾ' ಎಂದರೆ ಸರ್ಕಾರಕ್ಕೆ ಪಾಲು, 'ಬಂದ್' ಎಂದರೆ ಸರ್ಕಾರಕ್ಕೆ ಬರುವ ಆದಾಯ ನಿಗದಿಪಡಿಸುವುದು ಎಂದು ಅರ್ಥ. ರಾಜನಿಗೆ ಬರಬೇಕಾದ ಪಾಲನ್ನು ನಿಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು ಬಂದಿದೆ. ಅದೇ ರೀತಿ ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯ ನಿಗದಿಪಡಿಸುವುದೇ ಜಮಾಬಂದಿ. ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಾಂಪ್ರದಾಯಿಕವಾಗಿ ಜಮಾಬಂದಿಯನ್ನು ನಡೆಸುವ ಪದ್ಧತಿಯು ಜಾರಿಯಲ್ಲಿತ್ತು. ಜಮಾಬಂದಿ ಪದ್ಧತಿಯ ಪ್ರಮುಖ ಉದ್ದೇಶವು ಪ್ರತಿಯೊಂದು ಗ್ರಾಮದ ಕಂದಾಯ ಆಡಳಿತವನ್ನು ಪರಿಶೀಲಿಸುವುದಾಗಿದೆ. ಈ ಪದ್ಧತಿಯು ಪ್ರದೇಶಗಳಲ್ಲಿ ರೂಢಿಯಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿಯು ವಿವಿಧ ಅಂಶಗಳ ಕಾರಣದಿಂದಾಗಿ ನಿಂತುಹೋಗಿದೆ. ಸರ್ಕಾರವು ಈಗ ಜಮಾಬಂದಿಯ ಕೆಲಸದ ಪರಿಣಾಮಗಳನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಹೀಗಾಗಿ ಆಡಳಿತದ ತಳಪಾಯವನ್ನು ಪುನಶ್ಚೇತನಗೊಳಿಸುವ ಪ್ರಮುಖ ಉದ್ದೇಶದಿಂದ ಗ್ರಾಮಮಟ್ಟದಲ್ಲಿ ಕಂದಾಯ ಆಡಳಿತದ ಸಮೀಕ್ಷೆಗೆ ಮತ್ತು ವಿಶೇಷವಾಗಿ ಸಮಾಜದ ದುರ್ಬಲವರ್ಗದ ಏಳ್ಗೆಗಾಗಿ ಉದ್ದೇಶಿಸಿರುವ ಕ್ರಮಗಳಿಗೆ ಸಂಬಂಧಪಟ್ಟಂತೆ, ಅಭಿವೃದ್ಧಿ ಯೋಜನೆಗಳ ಪ್ರಗತಿ ಮೇಲ್ವಿಚಾರಣೆಗೆ ಈ ಪದ್ಧತಿ ಅತ್ಯಗತ್ಯವಾಗಿದೆಯೆಂದು ಪರಿಗಣಿಸಲಾಗಿತ್ತು.

ಜಮಾಬಂದಿಯಲ್ಲಿ ಎರಡು ವಿಧ, 'ದಿತ್ತಂ ಜಮಾಬಂದಿ' ಮತ್ತು 'ಹುಜೂರು ಜಮಾಬಂದಿ'. ದಿತ್ತಂ ಜಮಾಬಂದಿಯನ್ನು ತಾಲೂಕುಮಟ್ಟದಲ್ಲಿ ತಹಸೀಲ್ದಾರ್ ಕೈಗೊಳ್ಳುತ್ತಿದ್ದರು. ಹುಜೂರು ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ 'ತಾಲೂಕು ಅಥವಾ ದಿತ್ತಂ' ಜಮಾಬಂದಿ. ಇದು ಹಿಂದಿನ ವರ್ಷ ಡಿ.ಸಿ.ಬಿ.ಗಾಗಿ (ಬೇಡಿಕೆ, ವಸೂಲಿ ಮತ್ತು ಶಿಲ್ಕು) ಲೆಕ್ಕಪತ್ರಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಮತ್ತು ಬಾಕಿಗಳನ್ನು ನಿರ್ಧರಿಸುವುದಕ್ಕೆ ಲೆಕ್ಕಪತ್ರಗಳ ಹೊಂದಾಣಿಕೆ ಮಾಡುವುದನ್ನು ಒಳಗೊಂಡಿತ್ತು. ಎರಡನೆಯದಾಗಿ, ಗ್ರಾಮ ಮತ್ತು ತಾಲೂಕು ರಿಜಿಸ್ಟರು ಹಾಗೂ ಲೆಕ್ಕಪತ್ರಗಳ ಸವಿಸ್ತಾರ ಪರಿಶೀಲನೆಯ ನಂತರ ವಾರ್ಷಿಕ ತಃಖ್ತೆಯನ್ನು ಸಿದ್ಧಪಡಿಸುವುದು ರೂಢಿಯಲ್ಲಿತ್ತು. ತಾಲೂಕು ಕಚೇರಿಯ ಸಿಬ್ಬಂದಿ ಪರಿಶೀಲನೆಯನ್ನು ಕೈಗೊಳ್ಳಬೇಕಾಗುತ್ತಿದ್ದು ಮತ್ತು ತಹಸೀಲ್ದಾರರು ಲೆಕ್ಕಪತ್ರಗಳು ಮತ್ತು ರಿಜಿಸ್ಟರುಗಳು ಸರಿಯಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ ಪ್ರಮಾಣೀಕರಿಸುತ್ತಾರೆ. ದಿತ್ತಂ ಜಮಾಬಂದಿಯನ್ನು ಹೋಬಳಿ ಕೇಂದ್ರ ಕಚೇರಿಯಲ್ಲಿ ಸಾಮಾನ್ಯವಾಗಿ ಪೂರ್ಣಗೊಳಿಸಿದ ನಂತರ ಹುಜೂರು ಜಮಾಬಂದಿಯನ್ನು ನಡೆಸಲಾಗುವುದು. ಆಗ ಮುಂದಿನ ವರ್ಷದ ಬೇಡಿಕೆಯನ್ನು ನಿಗದಿಗೊಳಿಸಲಾಗುವುದು.

ಹುಜೂರು ಜಮಾಬಂದಿಯ ಉದ್ದೇಶಕ್ಕಾಗಿ ಪ್ರತಿಯೊಂದು ತಾಲೂಕನ್ನು ಒಂದು ಘಟಕವಾಗಿ ಪರಿಗಣಿಸಲಾಗುವುದು. ಈ ಜಮಾಬಂದಿಯ ಕೆಲಸವನ್ನು ಪ್ರತೀ ವರ್ಷದ ಅಕ್ಟೋಬರ್ ೧೫ರ ಹೊತ್ತಿಗೆ ಎಲ್ಲ ಪ್ರದೇಶದಲ್ಲಿ ಪ್ರಾರಂಭಿಸಲಾಗುತ್ತದೆ ಮತ್ತು ಮುಂದಿನ ಫೆಬ್ರವರಿ ಅಂತ್ಯದ ಹೊತ್ತಿಗೆ ಪೂರ್ಣಗೊಳಿಸಲಾಗುತ್ತದೆ. ಹುಜೂರು ಜಮಾಬಂದಿಯನ್ನು ಉಪವಿಭಾಗದ ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ನಡೆಸುತ್ತಾರೆ. ಕನಿಷ್ಠ ಒಂದು ತಾಲೂಕನ್ನು ಜಿಲ್ಲಾಧಿಕಾರಿಯು ಮಾಡುವರು ಮತ್ತು ಉಳಿದ ತಾಲೂಕುಗಳ ಹುಜೂರು ಜಮಾಬಂದಿಯನ್ನು ಸಹಾಯಕ ಆಯುಕ್ತರು ನಡೆಸುವರು, ತಹಸೀಲ್ದಾರರು ಜಮಾಬಂದಿಗೆ ನಿರ್ದಿಷ್ಟ ತಾಲೂಕನ್ನು ಗೊತ್ತುಪಡಿಸಿದ ಒಂದು ತಿಂಗಳಿಗೆ ಮುಂಚಿತವಾಗಿಯೇ ಎಲ್ಲ ಸಾಮಗ್ರಿಯನ್ನು ಸಿದ್ಧಪಡಿಸಿಟ್ಟುಕೊಂಡಿರಬೇಕು. ಜಮಾಬಂದಿ ಅಧಿಕಾರಿಗಳು ಈ ಉದ್ದೇಶಕ್ಕಾಗಿ ಸೇರಿದ ಗ್ರಾಮಸ್ಥರ ಸಮಕ್ಷಮದಲ್ಲಿ ಅವರು ಮಾಡಲಿರುವ ವಿವಿಧ ವಿಷಯಗಳ ತನಿಖೆ ಹಾಗೂ ವಿಚಾರಣೆಯನ್ನು ನಡೆಸಬೇಕು, ಗ್ರಾಮದಾಖಲೆಗಳ ವಿಚಾರಣೆಯಲ್ಲಿ ಸಂಬಂಧಪಟ್ಟ ರೈತರ ಸಾರ್ವಜನಿಕ ಸಭೆಯನ್ನು ವ್ಯವಸ್ಥೆ ಮಾಡುವುದು ಮತ್ತು ವಿವಿಧ ಕುಂದುಕೊರತೆಗಳ ವಿಚಾರಣಾ ವಿಧಾನದಲ್ಲಿ ಸಾರ್ವಜನಿಕ ಸುನಾವಣೆಗೆ (ಅಹವಾಲು ಹೇಳಲು) ಅವಕಾಶ ನೀಡುವುದು ಮತ್ತು ಗ್ರಾಮ ದಾಖಲೆಗಳ ವಿಚಾರಣೆಯು ಜಮಾಬಂದಿಯಲ್ಲಿ ಪ್ರಮುಖವಾದುದಾಗಿದೆ. ಜಮಾಬಂದಿ ಅಧಿಕಾರಿಗಳಿಂದ ಮಾಡಲಾದ ವರದಿಯ ಪ್ರತಿಯೊಂದನ್ನು ಜಮಾಬಂದಿ ನಡೆಸಿದ ೧೫ ದಿನಗಳೊಳಗೆ ಸರ್ಕಾರಕ್ಕೆ ಕಳುಹಿಸಬೇಕು.

## ಭೂ ಆಡಳಿತ

ಕೆನರಾ ಪ್ರದೇಶದಲ್ಲಿ ಹಿಂದೆ ಕಂದಾಯ ಮಂಡಳಿಯನ್ನು ಭೂ ಆಡಳಿತ ಅಧಿಕಾರದಡಿ ಇಡಲಾಗಿತ್ತು ಮತ್ತು ಕಂದಾಯ ಬೇಡಿಕೆಯ ಪ್ರಮಾಣವನ್ನು ನಿರ್ಧರಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗೆ ನೀಡಲಾಗಿತ್ತು. ಕಂದಾಯ ಮಂಡಳಿಯು ವಿಧಿಸಿದ ಕಾರ್ಯನೀತಿಗನುಗುಣವಾಗಿ, ಜಿಲ್ಲಾಧಿಕಾರಿ ಲೆಕ್ಕಪತ್ರಗಳನ್ನು ಇಡುವುದು, ನೋಟೀಸುಗಳನ್ನು ಹೊರಡಿಸುವುದು ಮತ್ತು ಇತರ ವಿವಿಧ ವಿನಿಯಮಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರ ಹೊಂದಿದ್ದರು. ಹಿಡುವಳಿಯ ವ್ಯಾಪ್ತಿ, ಬೆಳೆದ ಬೆಳೆಗಳ ಸ್ವರೂಪ ಮತ್ತು ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ಗೇಣಿ ವಿವರಗಳನ್ನು ತಿಳಿಯುವ ಪ್ರಯತ್ನವೊಂದನ್ನು ಮಾಡಲಾಯಿತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂಕುಡೊಂಕಾದ ಹಾಗೂ ದೀರ್ಘವಾದ ಕಡಲತೀರವಿದ್ದುದರಿಂದ ಮತ್ತು ಆಗ ಜಾರಿಯಲ್ಲಿದ್ದ ಭೂಹಿಡುವಳಿಯ ಮಾಲೀಕತ್ವದ ಪ್ರಮಾಣದ ಬಗ್ಗೆ ಹಾಗೂ ಬೆಳೆದ ಬೆಳೆಗಳ ಬಗ್ಗೆ ವಿಶೇಷವಾದ ಅಧ್ಯಯನ ನಡೆಸಲಾಯಿತು. ನಂತರ ೧೮೫೯ರಲ್ಲಿ ಕಂದಾಯ ಇಲಾಖೆಯಿಂದ ಪೋಲೀಸು ಕರ್ತವ್ಯಗಳನ್ನು ಬೇರ್ಪಡಿಸಿದಾಗ ಆಡಳಿತ ಕಾರ್ಯನೀತಿಯಲ್ಲಿ ಪರಿಣಾಮಕಾರಿ ಬದಲಾವಣೆ ಕಂಡುಬಂದಿತು. ಕ್ರಮಬದ್ಧ ರೀತಿಯಲ್ಲಿ ಭೂ ಕಂದಾಯ ವಸೂಲಿ ಮಾಡಲು ಅಗತ್ಯ ಸುಧಾರಣೆಗಳನ್ನು ಕ್ರಮೇಣ ಜಾರಿಗೆ ತರುವುದು ಕಂದಾಯ ಅಧಿಕಾರಿಗಳ ಪ್ರಮುಖ ಕರ್ತವ್ಯವಾಗಿತ್ತು. ಆಡಳಿತ ಅನುಕೂಲಕ್ಕನುಗುಣವಾಗಿ ಸಣ್ಣಪುಟ್ಟ ತಾಲೂಕುಗಳನ್ನು ಒಂದುಗೂಡಿಸಲಾಯಿತು ಮತ್ತು ತಹಸೀಲ್ದಾರರಿಗೆ ಇದ್ದ ಕಂದಾಯ ಮತ್ತು ದಂಡಾಧಿಕಾರದ ಕರ್ತವ್ಯಗಳನ್ನು ಹಂತಹಂತವಾಗಿ ವಿಸ್ತರಿಸಲಾಯಿತು.

## ಭೂ ಕಂದಾಯ ವಸೂಲಿ

ಕಂದಾಯ ಸಲ್ಲಿಕೆಯು ಜಮೀನಿನ ಮೇಲಿನ ಸರ್ವಪ್ರಧಾನದ ಋಣಭಾರವಾಗಿತ್ತು. ೧೯೬೪ರ ಭೂ ಕಂದಾಯ ಅಧಿನಿಯಮಕ್ಕನುಗುಣವಾಗಿ ಭೂಮಿಯ ಹಿಡುವಳಿದಾರನು ಕಂದಾಯವನ್ನು ಸಲ್ಲಿಸಲು ಬದ್ಧನಾಗಿರುತ್ತಾನೆ. ಪರಭಾರೆ ಮಾಡದ ಭೂಮಿಯ ವಿಷಯದಲ್ಲಿ ಅನುಭೋಗದಾರನು ಪರಭಾರೆ ಮಾಡಿದ ಭೂಮಿಯ ವಿಷಯದಲ್ಲಿ ವರಿಷ್ಠ ಹಿಡುವಳಿದಾರನು ಜಮೀನಿನ ಎಲ್ಲಾ ಕಂದಾಯ ಬಾಕಿಗಳ ಸಂದಾಯ ಮಾಡಲು ಸರ್ಕಾರಕ್ಕೆ ಹೊಣೆಯಾಗಿರುತ್ತಾನೆ. ಕಂದಾಯ ವರ್ಷಕ್ಕಾಗಿ ವಿಧಿಸಬಹುದಾದ ಭೂ ಕಂದಾಯವು ಆ ವರ್ಷದ ಮೊದಲ ದಿನದಂದು ಬಾಕಿಯಿರುತ್ತದೆ ಮತ್ತು ಅದನ್ನು ಗೊತ್ತುಪಡಿಸಬಹುದಾದಂಥ ಕಾಲದಲ್ಲಿ ಮತ್ತು ಕಂತಿನಲ್ಲಿ ಸಂದಾಯ ಮಾಡಬೇಕು. ಭೂ ಕಂದಾಯ ಮತ್ತು ಇತರ ಬಾಕಿಗಳು ಪ್ರತೀವರ್ಷ

ಜನವರಿ ಒಂದರಂದು ಪ್ರಾರಂಭವಾಗುತ್ತಿದ್ದು ಜೂನ್ ೩೦ಕ್ಕೆ ಮುಕ್ತಾಯವಾಗುತ್ತದೆ. ಇದನ್ನು ಕಿಸ್ತು ಅಥವಾ ವಸೂಲಿಯ ಸಮಯವೆನ್ನುತ್ತಾರೆ. ಗೊತ್ತುಪಡಿಸಿದ ದಿನಾಂಕದಂದು ಭೂ ಕಂದಾಯದ ಯಾವುದೇ ಕಂತು ಅಥವಾ ಅದರ ಭಾಗವನ್ನು ಸಂದಾಯ ಮಾಡದಿದ್ದಲ್ಲಿ ಅದು ಭೂ ಕಂದಾಯದ ಬಾಕಿಯಾಗುತ್ತದೆ. ಸಂದಾಯ ಮಾಡಬೇಕಾದ ವ್ಯಕ್ತಿಯು ಬಾಕಿದಾರನಾಗುತ್ತಾನೆ. ವರ್ಷದಲ್ಲಿ ವಿಧಿಸಬಹುದಾದ ಭೂ ಕಂದಾಯವನ್ನು ಪ್ರತಿವರ್ಷ ಜನವರಿ ತಿಂಗಳಿಂದ ಏಪ್ರಿಲ್‌ವರೆಗೆ ನಾಲ್ಕು ಕಂತುಗಳಲ್ಲಿ ಸಂದಾಯ ಮಾಡಬೇಕು. ಪ್ರತೀ ಕಂತನ್ನು ಆ ತಿಂಗಳ ಅಂತ್ಯದೊಳಗೆ ಸಂದಾಯ ಮಾಡಬೇಕು.

ಪ್ರತೀವರ್ಷ ಜನವರಿ ತಿಂಗಳಲ್ಲಿ ಗ್ರಾಮಲೆಕ್ಕಿಗರು ಬಾಕಿ ಸಂದಾಯದ ನೋಟೀಸು ಜಾರಿ ಮಾಡುವ ಮೂಲಕ ವಸೂಲಿ ಕಾರ್ಯವಿಧಾನವನ್ನು ಪ್ರಾರಂಭಿಸುವರು. ಆ ನೋಟೀಸನ್ನು ತಪ್ಪಿತಸ್ಥನಿಗೆ ಜಾರಿ ಮಾಡಲಾಗುತ್ತದೆ. ಏಳು ದಿನಗಳ ನಂತರವೂ ಮೊಬಲಗು ವಸೂಲಿಯಾಗದಿದ್ದಲ್ಲಿ, ವಿಷಯವನ್ನು ೧೯೬೬ರ ಕರ್ನಾಟಕ ಭೂ ಕಂದಾಯ ನಿಯಮಗಳಲ್ಲಿ ಗೊತ್ತುಪಡಿಸಿದಂತೆ ಬಾಕಿದಾರನ ಸ್ಥಿರಾಸ್ತಿಯನ್ನು ಜಪ್ತಿ ಮಾಡಲು ಆದೇಶಗಳನ್ನು ಪಡೆಯಲು ತಹಸೀಲ್ದಾರರ ಗಮನಕ್ಕೆ ತರಲಾಗುವುದು. ಜಿಲ್ಲಾಧಿಕಾರಿ ಅಥವಾ ಅವರ ಪರವಾಗಿ ಅಧಿಕಾರ ಪಡೆದಿರುವ ಯಾವುದೇ ಇತರ ಅಧಿಕಾರಿಯಿಂದ ಯಾವುದೇ ಸ್ಥಿರಾಸ್ತಿ ಅಥವಾ ಜಮೀನಿನ ಮಾರಾಟ ಮಾಡುವ ಮೊದಲು ಅಂಥ ಮಾರಾಟಕ್ಕಾಗಿ ನೋಟೀಸು ಅಥವಾ ಉದ್ಘೋಷಣೆಯನ್ನು ಹೊರಡಿಸಬೇಕು. ಬಾಕಿ ವಸೂಲಿಗಾಗಿ ಮಾರಾಟ ಹುಟ್ಟುವಳಿಯು ಸಾಕಷ್ಟಿಲ್ಲದಿದ್ದಲ್ಲಿ, ತಹಸೀಲ್ದಾರರು ಹೆಚ್ಚುವರಿಗಾಗಿ ಯಾವುದೇ ಚರಾಸ್ತಿಯನ್ನು ಜಪ್ತಿ ಮಾಡಬಹುದು ಮತ್ತು ಮಾರಾಟ ಮಾಡಬಹುದು.

ಎಲ್ಲ ಗುತ್ತಿಗೆ ಹಣ, ರಾಜಧನ, ನೀರಾವರಿ ಶುಲ್ಕ, ಮೇಲುಕರ (ಸೆಸ್), ಫೀಜು, ವೆಚ್ಚಗಳು, ಕಂತುಗಳು ಮತ್ತು ದಂಡಗಳು ಇವನ್ನು ಭೂಮಿಯ ಬಳಕೆ, ಅನುಭೋಗ, ನೀರಿನ ಬಳಕೆ ಅಥವಾ ಜಮೀನಿನ ಉತ್ಪನ್ನದ ಬಳಕೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಬಾಕಿ ಕೊಡಬೇಕಾಗಿದ್ದರೆ, ಅವೆಲ್ಲವುಗಳನ್ನು ಸಾರ್ವಜನಿಕ ಬಾಕಿಯೆಂದು ಪರಿಗಣಿಸುವುದಲ್ಲದೆ ಭೂ ಕಂದಾಯ ಬಾಕಿಗಳಂತೇ ಅವು ವಸೂಲು ಆಗಬೇಕು.

**ಮಾಫಿಗಳು**

ಪ್ರಕೃತಿ ವೈಪರೀತ್ಯ ಮತ್ತು ಬೆಳೆರೋಗ, ಮಳೆ ಅಭಾವದಿಂದ ಬೆಳೆ ನಾಶವಾದಾಗ (ಆಣೆವಾರಿ ಪದ್ಧತಿ) ಸರ್ಕಾರವು ರೈತರ ಪರಿಸ್ಥಿತಿಗೆ ಸೂಕ್ಷ್ಮವಾಗಿ ಸ್ಪಂದಿಸಿ ಸಾಗುವಳಿದಾರನಿಗೆ ಕಂದಾಯದ ಹೊರೆಯಿಂದ ಮಾಫಿ ನೀಡಲಾಗುತ್ತಿತ್ತು. ಬರಗಾಲ ಅಥವಾ ಇತರ ಯಾವುದೇ ಕಾರಣಕ್ಕಾಗಿ ಭಾಗಶಃ ಅಥವಾ ಸಂಪೂರ್ಣವಾಗಿ ಯಾವುದಾದರೂ ಪ್ರದೇಶದಲ್ಲಿ ಬೆಳೆಗಳು ನಾಶವಾಗಿವೆಯೆಂಬುದನ್ನು ವಿಚಾರಣೆಯ ಮೂಲಕ ಜಿಲ್ಲಾಧಿಕಾರಿ ಖಚಿತಪಡಿಸಿಕೊಂಡು ನಂತರ ಇಂಥ ಪ್ರದೇಶದ ಪ್ರತಿ ಎಕರೆಯ ಫಸಲುವಾರಿ ಸರಾಸರಿ ಇಳುವರಿ ಗೊತ್ತುಪಡಿಸಲು, ಆ ಪ್ರದೇಶದ ಎಲ್ಲಾ ಭಾಗಗಳಲ್ಲಿ ಬೆಳೆಯ ಕುಯ್ಲು ಪ್ರಯೋಗವನ್ನು (ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್) ಏರ್ಪಡಿಸುತ್ತಾರೆ. ಭೂ ಕಂದಾಯ ಮಾಫಿಗಾಗಿ ಪರಿಗಣಿಸಲು ಆ ಪ್ರದೇಶದ ಕನಿಷ್ಠ ಐದು ಗ್ರಾಮಗಳಲ್ಲಿ ತಹಸೀಲ್ದಾರರು ಇಂಥ ಪ್ರಯೋಗ ನಡೆಸಬೇಕಾಗುತ್ತದೆ. ಕಂದಾಯ ನಿರೀಕ್ಷಕನು ಕನಿಷ್ಠ ೨೦ ಅಂಥ ಎಲ್ಲಾ ಗ್ರಾಮಗಳಲ್ಲಿ ಮತ್ತು ತಹಸೀಲ್ದಾರನಾಗಲಿ ಅಥವಾ ಕಂದಾಯ ನಿರೀಕ್ಷಕನಾಗಲಿ ಅಂಥ ಪ್ರಯೋಗಗಳನ್ನೇ ಮಾಡದಂಥ ತನ್ನ ಪ್ರಭಾರದಲ್ಲಿರುವ ಎಲ್ಲಾ ಗ್ರಾಮಗಳಲ್ಲಿಯೂ ಗ್ರಾಮಲೆಕ್ಕಿಗರು ಪ್ರಯೋಗಗಳನ್ನು ನಡೆಸುತ್ತಾರೆ.

ಭೂ ಕಂದಾಯ ಸಲ್ಲಿಕೆಯ ತಡೆ ಅಥವಾ ಮಾಫಿಯ ಉದ್ದೇಶಕ್ಕಾಗಿ ಪ್ರತೀ ಎಕರೆಯ ಸರಾಸರಿ ಬೆಳೆಯ ಇಳುವರಿಯನ್ನು ಬಾವಿ, ಕೊಳಗಳು, ನದಿಗಳಿಂದ ಮತ್ತು ಇತರ ಮೂಲಗಳಿಂದ ನೀರಾವರಿ ಸೌಲಭ್ಯವನ್ನು ಹೊಂದಿರುವ ಮತ್ತು ಅಂಥ ನೀರಾವರಿ ಸೌಲಭ್ಯವಿಲ್ಲದ ಭೂಮಿಯ ವಿಷಯದಲ್ಲಿ ಪ್ರತ್ಯೇಕವಾಗಿ

ಉಪನಿಯಮ ಒಂದರ ಮೇರೆಗೆ ತೀರ್ಮಾನಿಸಬೇಕಾಗುತದೆ. ಪ್ರತೀ ಎಕರೆಯ ಸರಾಸರಿ ಫಸಲುವಾರು ಇಳುವರಿಯು ಶೇಕಡಾ ೩೭ ಇದ್ದಲ್ಲಿ ಭೂ ಕಂದಾಯ ವಸೂಲಿಯನ್ನು ಪೂರ್ತಿ ಸ್ಥಗಿತಗೊಳಿಸಲಾಗುವುದು ೨) ಶೇಕಡಾ ೩೫ಕ್ಕಿಂತ ಹೆಚ್ಚಿದ್ದು, ಶೇಕಡಾ ೫೦ಕ್ಕಿಂತ ಕಡಿಮೆ ಇದ್ದರೆ ಶೇಕಡಾ ೫೦ರಷ್ಟು ಕಂದಾಯ ವಸೂಲಿಯನ್ನು ಸ್ಥಗಿತಗೊಳಿಸಬಹುದು. ೩) ಇಳುವರಿಯು ಶೇಕಡಾ ೫೦ಕ್ಕಿಂತ ಹೆಚ್ಚಿದ್ದರೆ ಕಂದಾಯ ಸ್ಥಗಿತಗೊಳಿಸಲಾಗುವುದಿಲ್ಲವೆಂದು ೧೯೬೬ರ ಕರ್ನಾಟಕ ಭೂ ಕಂದಾಯ ಅಧಿನಿಯಮಕ್ಕನುಗುಣವಾಗಿ ತೀರ್ಮಾನಿಸಲಾಗಿದೆ. ಒಂದು ನಿರ್ದಿಷ್ಟ (ನಿಶ್ಚಿತ) ಅವಧಿಗಾಗಿ ಭೂ ಕಂದಾಯ ವಸೂಲಿಯನ್ನು ಸ್ಥಗಿತಗೊಳಿಸಿದಾಗ, ಭೂ ಕಂದಾಯವನ್ನು ಮುಂದಿನ ವರ್ಷದ ಸರಾಸರಿ ಫಸಲುವಾರು ಇಳುವರಿ ಶೇಕಡಾ ೩೭ರಷ್ಟಿದೆ ಎಂಬ ಕಾರಣದಿಂದ ಅದನ್ನು ವಸೂಲಿ ಮಾಡಲಾಗದಿದ್ದ ಪಕ್ಷದಲ್ಲಿ ಅಂಥ ಭೂ ಕಂದಾಯದ ಸಲ್ಲಿಸುವಿಕೆಯನ್ನು ಮೂರನೆಯ ವರ್ಷವೂ ಮಾಫಿ ಮಾಡಲಾಗುವುದು.

## ಮೈಸೂರು ಭೂ ಸುಧಾರಣಾ ಅದಿನಿಯಮ ೧೯೬೧

೧೯೬೧ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮವು (ಮೈಸೂರು ಅದಿನಿಯಮ ೧೯೬೨)೧೯೬೫ರಲ್ಲಿ ತಿದ್ದುಪಡಿಯಾದ ಪ್ರಕಾರ ೧೯೬೫ರ ಅಕ್ಟೋಬರ್ ೨ರಂದು ರಾಜ್ಯಾದ್ಯಂತ ಜಾರಿಗೆ ತರಲಾಯಿತು. ಈ ಅಧಿನಿಯಮದಲ್ಲಿ ಗೇಣಿದಾರನ ಹಕ್ಕು, ಸದ್ಯದ ಭೂ ಹಿಡುವಳಿಗಳ ಗರಿಷ್ಠ ಮಿತಿಯನ್ನು ಮತ್ತು ಭವಿಷ್ಯದಲ್ಲಿನ ಸ್ವಾಧೀನತೆಗಳನ್ನು, ಭೂಮಾಲೀಕರಿಂದ ಪಡೆಯಲಾಗುವ ಹೆಚ್ಚುವರಿ ಭೂಮಿಗಳಿಗಾಗಿ ಪರಿಹಾರ ಸಂದಾಯ ಮತ್ತು ಇತರ ಸಂಬಂಧಪಟ್ಟ ವಿಷಯಗಳ ಕುರಿತಂತೆ ಸಮಗ್ರ ಸ್ವರೂಪದ (ಉಪಬಂಧಗಳನ್ನು) ವಿವರಗಳನ್ನು ನೀಡಲಾಗಿದೆ.

ಈ ಅಧಿನಿಯಮದ ಕಲಮುಗಳ (ಉಪಬಂಧಗಳ) ಪ್ರಕಾರ, ಗೇಣಿಯ ಅವಧಿ ಮುಗಿದಿದೆಯೆಂಬ ಕಾರಣಕ್ಕಾಗಿ, ಅದು ಒಪ್ಪಂದಕ್ಕೊಳಪಟ್ಟಿರಲಿ ಅಥವಾ ಇಲ್ಲದಿರಲಿ ಗೇಣಿಯನ್ನು ಕೊನೆಗೊಳಿಸಲು ಬರುವುದಿಲ್ಲ. ೧೯೫೭ರ ಸೆಪ್ಟೆಂಬರ್ ೧೦ನೆಯ ದಿನಾಂಕಕ್ಕೆ ಮುಂಚಿತವಾಗಿ ಯಾವ ಗೇಣಿದಾರರು ಜಮೀನಿನ ಉಳುಮೆ ಮಾಡುತ್ತಿದ್ದರೋ ಮತ್ತು ಯಾರು ತ್ಯಾಗಪತ್ರದ ಮೂಲಕವಾಗಲೀ ಅಥವಾ ಒಕ್ಕಲೆಬ್ಬಿಸುವುದರಿಂದಾಗಲೀ ಜಮೀನಿನ ಸ್ವಾಧೀನತೆಯನ್ನು ಕಳೆದುಕೊಂಡಿರುವರೋ ಅಂಥವರು ಜಮೀನನ್ನು ಪುನಃ ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳುವ ಹಕ್ಕು ಪಡೆದರು. ಗೇಣಿದಾರರ ಒಕ್ಕಲೆಬ್ಬಿಸುವುದನ್ನು ಅಧಿನಿಯಮದ ಪ್ರಕರಣ ೨೨ಕ್ಕನುಗುಣವಾಗಿ ಮಾತ್ರ ಮಾಡಬಹುದಾಗಿದೆ. ಖಾಯಂ ಗೇಣಿದಾರರಿಗೆ ಗೇಣಿ ನೀಡಿದ ಅಥವಾ ಕಂಪನಿಗಳಿಂದ ಗೇಣಿ ನೀಡಿದ ಸಂಸ್ಥೆಯಿಂದ ಅಥವಾ ಇತರ ವ್ಯಕ್ತಿಗಳ ಗುಂಪುಗಳು ಸಾಂಘಿಕವಾಗಿರಲಿ ಅಥವಾ ಇಲ್ಲದಿರಲಿ ಅವುಗಳಿಂದ ಸ್ವತ್ತನ್ನು ಹೊಂದಿರುವ ಸಮರ್ಥ ದತ್ತಿ ಸಂಸ್ಥೆಗಳಿಂದ (ಚಾರಿಟಬಲ್) ಅಥವಾ ಇತರ ಸಂಸ್ಥೆಗಳಿಂದ ಜಮೀನನ್ನು ಪುನಃ ಸ್ವಾಧೀನ ಪಡಿಸಿಕೊಳ್ಳಲಾಗದು. ಇರುವಂಥ ಹಿಡುವಳಿಗಳ ವಿಷಯದಲ್ಲಿ ೨೭ ಪ್ರಮಾಣಿತ ಎಕರೆಗಳಿಗಿಂತ ಹೆಚ್ಚಿರುವ ಭೂಮಿಯನ್ನು ಹೆಚ್ಚುವರಿ ಭೂಮಿ ಎಂದು ಪರಿಗಣಿಸಿ ಅದನ್ನು ಸರ್ಕಾರದ ಒಡೆತನಕ್ಕೆ ಸೇರಿಸಿಕೊಳ್ಳಲಾಯಿತು. ಭವಿಷ್ಯದಲ್ಲಿ ಹಿಡುವಳಿಗಳ ಗರಿಷ್ಠ ಮಿತಿ ೧೮ ಪ್ರಮಾಣಿತ ಎಕರೆಗಾಗಿ ಸೀಮಿತಗೊಳಿಸಲಾಯಿತು.

ಆದರೆ ೧೯೬೧ರ ಭೂ ಸುಧಾರಣಾ ಕಾನೂನಿನಲ್ಲಿ ಹಲವಾರು ದೋಷಗಳಿದ್ದುದರಿಂದ 'ಉಳುವವನೇ ಹೊಲದೊಡೆಯ'ನೆಂಬ ನೀತಿಯ ಈಡೇರಿಕೆ ಸಾಧ್ಯವಾಗದೆ ಹೋದುದು ಸುಸ್ಪಷ್ಟ. ಎಪ್ಪತ್ತರ ದಶಕದಲ್ಲಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರ ಸಂಪುಟ ಒಂದು ಕ್ರಾಂತಿಕಾರಿ ಭೂ ಮಸೂದೆಯನ್ನು ಪ್ರಸ್ತಾಪಿಸಿ ೧೯೬೧ರ ಕಾನೂನಿಗೆ ಹಲವಾರು ತಿದ್ದುಪಡಿಗಳನ್ನು ಸೇರಿಸಿತು. ಅಂತೆಯೇ ೧೯೭೩ರ ಸಮಗ್ರ ಭೂಸುಧಾರಣಾ ಕಾನೂನಿನನ್ವಯ ಸರಕಾರದ ಬಹುದಿನದ ಕನಸಾಗಿದ್ದ ಭೂನೀತಿ ಈಡೇರುವಂತಾಯಿತು. ಈ ಕಾನೂನಿನ ನಿಯಮಗಳನ್ವಯ ಹಲವಾರು ಭೂನ್ಯಾಯ ಮಂಡಳಿಗಳನ್ನು ರಚಿಸಿ ಭೂಮಿಯ ಒಡೆತನದ ವಿವಾದಗಳನ್ನು (ಒಕ್ಕಲು–ಮಾಲೀಕರ ನಡುವೆ) ಇತ್ಯರ್ಥಗೊಳಿಸಿ ನ್ಯಾಯ ಒದಗಿಸಲಾಯಿತು. ಕುಂದಾಪುರ ತಾಲೂಕಿನಲ್ಲೂ ಗೇಣಿದಾರರು ಭೂ ಮಾಲಿಕರಾಗುತ್ತಿದ್ದಂತೆ, ಗೇಣಿ ಕೊಟ್ಟಿದ್ದ ಭೂ ಮಾಲೀಕರು ತಮ್ಮ ಜಮೀನನ್ನು ಕಳೆದುಕೊಂಡರು.

## ಭೂ ಸುಧಾರಣೆಗಳು

ಗೇಣಿದಾರ ಮತ್ತು ಭೂ ಮಾಲೀಕರ ನಡುವಿನ ಸಂಬಂಧಕ್ಕೆ ಯಾವುದೇ ಶಾಸನಬದ್ಧ ಆಧಾರವಿರಲಿಲ್ಲ. ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಸಾಗುವಳಿದಾರರು ತಮ್ಮ ಕುಂದುಕೊರತೆಗಳ ಪರಿಹಾರಕ್ಕಾಗಿ ಸರ್ಕಾರವು ತಮ್ಮನ್ನು ರಕ್ಷಿಸಲು ಬರುವಂತೆ ಕೋರುತ್ತಿದ್ದರು. ಆದ್ದರಿಂದ ಭೂ ಮಾಲೀಕರಹಿತ ಗೇಣಿದಾರರ ರಕ್ಷಣೆಗೆ ಭೂ ಸುಧಾರಣೆಗಳನ್ನು ರೂಪಿಸಲಾಯಿತು. ಗೇಣಿದಾರರ ರಕ್ಷಣೆಯ ಸಲುವಾಗಿ ಸ್ವಾತಂತ್ರ್ಯ ಬಂದ ನಂತರ ಭಾರತದಲ್ಲಿನ ವಿವಿಧ ರಾಜ್ಯಗಳು ಗೇಣಿದಾರಿಕೆ ಪದ್ಧತಿಯ ಸುಧಾರಣೆಯ ಬಗೆಗೆ ಶಾಸನಗಳನ್ನು ಹೊರಡಿಸಿತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ೧೯೫೪ರ ಮದರಾಸು ಒಕ್ಕಲೆಬ್ಬಿಸುವಿಕೆಯ ನಿರ್ಬಂಧ ಶಾಸನದನ್ವಯ ಬಂದಿತು. ಅದು ಭೂ ಮಾಲೀಕರಿಂದ ಗೇಣಿದಾರರು ಬಲಾತ್ಕಾರವಾಗಿ ಹೊರದೂಡಲ್ಪಟ್ಟರೇ ಅಥವಾ ಸ್ವಇಚ್ಛೆಯಿಂದ ಗೇಣಿದಾರರು ಹೊರಬಂದರೆ ಎಂಬುದನ್ನು ಗಮನಿಸುವುದು ಇದರ ಉದ್ದೇಶವಾಗಿತ್ತು. ಜಿಲ್ಲೆಯು ಹೊಸ ಕರ್ನಾಟಕ ರಾಜ್ಯದ ಭಾಗವಾದಾಗ ಕರ್ನಾಟಕ ಸರ್ಕಾರವು ಈ ಶಾಸನದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತು.

ಹೊಸ ಕರ್ನಾಟಕ ರಾಜ್ಯ ರೂಪುಗೊಂಡ ನಂತರ, ಮೇ ೧೯೫೭ರಲ್ಲಿ ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿಕೆ ಕೃಷಿ ಭೂಮಿ ಕಾನೂನುಗಳ ಸಮಿತಿಯನ್ನು ನೇಮಿಸಲಾಯಿತು. ಗೇಣಿ ನಿರ್ಧಾರ ಮಾಡುವುದು, ಸಾಗುವಳಿಗಾಗಿ ಭದ್ರತೆ, ಸ್ವಂತ ಉಳುಮೆಗಾಗಿ ಭೂಮಾಲೀಕರು ಜಮೀನನ್ನು ವಾಪಸು ಪಡೆಯುವ ಹಕ್ಕು, ಗೇಣಿದಾರರಿಗೆ ಭೂಮಿಯನ್ನು ಖರೀದಿಸುವ ಹಕ್ಕು ಮತ್ತು ಭೂಒಡೆಯರಿಗೆ ಸಂದಾಯ ಮಾಡಬೇಕಾದ ಪರಿಹಾರಧನ ಮತ್ತು ಭೂ ಹಿಡುವಳಿಗಳ ಗರಿಷ್ಠ ಮಿತಿ, ಕೃಷಿಯೇತರರಿಗೆ ಭೂಮಿಯ ಪರಭಾರೆ ಮಾಡುವುದನ್ನು ತಡೆಯುವುದು ಇವುಗಳ ಬಗ್ಗೆ ಸಮಿತಿಯು ವರದಿ ಸಲ್ಲಿಸುವಂತೆ ತಿಳಿಸಿತು. ಸಮಿತಿಯು ೧೯೫೪ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಒಕ್ಕಲೆಬ್ಬಿಸುವುದರ ನಿರ್ಬಂಧ ಶಾಸನ ೧೯೫೪) ಜಾರಿಯಲ್ಲಿದ್ದ ಗೇಣಿದಾರ ಕಾನೂನು  ಒಕ್ಕಲುತನವನ್ನು ಸ್ಥಗಿತಗೊಳಿಸಿದೆ ಎಂದು ಭಾವಿಸಿ ಗೇಣಿದಾರಿಕೆ ಕಾನೂನು ಪ್ರಾರಂಭವಾದ ದಿನಾಂಕಕ್ಕೆ ಮೊದಲು ಆರು ವರ್ಷಗಳ ಅವಧಿಗೆ ನಿರಂತರವಾಗಿ ಭೂಮಿಯ ಹಿಡುವಳಿಯನ್ನು ಹೊಂದಿದ್ದ ಎಲ್ಲ ಗೇಣಿದಾರರು ಪುನಃ ಭೂ ಸ್ವಾಧೀನ ಪಡೆಯಲಿಕ್ಕಾಗಿ ಹೊಸ ಅಧಿನಿಯಮ ಪ್ರಾರಂಭದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಬೇಕೆಂದು ಎಂದು ತನ್ನ ವರದಿಯನ್ನು ನೀಡಿತು. ಪರಿಹಾರಧನ ಸಂದಾಯದ ವಿಷಯದಲ್ಲಿ, ಸಮಿತಿಯು ನ್ಯಾಯಸಮ್ಮತವಾದ ವ್ಯವಸ್ಥೆಯನ್ನು ಶಿಫಾರಸು ಮಾಡಿತು.  ಅದರಂತೆ ಪರಿಹಾರಧನವನ್ನು ಸಾಗುವಳಿ ಮಾಡುತ್ತಿದ್ದ ಗೇಣಿದಾರನು ಭೂಮಿಗೆ ಎಷ್ಟು ಗೇಣಿ ಸಂದಾಯ ಮಾಡುತ್ತಿದ್ದನೋ ಅದೇ ಪ್ರಮಾಣದಲ್ಲಿಯೇ ಹಾಗೂ ಭೂ ಮಾಲೀಕರು ಮತ್ತು ಮಧ್ಯವರ್ತಿ ಗೇಣಿದಾರರ ನಡುವೆ ವಿತರಿಸಬೇಕು. ಗೇಣಿಯು ವಸ್ತು ರೂಪದಲ್ಲಿದ್ದಲ್ಲಿ ಪರಿಹಾರಧನವನ್ನು ಉತ್ಪನ್ನ ಗೇಣಿಯನ್ನು ಹಂಚಿಕೊಂಡಂತೆಯೇ ಅದೇ ಪ್ರಮಾಣದಲ್ಲಿಯೇ ಹಂಚಬೇಕು.

ಮೈಸೂರು ಗೇಣಿದಾರಿಕೆ ಭೂ ಕಾನೂನುಗಳ ವರದಿಯನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಸರ್ಕಾರವು ಮೈಸೂರು ವಿಧಾನಮಂಡಲದಲ್ಲಿ 'ಕರ್ನಾಟಕ ಭೂ ಸುಧಾರಣಾ' ಎಂಬ ವಿಧೇಯಕವೊಂದನ್ನು ಮಂಡಿಸಿತು. ಆ ವಿಧೇಯಕದ ಮೇಲೆ ಕರ್ನಾಟಕ ವಿಧಾನಮಂಡಲದಲ್ಲಿ ಸಾಮಾನ್ಯ ಚರ್ಚೆಯಾದ ನಂತರ, ಈ ವಿಧೇಯಕವನ್ನು ಎರಡೂ ಸದನಗಳ ಜಂಟಿ ಪ್ರವರ ಆಯ್ಕೆ ಸಮಿತಿಯ ಪರಾಮರ್ಶೆಗೆ ಒಪ್ಪಿಸಿತು. ಅದು ೧೯೬೧ರ ಮಾರ್ಚ್ ೨೫ರಂದು ತನ್ನ ವರದಿಯನ್ನು ಸಲ್ಲಿಸಿತು. ರಾಜ್ಯದ ವಿಧಾನಮಂಡಲದಲ್ಲಿ ವರದಿಯ ಬಗ್ಗೆ ಚರ್ಚೆ ನಡೆಯಿತು. ಅದೇ ವರ್ಷ (೧೯೬೧) ಮೈಸೂರು ಭೂ ಸುಧಾರಣಾ ವಿಧೇಯಕವು ಅಂಗೀಕೃತವಾಯಿತು. ೧೯೬೨ರ ಮಾರ್ಚ್ ತಿಂಗಳಲ್ಲಿ ಅದಕ್ಕೆ ರಾಷ್ಟ್ರಪತಿ ಸಮ್ಮತಿ ದೊರೆಯಿತು. ಆದರೂ, ಈ ಅಧಿನಿಯಮದ ಕೆಲವು ಕಲಮುಗಳಲ್ಲಿ (ಉಪಬಂಧಗಳಲ್ಲಿ) ತಿದ್ದುಪಡಿ ಮಾಡುವುದು ಅಗತ್ಯವೆಂದು ಕಂಡುಬಂದಿತು ಮತ್ತು ಅದರಂತೆ ೧೯೬೫ರಲ್ಲಿ ತಿದ್ದುಪಡಿ ಮಾಡಲಾಯಿತು.

ಸ್ವಾತಂತ್ರ್ಯವನ್ನನುಸರಿಸಿ ದೇಶಾದ್ಯಂತ ಭೂ ಸುಧಾರಣಾ ಕಾರ್ಯಕ್ರಮಗಳನ್ನು ಎರಡು ಪ್ರತ್ಯೇಕ ಉದ್ದೇಶದಿಂದ ಕೈಗೊಳ್ಳಲಾಯಿತು. ೧) ಹಿಂದಿನಿಂದ ಪಿತ್ರಾರ್ಜಿತವಾಗಿ ಬಂದ ಕೃಷಿಭೂಮಿಗೆ ಸಂಬಂಧಪಟ್ಟಂತೆ ಬರುವ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಇರುವಂಥ ಅಡ್ಡಿಗಳನ್ನು ಸುಧಾರಿಸುವುದು ಅದರಿಂದಾಗಿ, ಸಾಧ್ಯವಾದಷ್ಟು ತ್ವರಿತವಾಗಿ ಕೃಷಿ ಪದ್ಧತಿಯಲ್ಲಿ ಗುಣಮಟ್ಟವನ್ನು ಏರಿಸುವುದು ಮತ್ತು ಉನ್ನತ ಮಟ್ಟದ ಕೃಷಿ ಪದ್ಧತಿಯಿಂದ ಕೃಷಿ ಆದಾಯದ ಉತ್ಪಾದಕತೆಯನ್ನು ಹೆಚ್ಚಿಸುವ ಪರಿಸ್ಥಿತಿಯನ್ನು ರೂಪಿಸುವುದು ಮತ್ತು ೨) ಕೃಷಿ ಪದ್ಧತಿಯೊಳಗಿನ ಶೋಷಣೆಯ ಎಲ್ಲ ದುಷ್ಟಶಕ್ತಿಗಳನ್ನು ಮತ್ತು ಸಾಮಾಜಿಕ ಅನ್ಯಾಯವನ್ನು ತೊಡೆದು ಹಾಕುವುದು ಆ ಮೂಲಕ ಗ್ರಾಮೀಣ ಜನರ ಎಲ್ಲಾ ವರ್ಗಗಳಿಗೆ ಸ್ಥಾನಮಾನ ಮತ್ತು ಅವಕಾಶವನ್ನು ಖಾತರಿಪಡಿಸುವುದು ಮತ್ತು ಉಳುಮೆ ಮಾಡುವವನಿಗೆ ಭದ್ರತೆಯನ್ನೊದಗಿಸುವುದು.

ರಾಜ್ಯ ಪುನಾರಚನೆಗೆ ಮೊದಲು, ಗೇಣಿದಾರಿಕೆ ಕಾನೂನು ಮೈಸೂರು, ಗುಲಬರ್ಗಾ, ಬೆಳಗಾವಿ ಮತ್ತು ಮದರಾಸು ಪ್ರದೇಶಗಳಲ್ಲಿ (ಹೈದರಾಬಾದ್ ವಿನಃ) ಜಾರಿಯಲ್ಲಿದ್ದಿತು. ಅವು ವಿಶಾಲ ಮೈಸೂರು ರಾಜ್ಯಕ್ಕೂ ಪಾರಂಪರಿಕವಾಗಿ ಬಂದಿತು. ಈ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳನ್ನು ಗೇಣಿದಾರರಿಗೆ ಹೆಚ್ಚಿನ ಭದ್ರತೆ ಒದಗಿಸಲು ಮಾರ್ಚ್ ೧೯೫೭ರಲ್ಲಿ ತಿದ್ದುಪಡಿ ಮಾಡಲಾಯಿತು. ಈ ಎಲ್ಲ ಕಾನೂನುಗಳು ಗೇಣಿಗೆ ಭದ್ರತೆಯನ್ನು ಒದಗಿಸುವುದು ಮತ್ತು ಅನ್ಯಾಯಯುತವಾಗಿ ಭೂ ಮಾಲೀಕರು ಗೇಣಿದಾರರನ್ನು ಭೂಮಿಯಿಂದ ಒಕ್ಕಲೆಬ್ಬಿಸುವುದನ್ನು ತಡೆಯುವುದಾಗಿದೆ. ಗೇಣಿದಾರರು ಬಿಟ್ಟುಕೊಟ್ಟ ಭೂಮಿಯನ್ನು ತಹಸೀಲ್ದಾರರ ಮುಂದೆ ನೋಂದಣಿ ಮಾಡಬೇಕಾಗಿತ್ತು. ಇದು ಗೇಣಿದಾರರ ಆನುವಂಶಿಕ ಹಕ್ಕನ್ನು ಹಾಗೂ ಗೇಣಿದಾರಿಕೆಯನ್ನು ಕಾಲಕ್ಕಿಂತ ಮುಂಚೆ ಕೊನೆಗೊಳಿಸಕೂಡದು ಎಂಬುದರ ಸಲುವಾಗಿ ಉಪಬಂಧಗೊಂಡಿತ್ತು. ೧೯೬೧ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮವು ಎಲ್ಲ ಗೇಣಿದಾರಿಕೆ ಕಾನೂನು ಉಪಬಂಧಗಳ ಸುಧಾರಣೆಗಳೊಂದಿಗೆ ಪುನಃ ೨-೧೦-೧೯೬೫ರಿಂದ ಕಟ್ಟುನಿಟ್ಟಾಗಿ ಮತ್ತು ವ್ಯಾಪಕವಾಗಿ ಜಾರಿಗೆ ಬಂದಿತು. ಗೇಣಿದಾರರ ಗೇಣಿ ಭದ್ರತೆಯನ್ನು ಶಾಶ್ವತಗೊಳಿಸುವ ಉದ್ದೇಶದಿಂದ ೧೯೬೧ ರಿಂದ ೧೯೬೨ರ ವರೆಗಿನ ನಡುವಿನ ಅವಧಿಯಲ್ಲಿ ೧೯೬೧ರ ಮೈಸೂರು ಗೇಣಿದಾರರ (ಒಕ್ಕಲೆಬ್ಬಿಸುವುದರಿಂದ ತಾತ್ಕಾಲಿಕ ರಕ್ಷಣೆ) ಅಧಿನಿಯಮವೆಂದು ಕರೆಯಲಾಗುವ ಹೊಸ ಕಾನೂನು ಶಾಸನವಾಗಿ ಜಾರಿಗೆ ಬಂದಿತು. ಅದು ಏಕರೂಪವಾದ ೧೯೬೧ರ ಭೂ ಸುಧಾರಣಾ ಅಧಿನಿಯಮ ಜಾರಿಗೆ ಬರುವ ತನಕ ಚಾಲ್ತಿಯಲ್ಲಿತ್ತು. ೧೯೫೭ರ ಸೆಪ್ಟೆಂಬರ್ ನಂತರ ಭೂಸುಧಾರಣಾ ಅಧಿನಿಯಮದ ಪ್ರಕರಣ ೭, ಸ್ವಾಧೀನ ಕಳೆದುಕೊಂಡ ಗೇಣಿದಾರರಿಗೆ  ಭೂ ಸ್ವಾಧೀನತೆಯನ್ನು ಮತ್ತೆ ಒದಗಿಸಿತು. ಪ್ರಕರಣ-೨೨ ಮತ್ತು ೨೩ ಅನ್ಯಾಯಯುತವಾಗಿ ಒಕ್ಕಲೆಬ್ಬಿಸುವ ವಿರುದ್ಧ ಪರಿಣಾಮಕಾರಿಯಾದ ರಕ್ಷಣೆಯನ್ನೊದಗಿಸಿತು. ಪ್ರಕರಣ-೨೫ ಭೂಮಾಲೀಕನಿಗೆ ಗೇಣಿದಾರನು ದುರುದ್ದೇಶದಿಂದ ಭೂಮಿಯನ್ನು ಬಿಟ್ಟುಕೊಡುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿತು. ಹೀಗೆ ಭೂಮಿ ಬಿಟ್ಟುಕೊಡುವುದನ್ನು ನ್ಯಾಯಮಂಡಳಿಯ ಮುಂದೆ ಲಿಖಿತದಲ್ಲಿ ನೀಡಬೇಕಿದ್ದಿತು.

ವಿಭಜನೆ ಪೂರ್ವದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಟ್ಟಿಯನ್ನು ಆ ಜಿಲ್ಲಾ ಗೆಜೆಟಿಯರ್ ಸಂಪುಟದಲ್ಲಿ ನೀಡಲಾಗಿದೆ. ಆದ್ದರಿಂದ ಪ್ರಸ್ತುತ ಸಂಪುಟದಲ್ಲಿ ಹೊಸತಾಗಿ ರಚಿಸಲಾಗಿರುವ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಟ್ಟಿಯನ್ನು ಮಾತ್ರ ಮುಂದೆ ನೀಡಲಾಗಿದೆ.

## ಗೇಣಿದಾರಿಕೆ ರದ್ಧತಿ

ಗೇಣಿದಾರರು ಮತ್ತು ಭೂ ಮಾಲೀಕರ ನಡುವಿನ ಸಂಬಂಧಕ್ಕೆ ಯಾವುದೇ ಶಾಸನಾಧಾರವಿಲ್ಲ ಮತ್ತು  ಸಾಗುವಳಿದಾರರು ಬಾಯಿಮಾತಿನ ಕೆಲವು ಒಪ್ಪಂದದ ಪರಿಣಾಮವಾಗಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ತಮ್ಮ ಕುಂದುಕೊರತೆಗಳ ಪರಿಹಾರ ಕೋರಿ ತಮ್ಮನ್ನು ಕಾಪಾಡಲು ಸರ್ಕಾರವು ಮಧ್ಯೆ ಪ್ರವೇಶಿಸುವಂತೆ ಒತ್ತಾಯಿಸಿದರು. ಆದ್ದರಿಂದ ಭೂಮಾಲೀಕರಿಲ್ಲದ ಗೇಣಿದಾರರ ರಕ್ಷಣೆಯ ಉದ್ದೇಶದಿಂದಾಗಿ ಕೃಷಿ ಸುಧಾರಣೆ ರೂಪಗೊಳ್ಳಲು ಕಾರಣವಾಯಿತು. ಭೂ ಮಾಲೀಕರಿಂದ ಗೇಣಿದಾರರು

## ಹೊಸದಾಗಿ ರೂಪುಗೊಂಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಟ್ಟಿ

| ಕ್ರ.ಸಂ. | ಜಿಲ್ಲಾಧಿಕಾರಿಯ ಹೆಸರು | ರಿಂದ | ವರೆಗೆ |
|---|---|---|---|
| ೧ | ಜಿ. ಕಲ್ಪನ ಐ.ಎ.ಎಸ್., | ೨೫-೮-೧೯೯೭ | ೧೫-೧೨-೧೯೯೭ |
| ೨ | ಬಿ.ಎಚ್. ಅನಿಲ್‌ಕುಮಾರ್ ಐ.ಎ.ಎಸ್., | ೧೯-೧೨-೧೯೯೭ | ೧೦-೬-೧೯೯೮ |
| ೩ | ಗಂಗಾರಾಂ ಬಡೇರಿಯಾ ಐ.ಎ.ಎಸ್., | ೧೧-೬-೧೯೯೮ | ೨೩-೪-೨೦೦೦ |
| ೪ | ಗೌರವ್ ಗುಪ್ತ ಐ.ಎ.ಎಸ್., | ೨೩-೪-೨೦೦೦ | ೩-೭-೨೦೦೨ |
| ೫ | ಎಸ್.ಆರ್.ಉಮಾಶಂಕರ್ ಐ.ಎ.ಎಸ್., | ೪-೭-೨೦೦೨ | ೨೩-೯-೨೦೦೪ |
| ೬ | ಶ್ಯಾಮ್‌ಭಟ್ ಐ.ಎ.ಎಸ್., | ೨೩-೯-೨೦೦೪ | ೨-೧-೨೦೦೬ |
| ೭ | ಆರ್. ಶಾಂತರಾಜ್ ಕೆ.ಎ.ಎಸ್., (ಪ್ರಭಾರ) | ೨-೧-೨೦೦೬ | ೧೦-೫-೨೦೦೬ |
| ೮ | ವಿ. ಪೊನ್ನುರಾಜ್ ಐ.ಎ.ಎಸ್., | ೧೦-೫-೨೦೦೬ | ೨೭-೦೧-೨೦೦೮ |
| ೯ | ಪಿ. ಹೇಮಲತ ಐ.ಎ.ಎಸ್., | ೨೭-೦೧-೨೦೦೮ | ಈವರೆಗೆ |

ಇಚ್ಛಾನುಸಾರ ಹೊರಕ್ಕೆ ಹೋಗಲಿಲ್ಲ. ಇದಕ್ಕಾಗಿ ಕಾಲಕಾಲಕ್ಕೆ ವಿವಿಧ ಶಾಸನಗಳನ್ನು ಹೊರಡಿಸಲಾಯಿತು. ಗೇಣಿ ರದ್ಧತಿಯ ಪರಿಣಾಮವಾಗಿ ಹೆಚ್ಚುವರಿ ಭೂಮಿಗಳನ್ನು ಭೂಚ್ಯುತ ಗೇಣಿದಾರರಿಗೆ ಕೊಡಲಾಯಿತು. ವಾರ್ಷಿಕ ವರಮಾನ ರೂ. ೨೦೦೦/-ಕ್ಕೆ ಅಧಿಕವಿಲ್ಲದ ಮಾಜಿ ಸೈನಿಕ ಸಿಬ್ಬಂದಿಯು ಸೇರಿದಂತೆ ಕೃಷಿ ಕಾರ್ಮಿಕರು, ಭೂರಹಿತ ವ್ಯಕ್ತಿಗಳು ಇದರ ವ್ಯಾಪ್ತಿಯಡಿ ಬಂದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಶೇಕಡಾ ೫೦ರಷ್ಟು ಭೂಮಿಯನ್ನು ಮೀಸಲಿಡಲಾಯಿತು.

ಅನುಭೋಗದಾರರೆಂದು ನೋಂದಣಿ ಪಡೆಯಲಿಕ್ಕೆ ಅರ್ಹರಾಗಲು, ಗೇಣಿದಾರರು 'ಎ', 'ಬಿ' ಮತ್ತು 'ಸಿ' ವರ್ಗದ ಭೂಮಿ ವಿಷಯದಲ್ಲಿ ನಿವ್ವಳ ವಾರ್ಷಿಕ ವರಮಾನದ ೧೫ರಷ್ಟು ಮತ್ತು 'ಡಿ'ವರ್ಗದ ಭೂಮಿ ವಿಷಯದಲ್ಲಿ ಅಂಥ ವರಮಾನಕ್ಕೆ ಶೇಕಡಾ ೨೦ರಷ್ಟು ಸಮನಾದ ಮೊಬಲಗನ್ನು ಸರ್ಕಾರಕ್ಕೆ ಸಂದಾಯ ಮಾಡಬೇಕು. ಈ ಮೊತ್ತವನ್ನು ಅವರು ಒಂದೇ ಇಡುಗಂಟಾಗಿ ಇಲ್ಲವೇ ವರ್ಷಕ್ಕೆ ಶೇಕಡಾ ೪ರ ಬಡ್ಡಿಯೊಂದಿಗೆ ೨೦ ವಾರ್ಷಿಕ ಕಂತುಗಳಲ್ಲಿ ಸಂದಾಯಮಾಡಲು ಅನುಮತಿ ನೀಡಲಾಯಿತು. ಖಾಯಂ ಗೇಣಿದಾರರ ವಿಷಯದಲ್ಲಿ ಗೇಣಿ ಮತ್ತು ಭೂ ಕಂದಾಯದ ನಡುವಿನ ವ್ಯತ್ಯಾಸದ ಆರರಷ್ಟು ಮೊಬಲಗನ್ನು ಸಂದಾಯ ಮಾಡಬೇಕು. ಆದರೂ. ಈ ಗೇಣಿದಾರರನ್ನು ಭೂಮಿಗಳನ್ನು ವಿಭಾಗಿಸುವುದು ಉಪಗೇಣಿಗೆ ಬಿಡುವುದು, ಭೂಮಿಯನ್ನು ಬೇಸಾಯ ಮಾಡದೇ ಬರಡಾಗಿಡುವುದು, ಕೃಷಿಯೇತರ ಉದ್ದೇಶಕ್ಕೆ ಭೂಮಿಯನ್ನು ಬಳಸುವುದು, ಗೇಣಿ ಸಂದಾಯ ಮಾಡಲು ತಪ್ಪುವುದು ಮತ್ತು ಭೂಮಿಗೆ ಖಾಯಂ ಹಾನಿಯನ್ನುಂಟುಮಾಡುವುದು ಇನ್ನಿತರ ಕಾರಣಗಳಿಗೆ ಒಕ್ಕಲೆಬ್ಬಿಸಬಹುದು.

ಕರ್ನಾಟಕ ಸರ್ಕಾರವು ೧೯೫೨ರ ಮೈಸೂರು ಗೇಣಿದಾರಿಕೆ ಅಧಿನಿಯಮವನ್ನು ತಿದ್ದುಪಡಿ ಮಾಡಲಿಕ್ಕಾಗಿ ವಿಧೇಯಕವೊಂದನ್ನು ವಿಧಾನಮಂಡಲದಲ್ಲಿ ಅಕ್ಟೋಬರ್ ೧೯೫೪ರಂದು ಮಂಡಿಸಿತು. ಅದು ರಕ್ಷಿತ ಗೇಣಿದಾರರು, ರಕ್ಷಣೆಯಿಲ್ಲದ ಗೇಣಿದಾರರು ಮತ್ತು ಸಾಮಾನ್ಯ ಗೇಣಿದಾರರು ಎಂದು ಮೂರು ಪ್ರವರ್ಗಗಳನ್ನು ಗುರುತಿಸಿತು. ಆದರೆ ಗೇಣಿದಾರರನ್ನು ಉಪ ವಿಭಾಗ ಮಾಡಿದ್ದರ ಕಾರಣದಿಂದಾಗಿ ಒಕ್ಕಲೆಬ್ಬಿಸಕೂಡದೆಂಬುದರ ಹೊರತಾಗಿ ಒಕ್ಕಲೆಬ್ಬಿಸುವ ಸಾಮಾನ್ಯ ಕಾರಣಗಳು ಯಾವುದೇ ಬದಲಾವಣೆಯಿಲ್ಲದೆ ಹಾಗೆಯೇ ಉಳಿದುಕೊಂಡಿತು. ರಕ್ಷಿತ ಗೇಣಿದಾರರನ್ನು ಭೂಮಾಲೀಕರು ಸ್ವಂತ ಬೇಸಾಯಕ್ಕಾಗಿ ಭೂಮಿಯನ್ನು ಪ್ರಾಮಾಣಿಕ ಬಳಸುತ್ತಾರೆಂಬುದರ ಮೇಲೆ ಒಕ್ಕಲೆಬ್ಬಿಸಬಹುದು ಮತ್ತು ಅನುಮತಿಸಿದ ಹಿಡುವಳಿಯ ನಾಲ್ಕನೆಯ ಒಂದು ಭಾಗವನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಬಹುದಾಗಿದೆ. ರಕ್ಷಿತ ಗೇಣಿದಾರರನ್ನು, ಭೂಮಾಲೀಕನು ಸ್ವಂತ ಬೇಸಾಯಕ್ಕೆ ಬೇಕೆಂದು ಒಂದು ವರ್ಷಕ್ಕೆ ಮೊದಲು ನೋಟೀಸು ನೀಡುವುದರಿಂದ ಒಕ್ಕಲೆಬ್ಬಿಸಬಹುದು. ಒಕ್ಕಲೆದ್ದ ಗೇಣಿದಾರನು ಭೂ ಮಾಲೀಕನು ಎರಡು ವರ್ಷಗಳೊಳಗೆ ಸ್ವಂತ ಭೂಮಿಯ

ಬೇಸಾಯ ಮಾಡದಿದ್ದ ಪಕ್ಷದಲ್ಲಿ, ಭೂಮಿಯನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ. ಇತರ ಎಲ್ಲ ಗೇಣಿದಾರರಿಗೆ ಕನಿಷ್ಠ ಹತ್ತು ವರ್ಷಗಳ ಅವಧಿಯನ್ನು ನೀಡಲಾಗಿದ್ದು, ಆ ಅವಧಿಯು ಅಂತ್ಯಗೊಂಡ ನಂತರ ಅವರನ್ನು ಒಕ್ಕಲೆಬ್ಬಿಸಬಹುದಾಗಿದೆ. ರಕ್ಷಣೆಯಿಲ್ಲದ ಗೇಣಿದಾರರಂತೆಯೇ ಇವರಿಗೂ ಒಂದು ವರ್ಷದ ನೋಟೀಸು ನೀಡಿ ಒಕ್ಕಲೆಬ್ಬಿಸಬಹುದಾಗಿದೆ.

ರಕ್ಷಿತ ಮತ್ತು ರಕ್ಷಿತವಲ್ಲದ ಗೇಣಿದಾರರು ಮಾತ್ರ ಖರೀದಿಸುವ ಭೂಮಿಯು ೨೫ ನಿಗದಿತ ಎಕರೆಯನ್ನು ಹೊಂದಿರತಕ್ಕದ್ದು ಮತ್ತು ಖರೀದಿಯ ನಂತರ ಭೂಮಾಲೀಕನಲ್ಲಿ ಉಳಿಯುವ ಒಟ್ಟು ವಿಸ್ತೀರ್ಣವು ಅನುಮತಿಸಬಹುದಾದ ಹಿಡುವಳಿಗಿಂತ ಕಡಿಮೆಯಿರಕೂಡದು ಎಂಬ ಷರತ್ತಿನ ಮೇರೆಗೆ ಭೂಮಿಯನ್ನು ಖರೀದಿಸಲು ಹಕ್ಕುಳ್ಳವನಾಗಿರುತ್ತಾನೆ. ಹೀಗೆ ಹತ್ತು ವರ್ಷಗಳಿಗೆ ಹೆಚ್ಚಿಲ್ಲದೆ ಭೂಮಿಯನ್ನು ಖರೀದಿಸುವ ಗೇಣಿದಾರನು ಆರಕ್ಕೆ ಮೀರದ ಕಂತಿನಲ್ಲಿ ಅಥವಾ ಇಡುಗಂಟಾಗಿ ಮಾರುಕಟ್ಟೆ ಮೌಲ್ಯವನ್ನು ಸಂದಾಯ ಮಾಡಬೇಕು. ಖರೀದಿಯ ನಂತರ ಗೇಣಿದಾರನಿಗೆ ಮಾರಾಟ ಮಾಡಿದ ಭೂಮಿಯನ್ನು ವರ್ಗಾಯಿಸುವುದು, ದಾನವಾಗಿ ನೀಡುವುದು ಮುಂತಾದ ಹಕ್ಕು ಇರುವುದಿಲ್ಲ.

## ಭೂ ನ್ಯಾಯಮಂಡಳಿ

೧೯೬೧ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮದ ಪ್ರಕರಣ–೪೮ ಪ್ರತಿ ತಾಲೂಕಿನಲ್ಲಿ ನ್ಯಾಯಮಂಡಳಿಯನ್ನು ರಚಿಸಲು ಅಧಿಕಾರ ನೀಡಿದೆ. ಈ ನ್ಯಾಯಮಂಡಳಿಯಲ್ಲಿ ಸಂಬಂಧಪಟ್ಟ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸರ್ಕಾರದಿಂದ ನಾಮ ನಿರ್ದೇಶಿತರಾದ ನಾಲ್ವರು ಸದಸ್ಯರು ಮತ್ತು ಸಂಬಂಧಪಟ್ಟ ತಹಸೀಲ್ದಾರರು ಕಾರ್ಯದರ್ಶಿಯಾಗಿಯೂ ಇರುತ್ತಾರೆ. ಕಾನೂನಿನಂತೆ ಸರ್ಕಾರೇತರ ಸದಸ್ಯರಲ್ಲಿ ಒಬ್ಬ ಸದಸ್ಯರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು. ಪ್ರಕರಣಗಳನ್ನು ಬಹುಮತದಿಂದ ತೀರ್ಮಾನಿಸಲಾಗುತ್ತದೆ. ಮತ್ತು ಕನಿಷ್ಠ ಮೂವರು ಇದ್ದಲ್ಲಿ ಕೋರಂ ಆಗುತ್ತದೆ. ಆದರೆ, ಆ ಮೂವರಲ್ಲಿ ಅಧ್ಯಕ್ಷರಿಲ್ಲದಿದ್ದಲ್ಲಿ ಅವಶ್ಯ ಕೋರಂ ಆಗುವುದಿಲ್ಲ. ಉದ್ದೇಶಿತ ಅರ್ಜಿದಾರರ ಅನುಕೂಲಕ್ಕಾಗಿ, ರಾಜ್ಯದ ಪ್ರತಿಯೊಂದು ತಾಲೂಕಿಗೆ ಒಂದಂತೆ ನ್ಯಾಯಮಂಡಳಿಯನ್ನು ರಚಿಸಲಾಗಿದೆ ಮತ್ತು ಕಾರ್ಯ ಹೆಚ್ಚಿದಲ್ಲಿ ಒಂದೇ ತಾಲೂಕಿನಲ್ಲಿ ಎರಡು ಅಥವಾ ಮೂರು ನ್ಯಾಯಮಂಡಳಿಗಳನ್ನು ಸಹ ರಚಿಸಲಾಗಿದೆ. ಗೇಣಿದಾರರಿಂದ ಬಂದ ಅರ್ಜಿಗಳನ್ನು ತಾಲೂಕು ಮಟ್ಟದಲ್ಲಿನ ಅಧಿಕಾರಿಯು ವ್ಯವಹರಿಸಿ, ಅಂತಿಮ ಆದೇಶವನ್ನು ಹೊರಡಿಸುವನು.

ಪ್ರಕರಣ ೪೮ಎ. ಅನುಭೋಗದ ಹಕ್ಕುಗಳನ್ನು ಕೋರಿ ೧೯೭೪ರ ಮಾರ್ಚ್ ೧ ರಿಂದ ಆರು ತಿಂಗಳುಗಳ ನಿಗದಿತ ಕಾಲದೊಳಗೆ ವ್ಯಕ್ತಿಗಳು ಹೂಡಿದ ಅರ್ಜಿಗಳ ವಿಚಾರಣೆಗೆ ಅವಕಾಶ ನೀಡುವುದು. ಅನುಭೋಗದಾರನಂತೆ ಗೇಣಿದಾರನ ನೋಂದಣಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಅಗತ್ಯ ಪರಿಶೀಲನೆಯನ್ನು ನಡೆಸುವುದು ಅಥವಾ ವಿಚಾರಣೆಯನ್ನು ನಡೆಸುವುದು ಮತ್ತು ಆ ಬಗ್ಗೆ ಆದೇಶವನ್ನು ಹೊರಡಿಸುವುದು. ಗೇಣಿದಾರನು ಹೌದೆ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವುದು, ಪ್ರಕರಣ ೭೭ರ ಮೇರೆಗೆ ನೆಡುತೋಪಲ್ಲದ ಹೆಚ್ಚುವರಿ ಭೂಮಿಯನ್ನು ನೀಡುವುದು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ನ್ಯಾಯಮಂಡಳಿಯಲ್ಲಿ ವಿಧಿಸಲಾದ ಇತರ ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು ನ್ಯಾಯಮಂಡಳಿಯ ನಿರ್ದಿಷ್ಟ ಕರ್ತವ್ಯವಾಗಿದೆ. ತಹಸೀಲ್ದಾರನ ಕರ್ತವ್ಯಗಳನ್ನು ಈ ಅಧಿನಿಯಮದ ಪ್ರಕರಣ ೧೧೨ (ಎ)ಯಲ್ಲಿಯೇ ನಿರ್ದಿಷ್ಟಪಡಿಸಲಾಗಿದೆ. ನ್ಯಾಯಮಂಡಳಿಯ ಆದೇಶವು ಅಖೈರಾಗಿದ್ದು, ನ್ಯಾಯಮಂಡಳಿಯ ವಿಚಾರಣೆಗಳಲ್ಲಿ ಯಾವುದೇ ನ್ಯಾಯವಾದಿಗಳು ಪ್ರವೇಶಿಸಿ ಯಾವುದೇ ವ್ಯವಹರಣೆಗಳನ್ನು ನಡೆಸಲು ಅವಕಾಶವಿರುವುದಿಲ್ಲ. ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ನ್ಯಾಯಮಂಡಳಿಯ ಯಾವುದೇ ಆದೇಶವನ್ನು ಕುರಿತು ಪ್ರಶ್ನಿಸುವ, ವಿಚಾರಣೆ ನಡೆಸುವ ಅಧಿಕಾರ ಇರುವುದಿಲ್ಲ. ನ್ಯಾಯಮಂಡಳಿಯ ಆದೇಶದಿಂದ ಬಾಧಿತನಾದವನು ಉಚ್ಚ ನ್ಯಾಯಾಲಯಕ್ಕೆ ಮಾತ್ರ ಹೋಗಬಹುದು. ಪ್ರಸಕ್ತ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ೧೯೬೪ರ ಭೂಕಂದಾಯ ಅಧಿನಿಯಮದ ಪ್ರಕರಣ ೧೧೬(ಎ) ಮೇರೆಗೆ

೧೯೮೬ರ ಮೇ ೨೬ ರಿಂದ ಜಾರಿಗೆ ಬರುವಂತೆ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ರಚಿಸಲಾಯಿತು. ಅದು ಇಬ್ಬರು ಸದಸ್ಯರನ್ನು ಒಳಗೊಂಡಿದ್ದು, ಒಬ್ಬರನ್ನು ನ್ಯಾಯಾಂಗದಿಂದಲೂ ಮತ್ತು ಮತ್ತೊಬ್ಬರನ್ನು ಕಂದಾಯ ಇಲಾಖೆಯಿಂದಲೂ ನೇಮಕ ಮಾಡಲಾಯಿತು. ಅವರು ಭೂ ನ್ಯಾಯಮಂಡಳಿಯ ಪ್ರಕರಣಗಳನ್ನು ತೀರ್ಮಾನಿಸುತ್ತಾರೆ. ಹಿಂದೆ ಉಚ್ಚ ನ್ಯಾಯಾಲಯದಲ್ಲಿದ್ದ ಇದಕ್ಕೆ ಸಂಬಂಧಪಟ್ಟ ಎಲ್ಲ ಪ್ರಕರಣಗಳನ್ನು ಈಗ ಭೂ ನ್ಯಾಯಮಂಡಳಿ ಪ್ರಾಧಿಕಾರಕ್ಕೆ ಒಪ್ಪಿಸಲಾಗಿದೆ.

### ಹೆಚ್ಚುವರಿ ಭೂಮಿಯ ಹಂಚಿಕೆ

ಗರಿಷ್ಠ ವಿಸ್ತೀರ್ಣ ಮಿತಿಗಿಂತ ಹೆಚ್ಚಿದ್ದು, ಸರ್ಕಾರ ವಹಿಸಿಕೊಂಡ 'ಹೆಚ್ಚುವರಿ ಭೂಮಿ'ಯನ್ನು, ಆದ್ಯತೆಯ ಪ್ರಕಾರ ಈ ಮುಂದೆ ತಿಳಿಸಿರುವಂತೆ ಭೂ ನ್ಯಾಯಮಂಡಳಿಯು ಹಂಚಬಹುದಾಗಿದೆ. ೧) ಒಂದು ಮೂಲ ಹಿಡುವಳಿಗೆ ಕಡಿಮೆಯಿಲ್ಲದ ಭೂರಹಿತ ಕೃಷಿಕರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ಸ್ಥಾನಭ್ರಷ್ಟ ಗೇಣಿದಾರರಿಗೆ. ೨) ಒಂದು ಮೂಲ ಹಿಡುವಳಿಗಿಂತ ಕಡಿಮೆ ಭೂಮಿಯಿರುವ ಗೇಣಿದಾರರಿಗೆ ಮತ್ತು ಸ್ಥಾನಭ್ರಷ್ಟ ಗೇಣಿದಾರರಿಗೆ ಮತ್ತು ಒಂದು ಮೂಲ ಹಿಡುವಳಿಗೆ ಕಡಿಮೆಯಿರುವ ಭೂ ಮಾಲೀಕ ಸಾಗುವಳಿದಾರರಿಗೆ, ೩) ಒಂದು ಕುಟುಂಬ ಹಿಡುವಳಿಗಿಂತ ಕಡಿಮೆಯಿರುವ ಗೇಣಿದಾರರಿಗೆ, ಸ್ಥಾನಭ್ರಷ್ಟ ಗೇಣಿದಾರರಿಗೆ ಮತ್ತು ಒಂದು ಕುಟುಂಬ ಹಿಡುವಳಿಗಿಂತ ಕಡಿಮೆಯಿರುವ ಮಾಲೀಕ ಸಾಗುವಳಿದಾರರಿಗೆ ೪)ಸ್ವಯಂ ಸಾಗುವಳಿ ಮಾಡಲು ಇಚ್ಛಿಸುವ ಇತರ ವ್ಯಕ್ತಿಗಳಿಗೆ ಹಂಚಿಕೆದಾರರು ಭೂಮಿಯ ಬೆಲೆಯನ್ನು ಇಡುಗಂಟಾಗಿ ಸಂದಾಯ ಮಾಡಲು ಅಥವಾ ಹದಿನೈದು ವಾರ್ಷಿಕ ಕಂತಿಗೆ ಮೀರದಂತೆ ಸರ್ಕಾರಕ್ಕೆ ಬಡ್ಡಿಯೊಂದಿಗೆ ಸಂದಾಯ ಮಾಡಲು ಅನುಮತಿಸಲಾಗಿದೆ.

### ಸರ್ಕಾರಿ ಭೂಮಿಗಳ ವಿಲೇವಾರಿ

ಸ್ವಾತಂತ್ರ್ಯ ಪೂರ್ವದಲ್ಲಿ ಭೂನೀಡಿಕೆ ಬಗ್ಗೆ ಯಾವುದೇ ಖಚಿತ ಕಾರ್ಯನೀತಿ ಇರಲಿಲ್ಲ. ಭೂಮಿಯ ಬಹು ದೊಡ್ಡ ಪ್ರಮಾಣವು ಖಾಲಿಯಾಗಿ ಅಥವಾ ಬೇಸಾಯವಿಲ್ಲದೆ ಇದ್ದಿತು. ಕೆಲವು ಸೇವೆಗಾಗಿ ಭೂಮಿಯನ್ನು ಇನಾಂ ಆಗಿ ನೀಡಲಾಗುತ್ತಿತ್ತು ಅಥವಾ ಭೂಮಿಯನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುತ್ತಿತ್ತು. ಭೂಸಾಗುವಳಿಯೇ ಅದರ ಪ್ರಮುಖ ಉದ್ದೇಶವಾಗಿತ್ತು. ಸ್ವಾತಂತ್ರ್ಯಾನಂತರ ಸಾಮಾಜಿಕ ನ್ಯಾಯವು ಸರ್ಕಾರಿ ಭೂಮಿಗಳ ವಿಲೇವಾರಿಯ ಆಡಳಿತದ ಉದ್ದೇಶಗಳಲ್ಲಿ ಒಂದೆಂದು ಅಂಗೀಕೃತವಾಯಿತು. ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಕಾಲಕಾಲಕ್ಕೆ ಭೂ ನೀಡಿಕೆ ಅಧಿನಿಯಮವನ್ನು ತಿದ್ದುಪಡಿ ಮಾಡಲಾಯಿತು. ಅದರಲ್ಲಿ ದುರ್ಬಲ ವರ್ಗದವರಿಗೆ, ಭೂರಹಿತ ವ್ಯಕ್ತಿಗಳಿಗೆ ಮತ್ತು ಕಡಿಮೆ ಭೂ ಹಿಡುವಳಿದಾರರಿಗೆ ಆದ್ಯತೆ ದೊರೆಯಿತು. ೧೯೫೮ರಲ್ಲಿ ಕರ್ನಾಟಕ ರಾಜ್ಯಾದ್ಯಂತ ಏಕರೂಪದ ಭೂನೀಡಿಕೆಯ ಪ್ರಕ್ರಿಯೆಯನ್ನು ಪ್ರಾರಂಭಿಸುವ ಪ್ರಯತ್ನ ಮಾಡಲಾಯಿತು. ೧೯೫೦ರ ನಿಯಮಗಳಿಗೆ ಬದಲಾಗಿ ೧೯೬೮ರ ಭೂ ನೀಡಿಕೆ ನಿಯಮಗಳನ್ನು ಸ್ಥಾಪಿಸಲಾಯಿತು. ಆದರೆ ಕೂಡಲೇ ಅದಕ್ಕೆ ಬದಲಾಗಿ ೧೯೬೯ರ ಭೂ ನೀಡಿಕೆ ನಿಯಮವನ್ನು ಸ್ಥಾಪಿಸಲಾಯಿತು. ೧೯೬೯ರ ಹೊಸ ಭೂ ನೀಡಿಕೆ ನಿಯಮವನ್ನು ೧೯೬೪ರ ಭೂಸುಧಾರಣಾ ಅಧಿನಿಯಮಗಳ ಪ್ರಕರಣ ೧೯೭ರ ಮೇರೆಗೆ ರಚಿಸಲಾಯಿತು. ಈ ನಿಯಮಗಳು ೩-೫-೧೯೬೯ರಿಂದ ಜಾರಿಗೆ ಬಂದಿತು. ೧೯೬೯ರ ಕರ್ನಾಟಕ ಭೂ ನೀಡಿಕೆ ನಿಯಮಗಳನ್ನು ೧೯೭೭ರ ನಂತರ ವಿಲೇವಾರಿಗಾಗಿ ದೊರೆಕುವಂಥ ಭೂಮಿಗಳ ಪಟ್ಟಿಯನ್ನು ತಯಾರಿಸುವ ಮೂಲಕ ತಿದ್ದುಪಡಿಯನ್ನು ಮಾಡಲಾಯಿತು. ಈ ಮುಂದಿನ ಪ್ರಮಾಣದಲ್ಲಿ ಯಾವುದೇ ಗ್ರಾಮದಲ್ಲಿ ಲಭ್ಯ ಭೂಮಿಯ ವಿಲೇವಾರಿಗಾಗಿ ಮೀಸಲಾತಿ ಪ್ರಮಾಣವನ್ನು ನಿಗದಿಗೊಳಿಸಲಾಯಿತು. ಅದರಂತೆ ಮಾಜಿ ಸೈನಿಕರು ಮತ್ತು ಸೈನಿಕರಿಗೆ ಶೇಕಡಾ ೧೦ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ ೫೦ರಷ್ಟು, ಸ್ವಾತಂತ್ರ್ಯ ಹೋರಾಟಗಾರರಿಗೆ (ಪೊಲಿಟಿಕಲ್ ಸಫರರ್ಸ್) ಶೇಕಡಾ ೧೦ರಷ್ಟು ಮತ್ತು ಇತರರಿಗೆ ೩೦ರಷ್ಟಾಗಿತ್ತು. ಭೂಮಿ ನೀಡಿಕೆ ಆದ್ಯತೆಯ ಕ್ರಮ ಹೀಗಿತ್ತು. ಎ. ಗ್ರಾಮದಲ್ಲಿ ವಾಸಿಸುತ್ತಿರುವ ಭೂರಹಿತ ವ್ಯಕ್ತಿಗಳು, ಬಿ. ಗ್ರಾಮದಲ್ಲಿ ವಾಸಿಸುತ್ತಿರುವ ಕಡಿಮೆ ಹಿಡುವಳಿದಾರರು ಸಿ. ನೆರೆಯ ಗ್ರಾಮದಲ್ಲಿನ ಭೂರಹಿತ ವ್ಯಕ್ತಿಗಳು ಡಿ. ಇತರರು.

ಕೃಷಿ ಉದ್ದೇಶಕ್ಕಾಗಿ ನೀಡಲಾದ ಭೂಮಿಯನ್ನು ೧೫ ವರ್ಷಗಳು ಪರಭಾರೆ ಮಾಡಕೂಡದು ಮತ್ತು ಸ್ವಾಧೀನಕ್ಕೆ ಪಡೆದ ನಂತರ ಮೂರು ವರ್ಷಗಳೊಳಗೆ ಬೇಸಾಯ ಮಾಡಬೇಕು; ಭೂಮಿ ಪಡೆದವನು ಸ್ವತಃ ಪಡೆದ ಭೂಮಿಯನ್ನು ಬೇಸಾಯ ಮಾಡಬೇಕು ಮತ್ತು ಅದನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು. ತಹಸೀಲ್ದಾರರು ಭೂ ನೀಡಿಕೆ ಅರ್ಜಿಗಳನ್ನು ಸ್ವೀಕರಿಸುವುದು, ಅವುಗಳನ್ನು ಪರಿಶೀಲಿಸುವುದು, ವಿಚಾರಣೆ ನಡೆಸುವುದು ಮತ್ತು ಸಂದರ್ಭಾನುಸಾರವಾಗಿ, ಭೂಮಿಯ ಅಂತಿಮ ನೀಡಿಕೆಗಾಗಿ ಅಥವಾ ಉನ್ನತ ಅಧಿಕಾರಿಗೆ ನೀಡಿಕೆಗಾಗಿ ಸಲ್ಲಿಸುವುದಕ್ಕೆ ಜವಾಬ್ದಾರರಾಗಿರುತ್ತಾರೆ.

## ಭೂ ಸ್ವಾಧೀನ

ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಬಡಾವಣೆಯಲ್ಲಿರುವ ಭೂಮಿಯು ಅಗತ್ಯವಿದೆಯೆಂದು ಸರ್ಕಾರಕ್ಕೆ ತೋರಿದಾಗ, ಅದಕ್ಕಾಗಿ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯೊಂದನ್ನು ಹೊರಡಿಸಬೇಕು ಮತ್ತು ಜಿಲ್ಲಾಧಿಕಾರಿಯು ಅಂಥ ಬಡಾವಣೆಯಲ್ಲಿನ ನಿಗದಿತ ಸ್ಥಳಗಳಲ್ಲಿ ಸಾರ್ವಜನಿಕ ತಿಳಿವಳಿಕೆಗಾಗಿ ಅಂಥ ಅಧಿಸೂಚನೆಯ ಪ್ರಮುಖ ಅಂಶವನ್ನು ಪ್ರಕಟಿಸಬೇಕಾಗುವುದು. ೧೯೬೧ರ ಕರ್ನಾಟಕ ಭೂ ಸ್ವಾಧೀನ (ಕರ್ನಾಟಕ ವಿಸ್ತರಣೆ ಮತ್ತು ತಿದ್ದುಪಡಿ) ಅಧಿನಿಯಮದ ಮೇರೆಗೆ ಕರ್ನಾಟಕಕ್ಕೂ ವಿಸ್ತರಿಸಲಾದ (೧೮೯೪ರ ಕೇಂದ್ರ ಅಧಿನಿಯಮ) ಭೂ ಸ್ವಾಧೀನ ಅಧಿನಿಯಮವು ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರದಿಂದ ಭೂಸ್ವಾಧೀನ ಆಡಳಿತದ ಮೂಲ ಕಾನೂನಾಗಿದೆ. ಜಿಲ್ಲಾಧಿಕಾರಿಯು ಆ ಉದ್ದೇಶಕ್ಕಾಗಿ ಭೂಮಿಯನ್ನು ಗುರುತಿಸಿ, ಅಳೆಯುವುದರ ಮುಖೇನ ಭೂ ನಕ್ಷೆಯನ್ನು ತಯಾರಿಸಲು ಸೂಚಿಸಬೇಕು. ಅವರು ಹೊರಡಿಸುವ ನೋಟೀಸಿನಲ್ಲಿ ಹಾಗೆ ಅಗತ್ಯವಿರುವಂಥ ಭೂಮಿಯ ವಿವರ ಅದರಲ್ಲಿ ಉಲ್ಲೇಖಿಸಿದ ಸಮಯ ಮತ್ತು ಸ್ಥಳದಲ್ಲಿ ಜಿಲ್ಲಾಧಿಕಾರಿಯ ಸಮಕ್ಷಮ ಭೂಮಿಯ ಬಗ್ಗೆ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳು ಖುದ್ದಾಗಿಯಾಗಲೀ ಅಥವಾ ಅವರ ಏಜೆಂಟರಾಗಲಿ ಹಾಜರಾಗಬೇಕು ಮತ್ತು ಭೂಮಿಯಲ್ಲಿ ಆಯಾ ವ್ಯಕ್ತಿಗಳಿಗಿರುವ ಹಿತಾಸಕ್ತಿಯ ಸ್ವರೂಪವನ್ನು ತಿಳಿಸಬೇಕು ಮತ್ತು ಅಂಥ ಹಿತಾಸಕ್ತಿಗಾಗಿ ಕೋರಲಾಗುವ ಪರಿಹಾರಧನದ ವಿವರಗಳು ಹಾಗೂ ಮಾಡಲಾದ ಅಳತೆಗಳ ಬಗೆಗೆ ತಮಗೆ ಆಕ್ಷೇಪಣೆಗಳಿದ್ದಲ್ಲಿ ಅದರ ವಿವರಗಳು ಮುಂತಾದವನ್ನು ತಿಳಿಸಬೇಕು.

ಬಾಧಿತ ವ್ಯಕ್ತಿಯ ಅಹವಾಲನ್ನು ಆಲಿಸಿ, ಪರಿಶೀಲಿಸಿದ ನಂತರ, ಜಿಲ್ಲಾಧಿಕಾರಿಯು ಪ್ರಕರಣ ೧೧ರ ಮೇರೆಗೆ ಆಜ್ಞೆಯನ್ನು ಹೊರಡಿಸಿ ಭೂಮಿಯನ್ನು ಸ್ವಾಧೀನಕ್ಕೆ ಪಡೆದುಕೊಳ್ಳುವರು. ಅನಂತರ ಭೂಮಿಯು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸರ್ಕಾರಕ್ಕೆ ನಿರುಪಾಧಿಕ ಸ್ವತ್ತಾಗುತ್ತದೆ. ಭೂಮಿಯ ಅಳತೆ, ಪರಿಹಾರಧನದ ಮೊತ್ತ, ಅದನ್ನು ಸಂದಾಯ ಮಾಡಬೇಕಾದ ವ್ಯಕ್ತಿಯ ವಿಷಯವಾಗಿ ಮತ್ತು ಬಾಧಿತನಾದ ವ್ಯಕ್ತಿಗಳಲ್ಲಿ ಪರಿಹಾರಧನದ ಪಾಲುದಾರಿಕೆಯ ವಿಷಯವಾಗಿ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಜಿಲ್ಲಾಧಿಕಾರಿಯ ಆಜ್ಞೆಯನ್ನು ಅಂಗೀಕರಿಸದ ಯಾವುದೇ ವ್ಯಕ್ತಿಯು ನ್ಯಾಯಾಲಯದ ನಿರ್ಣಯಕ್ಕಾಗಿ ವಿಷಯವನ್ನು ಒಪ್ಪಿಸುವಂತೆ ಕೋರಿ ಜಿಲ್ಲಾಧಿಕಾರಿಗೆ ಲಿಖಿತದಲ್ಲಿ ಅರ್ಜಿ ನೀಡಬಹುದು.

೧೯೮೪ರ ಭೂ ಸ್ವಾಧೀನ (ತಿದ್ದುಪಡಿ) ಅಧಿನಿಯಮದ ಆಜ್ಞೆಯ ಅನುಮೋದನೆಗೆ ಸಂಬಂಧಪಟ್ಟಂತೆ ಉಪಬಂಧವೊಂದನ್ನು ತಂದಿದೆ. ಆಜ್ಞೆಯನ್ನು ಅನುಮೋದಿಸುವ ವಿವಿಧ ಅಧಿಕಾರಿಯ ಈಗಿನ ಆರ್ಥಿಕ ಮಿತಿಯೆಂದರೆ ಜಿಲ್ಲಾಧಿಕಾರಿಯು ೧೦ಲಕ್ಷಗಳವರೆಗೆ ಮತ್ತು ೨೦ ಲಕ್ಷಕ್ಕೆ ಮೀರಿದ್ದಲ್ಲಿ ಸರ್ಕಾರದ್ದಾಗಿರುತ್ತದೆ.

## ಭೂ ಕಂದಾಯ ಹೊರತಾದ ತೆರಿಗೆಗಳು

ಸರ್ಕಾರವು ನೇರ ಮತ್ತು ಪರೋಕ್ಷ ತೆರಿಗೆ ಹಾಕುವ ಮೂಲಕ ಹಾಗೂ ಕೇಂದ್ರ ತೆರಿಗೆಗಳು ಇತ್ಯಾದಿಯಲ್ಲಿನ ತನ್ನ ಪಾಲಿನಿಂದ ಕಂದಾಯವನ್ನು ಗಳಿಸುತ್ತದೆ. ಸರ್ಕಾರದ ತೆರಿಗೆ ನಿರ್ಧರಣೆಯ ನೀತಿಯು ಅವಕಾಶವಿರುವೆಡೆಯಲ್ಲೆಲ್ಲ ತೆರಿಗೆ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಚಾಲ್ತಿ ತೆರಿಗೆ ನಿರ್ಧರಣೆ

ಕ್ರಮಗಳಲ್ಲಿ ಸುಧಾರಣೆ ಮಾಡುವುದು ಮತ್ತು ಕಂದಾಯದ ಹೊಸ ಮೂಲಗಳನ್ನು ಹುಡುಕುವುದಾಗಿದೆ ಇದು ಅಬಕಾರಿ, ವಾಣಿಜ್ಯ ತೆರಿಗೆಗಳು, ಮುದ್ರಾಂಕ ಶುಲ್ಕ, ಮೋಟಾರು ವಾಹನ ತೆರಿಗೆಗಳು, ವಿದ್ಯುಚ್ಛಕ್ತಿ ಕರ, ಅರಣ್ಯ ತೆರಿಗೆ ಮುಂತಾದ ಬಹುಮುಖೀ ತೆರಿಗೆ ರಚನೆಗೆ ನಾಂದಿಯಾಯಿತು. ತೆರಿಗೆ ದರ ರಚನೆಯಲ್ಲಿ ಕಾಲಕಾಲಕ್ಕೆ ಮಾರ್ಪಾಡನ್ನು ಮಾಡಲಾಯಿತು.

## ವಾಣಿಜ್ಯ ತೆರಿಗೆ

ವಾಣಿಜ್ಯ ತೆರಿಗೆ ಇಲಾಖೆಯು ವಾಣಿಜ್ಯ ತೆರಿಗೆ ಉಪ ಆಯುಕ್ತರು (ಆಡಳಿ), ಮಂಗಳೂರು ವಿಭಾಗ, ಮಂಗಳೂರು ಇವರ ನೇತೃತ್ವದಲ್ಲಿ ೧೬-೧೨-೧೯೬೫ ರಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿತು. ಮಂಗಳೂರು ವಿಭಾಗಕ್ಕಾಗಿ ವಾಣಿಜ್ಯ ತೆರಿಗೆ ಜಂಟಿ ಅಯುಕ್ತರ ಹುದ್ದೆಯನ್ನು ೧೯೯೨ರಲ್ಲಿ ಸೃಜಿಸಲಾಯಿತು. ಅಲ್ಲದೆ, ೨೦೦೫ರಲ್ಲಿ ಮೌಲ್ಯವರ್ಧಿತ ತೆರಿಗೆಗಾಗಿ ಒಬ್ಬ ಜಂಟಿ ಆಯುಕ್ತರು (ಆಡಳಿತ) ಎಂಬ ಹುದ್ದೆಯನ್ನು ಸೃಜಿಸಲಾಯಿತು. ಖಜಾನೆಗೆ ಪ್ರಧಾನ ಕಂದಾಯ ವಂತಿಗೆ ಒದಗಿಸುವ ವಾಣಿಜ್ಯ ತೆರಿಗೆ ಇಲಾಖೆಯು ಮುಂದಿನ ಅಧಿನಿಯಮಗಳನ್ನು ಅನುಸರಿಸುತ್ತದೆ.

೧. ೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ
೨. ೧೯೫೬ರ ಕೇಂದ್ರ ಮಾರಾಟ ತೆರಿಗೆ ಅಧಿನಿಯಮ
೩. ೧೯೭೯ರ ಕರ್ನಾಟಕ ಪ್ರವೇಶ ತೆರಿಗೆ ಅಧಿನಿಯಮ
೪. ೧೯೫೮ರ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ
೫. ೧೯೫೭ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ
೬. ೧೯೭೬ರ ಕರ್ನಾಟಕ ವೃತ್ತಿ, ವ್ಯಾಪಾರ, ಕರೆಗಳು ಮತ್ತು ಉದ್ಯೋಗದ ಮೇಲೆ ತೆರಿಗೆ ಅಧಿನಿಯಮ.
೭. ೧೯೭೬ರ ಕರ್ನಾಟಕ ಭೋಗ ಸೌಲಭ್ಯಗಳ ಮೇಲಿನ ತೆರಿಗೆ (ಹೋಟೇಲ್ ಮತ್ತು ವಸತಿಗೃಹಗಳು) ಅಧಿನಿಯಮ
೮. ೨೦೦೫ರ ಮೌಲ್ಯ ವರ್ಧಿತ ತೆರಿಗೆ (ವ್ಯಾಟ್)

## ಮಾರಾಟ ತೆರಿಗೆ

ಮಾರಾಟ ತೆರಿಗೆಯು ಎರಡು ಕಾಯ್ದೆಗಳನ್ನು ಒಳಗೊಳ್ಳುತ್ತದೆ. ಅವು ೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ಮತ್ತು ೧೯೫೬ರ ಕೇಂದ್ರ ಮಾರಾಟ ತೆರಿಗೆ ಅಧಿನಿಯಮ. ಎರಡನೆಯ ಅಧಿನಿಯಮವು ಅಂತರ ರಾಜ್ಯ ನಡುವಣ ವಹಿವಾಟಿನ ಸಂದರ್ಭದಲ್ಲಿ ರಾಜ್ಯದ ಆಡಳಿತ ವ್ಯಾಪ್ತಿಯೊಳಗೆ ಬರುವ ಸರಕುಗಳ ಖರೀದಿ ಅಥವಾ ಮಾರಾಟದ ಮೇಲೆ ತೆರಿಗೆ ವಸೂಲಿ ಮಾಡುವುದಕ್ಕೆ ಮತ್ತು ಆ ತೆರಿಗೆಯನ್ನು ತನ್ನಲ್ಲಿಯೇ ಉಳಿಸಿಕೊಳ್ಳುವುದಕ್ಕೆ ರಾಜ್ಯಕ್ಕೆ ಅವಕಾಶ ನೀಡುತ್ತದೆ. ಹಿಂದಿನ ಮಾರಾಟ ತೆರಿಗೆ ಯೋಜನೆಯು ಸಂಯುಕ್ತ ಏಕಸ್ಥಾನೀಯ (ಸಿಂಗಲ್ ಪಾಯಿಂಟ್) ಮತ್ತು ಬಹುಸ್ಥಾನೀಯ ತೆರಿಗೆ ವಸೂಲಾತಿಯ ವ್ಯವಸ್ಥೆಯಾಗಿತ್ತು. ಉತ್ಪಾದಕರು, ಆಮದುಗಾರರು, ತಯಾರಕರು ಮತ್ತು ಕೊನೆಯಲ್ಲಿ ಗ್ರಾಹಕರನ್ನು ಸರಕು ಮುಟ್ಟುವುದು. ಈ ವ್ಯಾಪಾರದ ಸರಣಿಯಲ್ಲಿ ಒಂದು ಹಂತದಲ್ಲಿ ಮಾತ್ರ ಏಕಸ್ಥಾನೀಯ ತೆರಿಗೆಯನ್ನು ವಿಧಿಸಲಾಗುವುದು. ಬಹುಸ್ಥಾನೀಯ ತೆರಿಗೆಯಲ್ಲಿ ವ್ಯಾಪಾರಿಯ ಕೈಯ ಮೂಲಕ ಹಾದುಹೋಗುವ ಪ್ರತಿಯೊಂದು ಸ್ಥಾನದಲ್ಲಿಯೂ ತೆರಿಗೆಯನ್ನು ವಿಧಿಸಲಾಗುವುದು. ಏಕಸ್ಥಾನೀಯ ತೆರಿಗೆಯ ದರವು ಒಂದರಿಂದ ಶೇಕಡಾ ೨೦೦ರವರೆಗೆ ಇರುತ್ತದೆ. ಒಟ್ಟು ೨೯೩ ಪ್ರಮುಖ ಸರಕುಗಳನ್ನು ಏಕಸ್ಥಾನೀಯ ತೆರಿಗೆಯಡಿ ತರಲಾಗಿದೆ ಮತ್ತು ಉಳಿದವು ಬಹುಸ್ಥಾನಿಕ ತೆರಿಗೆಗೆ ಒಳಪಡುತ್ತವೆ. ಈ ಅಧಿನಿಯಮದನ್ವಯ, ರೂ.೨೫,೦೦೦/- ಮತ್ತು ಅದಕ್ಕಿಂತ ಹೆಚ್ಚಿನ ವರಮಾನವಿರುವ ವ್ಯಾಪಾರಿಯು ತಾನಾಗಿಯೇ ನೋಂದಣಿ ಮಾಡಿಕೊಳ್ಳುವ ಅಗತ್ಯವಿದೆ ಮತ್ತು ತೆರಿಗೆ ವಿಧಿಸಬಹುದಾದ ವರಮಾನಕ್ಕಿಂತ

ಹೆಚ್ಚಿಗೆ ಆದಾಯವಿದ್ದಲ್ಲಿ, ಮಾರಾಟ ಹುಟ್ಟುವಳಿಗಿಂತ ಹೆಚ್ಚು ವರಮಾನವಿದ್ದಲ್ಲಿ, ಅವರು ತೆರಿಗೆಯನ್ನು ಪಾವತಿಸಲು ಬದ್ಧರಾಗಿರುತ್ತಾರೆ. ಒಟ್ಟು ವರಮಾನವು ೭೫,೦೦೦ಕ್ಕೆ ಅಧಿಕವಿರದ ವ್ಯಾಪಾರಿಗಳು ಮೊದಲ ಸ್ಥಾನಿಕ ಮಾರಾಟ ಸರಕುಗಳೊಂದಿಗೆ ವ್ಯವಹರಿಸದಿದ್ದಲ್ಲಿ ಮತ್ತು ಮೊದಲ ಮಾರಾಟಗಾರರಂತೆ ಅಥವಾ ೧೯೫೬ರ ಕೇಂದ್ರ ಮಾರಾಟ ತೆರಿಗೆ ಅದಿನಿಯಮದಡಿ ನೋಂದಾಯಿಸಿಲ್ಲದಿದ್ದಲ್ಲಿ ಒಂದೇ ಕಂತಿನಲ್ಲಿ ಅಥವಾ ಕಂತುಗಳಲ್ಲಿ ಪಾವತಿಸುವುದು ಅವರ ಆಯ್ಕೆಯಾಗಿರುತ್ತದೆ.

## ೧೯೫೮ರ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ

ಹಲವಾರು ಸಂಯುಕ್ತ ಪ್ರದೇಶಗಳಲ್ಲಿ ಡಿಸೆಂಬರ್ ೧೯೫೮ರ ಅಂತ್ಯದ ತನಕ, ವಿವಿಧ ಮನರಂಜನ ತೆರಿಗೆ ಕಾನೂನುಗಳು ಜಾರಿಯಲ್ಲಿತ್ತು. ೧೯೫೯ರ ಜನವರಿ ೧ ರಿಂದ, ಸಮಗ್ರ ತೆರಿಗೆ ಅಧಿನಿಯಮವೊಂದು ಕರ್ನಾಟಕ ರಾಜ್ಯಾದ್ಯಂತ ಅನ್ವಯವಾಗುವಂತೆ ಜಾರಿಗೆ ಬಂದಿತು.

೧೯೫೯ರ ಜನವರಿ ೧ ರಿಂದ ಈ ಅಧಿನಿಯಮವು ವಾಣಿಜ್ಯ ತೆರಿಗೆ ಇಲಾಖೆಯ ಆಡಳಿತಕ್ಕೆ ಒಳಪಟ್ಟಿತು. ಸಿನೆಮಾ ಮಂದಿರ ಮತ್ತು ಕುದುರೆ ಜೂಜಿನ ಸ್ಥಳಗಳ ಪ್ರವೇಶದರಗಳ ಮೇಲೆ ಮನರಂಜನ ತೆರಿಗೆ ವಿಧಿಸಲು ಈ ಕಾನೂನಿನನ್ವಯ ಅವಕಾಶವಿರುತ್ತದೆ. ನಾಟಕ, ಸಂಗೀತ, ಯಕ್ಷಗಾನ ಕಾರ್ಯಕ್ರಮಗಳು ಮತ್ತು ಇತರ ಮನರಂಜನೆಗಳು ಈ ಅಧಿನಿಯಮದ ಪರಿಧಿಗೆ ಒಳಪಡುವುದಿಲ್ಲ. ರಾಜ್ಯದ ಸಂಪನ್ಮೂಲವನ್ನು ಹೆಚ್ಚಿಸುವ ದೃಷ್ಟಿಯಿಂದ, ಸಂಪನ್ಮೂಲಗಳು ಮತ್ತು ಆರ್ಥಿಕ ಸಮಿತಿಯ ಶಿಫಾರಸ್ಸಿನನ್ವಯ ೧೯೬೨ರಲ್ಲಿ ಮನರಂಜನ ತೆರಿಗೆ ಮತ್ತು ಪ್ರದರ್ಶನ ತೆರಿಗೆಯ ಮೇಲೆ ಶೇಕಡಾ ೨೫ರಷ್ಟು ಅಧಿಕ ಕರ ವಿಧಿಸಲಾಯಿತು. ೧೯೬೬ರಲ್ಲಿ ಈ ಅಧಿಕ ಕರವನ್ನು ರಾಜ್ಯದಲ್ಲಿ ಚಲನಚಿತ್ರಗಳಿಗೆ ಉತ್ಪಾದನಾ ತೆರಿಗೆ ವಿನಾಯಿತಿ ನೀಡುವ ದೃಷ್ಟಿಯಿಂದ ಶೇಕಡಾ ೧೦ರಷ್ಟು ಹೆಚ್ಚಿಸಲಾಯಿತು. ೧೯೬೬ರಲ್ಲಿ ಈ ದರಗಳನ್ನು ಹೆಚ್ಚಿಸಿದಾಗ, ಪ್ರದರ್ಶನ ತೆರಿಗೆಯ ಮೇಲಿನ ಅಧಿಕ ಕರವನ್ನು ಪ್ರದರ್ಶನ ತೆರಿಗೆಯಲ್ಲಿಯೇ ಸೇರಿಸಲಾಯಿತು. ನಂತರ ೧೯೭೧ರಲ್ಲಿ ಇದನ್ನು ಶೇಕಡಾ ೬೦ಕ್ಕೆ ಏರಿಸಲಾಯಿತು ಮತ್ತು ನಂತರ ೧೯೭೪ರಲ್ಲಿ ಶೇಕಡಾ ೧೦೦ಕ್ಕೆ ಏರಿಸಲಾಯಿತು. ಚಿತ್ರಮಂದಿರ ಪ್ರವೇಶದ ಮೇಲೆ ಸಂದಾಯ ಮಾಡಲಾಗುವ ತೆರಿಗೆ ದರವನ್ನು ೧.೪.೧೯೮೫ ರಿಂದ ಮತ್ತೂ ಹೆಚ್ಚಿಸಲಾಯಿತು. ಮನರಂಜನೆ ನಡೆಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ವಿಭಾಗಗಳಿಗೆ ಶೇಕಡಾ ೯೦ರಷ್ಟು ಮನರಂಜನಾ ತೆರಿಗೆಯನ್ನು ಹಸ್ತಾಂತರಿಸಲಾಯಿತು. ಉಳಿದ ಶೇಕಡಾ ೧೦ರಷ್ಟನ್ನು ಸಂಗ್ರಹಣ ವೆಚ್ಚಗಳತ್ತ ರಾಜ್ಯ ಸರ್ಕಾರವೇ ಉಳಿಸಿಕೊಂಡಿತು. ಕೆಲವು ಹೊಸ ಉಪಬಂಧಗಳನ್ನು ೧೫,೦೦೦ ದವರೆಗಿನ ಜನಸಂಖ್ಯೆಯುಳ್ಳ ಸ್ಥಳಗಳಲ್ಲಿರುವ ಚಿತ್ರಮಂದಿರಗಳಿಗೆ ಸಂಬಂಧಿಸಿದಂತೆ ಮಾಡಲಾಯಿತು ಮತ್ತು ೧೫,೦೦೦ ದಿಂದ ೨೫,೦೦೦ದವರೆಗೆ ಜನಸಂಖ್ಯೆಯುಳ್ಳ ಸ್ಥಳದಲ್ಲಿರುವ ಚಿತ್ರಮಂದಿರಗಳಿಗೆ ಒಟ್ಟು ವಸೂಲಿ ಸಾಮರ್ಥ್ಯದ ಶೇಕಡಾ ೨೫ರಷ್ಟು ತೆರಿಗೆಯನ್ನು ನಿಗದಿಪಡಿಸಲಾಯಿತು. ತಹಸೀಲ್ದಾರರು, ಪುರಸಭೆಯ ಮುಖ್ಯ ಅಧಿಕಾರಿಗಳು, ಇಲಾಖಾ ಅಧಿಕಾರಿಗಳು ಸೇರಿದಂತೆ ಪೊಲೀಸು ಸಬ್‌ಇನ್ಸ್‌ಪೆಕ್ಟರ್‌ಗಳಂಥ ಸ್ಥಳೀಯ ಅಧಿಕಾರಿಗಳು, ಚಿತ್ರಮಂದಿರಗಳ ಪ್ರವೇಶ ಕುರಿತು ದಿಢೀರ್ ಪರಿಶೀಲನೆ ನಡೆಸಲು ಅಧಿಕಾರ ಪಡೆದಿರುತ್ತಾರೆ.

## ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ

ಈ ಅಧಿನಿಯಮದನ್ವಯ ಏಳು ತೋಟಗಾರಿಕಾ ಬೆಳೆಗಳು ಸೇರಿದಂತೆ ಮೂವತ್ತೊಂದು ವಾಣಿಜ್ಯ ಬೆಳೆಗಳ ಮೇಲೆ ತೆರಿಗೆ ವಿಧಿಸಲು ಅವಕಾಶವಿರುತ್ತದೆ. ೧೯೫೭ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದ ತೆರಿಗೆ ಮಿತಿಗೊಳಪಡುವ ವರಮಾನದ ವಿನಾಯಿತಿ ಸಹ ರೂ.೮,೦೦೦ಕ್ಕೂ ಮೀರಿದ ನಿವ್ವಳ ಆದಾಯವಿದ್ದಲ್ಲಿ ಏರುತ್ತದೆ. ನೆಡುತೋಪು ಬೆಳೆಗಳ ಸಂಬಂಧದಲ್ಲಿ ಹಿಡುವಳಿಯ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ನಿಗದಿಗೊಳಿಸಲಾಗಿದೆ. ನೆಡುತೋಪು ರಹಿತ ಬೆಳೆಗಳನ್ನು ಬೆಳೆಯುವ ಭೂಮಿಯನ್ನು ಹೊಂದಿರುವ ವ್ಯಕ್ತಿಗಳ ಒಡಂಬಡಿಕೆಗೆ ಅರ್ಹರಾಗಿರುತ್ತಾರೆ. ಒಡಂಬಡಿಕೆಯ ಉದ್ದೇಶಕ್ಕಾಗಿ ವರ್ಗೀಕರಣವು ಒಣಭೂಮಿಯ ಸಂಬಂಧದಲ್ಲಿ ಸಂದಾಯ ಮಾಡುವ ಭೂ ಕಂದಾಯ ನೀರಾವರಿ ಭೂಮಿಗಳ ವಿಷಯದಲ್ಲಿ ನೀರಾವರಿ ಮೂಲ, ದ್ರಾಕ್ಷಿ, ಹಿಪ್ಪುನೇರಳೆ, ತೆಂಗಿನಕಾಯಿ ಇತ್ಯಾದಿಯಂಥ ವಿಶೇಷ ಬೆಳೆಗಳ ಸಂಬಂಧದಲ್ಲಿನ ಬೆಳೆಯ ಸ್ವರೂಪವನ್ನು ಆಧರಿಸಿದೆ.

೧೯೫೭ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮವನ್ನು ೧೯೮೩ರಲ್ಲಿ ತಿದ್ದುಪಡಿ ಮಾಡಲಾಯಿತು. ಅದನ್ನು ೧೯೮೨ರ ಮಾರ್ಚ್ ೩೧ಕ್ಕೆ ಕೊನೆಗೊಂಡ ಹಿಂದಿನ ವರ್ಷದ ತೆರಿಗೆಗೆ ಒಳಪಟ್ಟು ನೆಡುತೋಪು ಬೆಳೆಗಳಿಂದ ಉಂಟಾಗುವ ವರಮಾನಕ್ಕಾಗಿ ಮಾತ್ರ ಮಾಡಲಾಗಿದೆ. ವರಮಾನ ತೆರಿಗೆ ವಿನಾಯಿತಿಗಾಗಿ ವಿನಾಯಿತಿಯ ಪರಿಹಾರವು ೧೯೮೫ ಏಪ್ರಿಲ್ ೧ಕ್ಕೆ ಜಾರಿಗೆ ಬರುವಂತೆ ರೂ.೮,೦೦೦ ದಿಂದ ರೂ.೧೪,೦೦೦ಕ್ಕೆ ಅಲ್ಲಿಂದ ರೂ.೨೦,೦೦೦ಕ್ಕೆ ಏರಿತು.

ಹೊಸ ಒಡಂಬಡಿಕೆ ಯೋಜನೆಯನ್ನು ಒಳಗೊಂಡ ೧೯೮೫ರ ಕರ್ನಾಟಕ ಕೃಷಿ, ವರಮಾನ (ತಿದ್ದುಪಡಿ) ತೆರಿಗೆಯನ್ನು ನಂತರ ೧೯೮೬ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದಲ್ಲಿ ಮಾರ್ಪಡಿಸಿ ಬಾಳೆಹಣ್ಣಿನೊಂದಿಗೆ ಅಥವಾ ಪ್ರತ್ಯೇಕವಾಗಿ ತೆಂಗು, ಏಲಕ್ಕಿ, ಮೆಣಸು ಮತ್ತು ಕಿತ್ತಳೆಯೊಂದಿಗೆ ಬೆಳೆಸಿದ ೨೫೦ ಎಕರೆಗಳ ಕಾಫಿ ಬೆಳೆಯ ಹಿಡುವಳಿಯನ್ನು ಹೊಂದಿರುವ ವ್ಯಕ್ತಿಗಳಿಗೂ ದೊರಕುವಂತೆ ಮಾಡಲಾಯಿತು ಮತ್ತು ತೆರಿಗೆದಾರರಿಗೆ ಒಡಂಬಡಿಕೆ ನೀಡಿದಾಗ, ೧೫ ಎಕರೆಗಳವರೆಗೆ ಅಂಥ ಹಿಡುವಳಿಗಳಿಂದ ಪಡೆದ ವರಮಾನ ತೆರಿಗೆಗೆ ವಿನಾಯಿತಿ ನೀಡಲಾಯಿತು. ಒಡಂಬಡಿಕೆ ಯೋಜನೆಯ ಮೇರೆಗೆ ಇಡುಗಂಟಿನಲ್ಲಿ (ಒಟ್ಟಿಗೆ) ಸಂದಾಯ ಮಾಡಬೇಕಾದ ತೆರಿಗೆ ದರದ ವಿವರಗಳು ಕೆಳಕಂಡಂತಿವೆ.

೧. ೧೫ ಎಕರೆಗಳಿಗಿಂತ ಹೆಚ್ಚಿಲ್ಲದ ಭೂಮಿಯ ವಿಸ್ತೀರ್ಣದಲ್ಲಿ – ಇಲ್ಲ
೨. ೧೫ ಎಕರೆಗಳಿಗಿಂತ ಹೆಚ್ಚಿದ್ದು ೨೦ ಎಕರೆಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದಲ್ಲಿ ರೂ. ೧,೫೦೦
೩. ೧೫ ಎಕರೆಗಳಿಗಿಂತ ಹೆಚ್ಚಿದ್ದು ೨೫ ಎಕರೆಗಳಿಗಿಂತ ಕಡಿಮೆಯಿದ್ದಲ್ಲಿ ರೂ. ೨,೫೦೦

## ವೃತ್ತಿ ತೆರಿಗೆ

೧೯೭೬ಕ್ಕೂ ಮೊದಲು ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ಕಸಬುಗಳ ಮೇಲೆ ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಮಾತ್ರ ವಸೂಲು ಮಾಡುತ್ತಿದ್ದವು. ಕರ್ನಾಟಕದಲ್ಲಿ ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ಕಸಬುಗಳ ಮೇಲೆ ತೆರಿಗೆ ವಿಧಿಸುವಿಕೆಯು ೧೯೭೬ ಏಪ್ರಿಲ್ ೧ ರಿಂದ ಜಾರಿಗೆ ಬಂದಿತು. ವೇತನ ಪಡೆಯುವ ಉದ್ಯೋಗಿಗಳ ತೆರಿಗೆಯು ಅವರ ವೇತನ ಪ್ರಮಾಣದ ಮೇಲೆ ಮತ್ತು ವೃತ್ತಿ, ಕಸಬು, ವ್ಯಾಪಾರ ಇದರಲ್ಲಿ ತೊಡಗಿರುವ ಇತರರ ವಿಷಯದಲ್ಲಿ ವೃತ್ತಿಯನ್ನು ನಡೆಸಿಕೊಂಡು ಬರುತ್ತಿರುವ ಕಾಲ, ವಿಕ್ರಯದ ಪರಿಮಾಣ (ಟರ್ನ್ ಓವರ್), ಉದ್ಯೋಗಿಗಳ ಸಂಖ್ಯೆ ಮುಂತಾದಂಥ ವಿವಿಧ ಮಾನದಂಡಗಳನ್ನು ಅವಲಂಬಿಸಿರುತ್ತದೆ. ಆದರೂ, ೧೯೩೮ರ ವಿಮಾ ಅಧಿನಿಯಮದನ್ವಯ ಲೈಸೆನ್ಸ್ ಪಡೆದ ಅಥವಾ ನೋಂದಣಿ ಪಡೆದ ವಿಮಾ ಏಜೆಂಟರು ಮತ್ತು ಇತರರ ವಿಷಯದಲ್ಲಿ ತೆರಿಗೆ ದರಗಳು ತೆರಿಗೆದಾರರು ವೃತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಲಕ್ಕೆ ಬದಲಾಗಿ ಅವರು ಗಳಿಸಿದ ವರಮಾನವನ್ನು ಅವಲಂಬಿಸಿರುತ್ತದೆ.

೧೯೮೩ರ ಏಪ್ರಿಲ್ ಒಂದರಿಂದ ತಿಂಗಳಿಗೆ ರೂ.೧,೨೦೦/– ಮೂಲವೇತನ ಅಥವಾ ಅದಕ್ಕೆ ಮೇಲ್ಪಟ್ಟ ವರಮಾನವುಳ್ಳ (ಪ್ರಸಕ್ತ ಸಂಬಳಕ್ಕೆ ಸಾಕಷ್ಟು ಬದಲಾದ ನಿಲವು) ವ್ಯಕ್ತಿಗಳಿಗೆ ವೃತ್ತಿ ತೆರಿಗೆಯನ್ನು ವಿಧಿಸಲಾಗುತ್ತದೆ. ಈ ಅಧಿನಿಯಮದ ಮೇರೆಗೆ ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿದ ಸ್ವಯಂ ಉದ್ಯೋಗಿಗಳು ತಾವೇ ಪಟ್ಟಿಯಲ್ಲಿ ಸೇರಬೇಕು ಮತ್ತು ಏಪ್ರಿಲ್ ೩೦ಕ್ಕೆ ಮೊದಲು ವಾರ್ಷಿಕವಾಗಿ ನಿಗದಿತ ದರದಲ್ಲಿ ವೃತ್ತಿ ತೆರಿಗೆಯನ್ನು ಸಂದಾಯ ಮಾಡಬೇಕು. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದನ್ವಯ ವರ್ಷವೊಂದಕ್ಕೆ ಒಟ್ಟು ವಿಕ್ರಯ ಪರಿಮಾಣವು ರೂ. ೨೫,೦೦೦/–ಕ್ಕೆ ಮೇಲ್ಪಟ್ಟು ರೂ.೫೦೦೦೦/–ಕ್ಕಿಂತ ಕಡಿಮೆಯಿರುವ ನೋಂದಾಯಿತ ವ್ಯಾಪಾರಿಗಳನ್ನು ವೃತ್ತಿ ತೆರಿಗೆ ವ್ಯಾಪ್ತಿಯಡಿ ತರಲಾಗಿದೆ ಮತ್ತು ಅವರಿಗೆ ತಿಂಗಳಿಗೆ ೧೦೦ ರೂ.ಗಳ ತೆರಿಗೆಯನ್ನು ವಿಧಿಸಲಾಗಿದೆ ಮತ್ತು ವಾರ್ಷಿಕ ರೂ.೫೦,೦೦೦/– ಕ್ಕಿಂತ ಹೆಚ್ಚಿನ ವಿಕ್ರಯ ಪರಿಮಾಣ ಹೊಂದಿರುವವರಿಗೆ ತಿಂಗಳಿಗೆ ರೂ.೨೫೦ ತೆರಿಗೆಯನ್ನು ವಿಧಿಸಲಾಗಿದೆ.

೧೯೮೫ರ ಆಗಸ್ಟ್ ಒಂದರಿಂದ ಜಾರಿಗೆ ಬರುವಂತೆ ಯಾವುದೇ ವರ್ಷದಲ್ಲಿ ವಿಕ್ರಯ (ಮಾರಾಟ) ಪರಿಮಾಣವು ರೂ.೭೫,೦೦೦/- ಕ್ಕಿಂತ ಕಡಿಮೆಯಿದ್ದವರು ೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದನ್ವಯ ನೋಂದಾಯಿಸಿಕೊಳ್ಳಬೇಕು. ಹಾಗೆ ಈಗಾಗಲೇ ನೋಂದಾಯಿತರಾದ ಹಾಗೂ ನೋಂದಾಯಿಸಿಕೊಳ್ಳಬೇಕಾಗುವ ವ್ಯಾಪಾರಿಗಳನ್ನು ವೃತ್ತಿ ತೆರಿಗೆಯ ಜಾಲದಲ್ಲಿ ತರಲಾಯಿತು ಮತ್ತು ಅವರಿಗೆ ತಿಂಗಳೊಂದಕ್ಕೆ ರೂ.೨೫೦ ವೃತ್ತಿ ತೆರಿಗೆಯನ್ನು ವಿಧಿಸಲಾಯಿತು.

## ಭೋಗಸೌಲಭ್ಯಗಳ (ಲಕ್ಸುರಿ) ತೆರಿಗೆ

೧೯೭೯ರ ಕರ್ನಾಟಕ ಭೋಗಸೌಲಭ್ಯ (ಹೋಟೇಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮವು ೧೯೭೯ರ ಜೂನ್ ಒಂದರಿಂದ ಜಾರಿಗೆ ಬಂದಿತು. ಈ ಕಾನೂನಿನ್ವಯ ಯಾವುದೇ ವ್ಯಕ್ತಿಗೆ ಹೋಟೆಲುಗಳಲ್ಲಿ ಒದಗಿಸಿದ ಭೋಗವಸ್ತು (ಐಷಾರಾಮ)ಗಳ ಮೇಲೆ ಈ ಮುಂದಿನ ದರಗಳಲ್ಲಿ ತೆರಿಗೆ ವಿಧಿಸಲಾಯಿತು.

೧. ಒಬ್ಬರಿಗೆ ವಸತಿ ದರ ದಿನವೊಂದಕ್ಕೆ ೩೦ ರೂ.ಗಳಿದ್ದು, ೧೫೦ ರೂ. ಮೇಲ್ಪಡದಿದ್ದಲ್ಲಿ ದರದ ಶೇಕಡಾ ೧೦ ರಷ್ಟು

೨. ವಸತಿ ದರ ದಿನವೊಂದಕ್ಕೆ ಒಬ್ಬರಿಗೆ ೧೫೦ ರೂ.ಗಳಿದ್ದು, ೨೫೦ ರೂ. ಮೀರದಿದ್ದಲ್ಲಿ ದರದ ಶೇಕಡಾ ೧೫ರಷ್ಟು.

೩. ವಸತಿ ದರ ದಿನವೊಂದಕ್ಕೆ ಒಬ್ಬರಿಗೆ ರೂ.೪೫೦ ಮೀರಿದಲ್ಲಿ ಶೇಕಡಾ ೨೦ ರಷ್ಟು

## ಸ್ಟಾಂಪು ಮತ್ತು ನೋಂದಣಿ

೧೮೩೧ ರಿಂದ ೧೮೬೧ ರವರೆಗಿನ ನಡುವಿನ ಅವಧಿಯಲ್ಲಿ ನ್ಯಾಯಾಲಯ ಶುಲ್ಕವನ್ನು ಮುಖ್ಯವಾಗಿ ನಾಣ್ಯದಲ್ಲಿ ಮತ್ತು ಇತರ ರಸೀತಿಗಳೊಂದಿಗೆ ಪಾವತಿಸಲಾಗುತ್ತಿತ್ತು. ಕಾನೂನು ಮತ್ತು ನ್ಯಾಯಾಂಗದ ಶೀರ್ಷಿಕೆಗೆ ನ್ಯಾಯಾಲಯ ತೆರಿಗೆ ಮತ್ತು ಸ್ಟಾಂಪುಗಳ ತೆರಿಗೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿತ್ತು. ೧೮೬೭ರಲ್ಲಿ ಒಂದು ಸ್ಟಾಂಪುಗಳಿಗಾಗಿ ಮತ್ತು ಮತ್ತೊಂದು ನ್ಯಾಯಾಲಯ ತೆರಿಗೆಗಾಗಿ ಎಂದು ಎರಡು ಶಾಸನಗಳನ್ನು ಮಾಡಲಾಯಿತು. ಅನಂತರ ಅಧಿನಿಯಮಗಳಿಗೆ ಕಾಲಕಾಲಕ್ಕೆ ಹಲವಾರು ತಿದ್ದುಪಡಿಗಳನ್ನು ಮತ್ತು ವಿನಿಯಮಗಳನ್ನು ತಂದಿದ್ದು, ಅವುಗಳನ್ನು ಕಾಲಕಾಲಕ್ಕೆ ಜಾರಿಗೆ ತರಲಾಗಿದೆ.

ಕರ್ನಾಟಕ ಸ್ಟಾಂಪು ಅಧಿನಿಯಮವು ಐವತ್ತೈದು ಬೇರೆ ಬೇರೆ ರೀತಿಯ ದಸ್ತಾವೇಜುಗಳಿಗೆ ಅನ್ವಯವಾಗುತ್ತದೆ ಮತ್ತು ಅವು ಸ್ಟಾಂಪು ಶುಲ್ಕಕ್ಕೆ ಒಳಪಟ್ಟಿವೆ. ಈ ದಾಖಲೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ದಾಖಲೆಯ ಮೊದಲ ಗುಂಪು ಮುಂಗಡ ತೆರಿಗೆ, ಎರಡನೆಯ ಗುಂಪು ನಿಗದಿತ ತೆರಿಗೆ, ಮುಂಗಡ ತೆರಿಗೆಗೆ ಒಳಪಡುವ ದಾಖಲೆಗಳನ್ನು ಕನ್ವೆಯೆನ್ಸ್ ದಾಖಲೆಗಳು ಮತ್ತು ಬಾಂಡ್ ದಾಖಲೆಗಳೆಂದು ಪುನರ್ವಿಂಗಡಿಸಲಾಗಿದೆ. ವಾಹನಭತ್ಯೆ ದರವನ್ನು ಸಂಪೂರ್ಣ ಹಕ್ಕುಗಳು ಮತ್ತು ಬಡ್ಡಿಗಳು ಅಂದರೆ, ಮಾರಾಟ, ಕೊಡುಗೆ, ವಿನಿಮಯ ಇತ್ಯಾದಿಗಳೊಂದಿಗೆ ವರ್ಗಾಯಿತವಾದಂಥ ದಾಖಲೆಗಳ ಮೇಲೆ ವಿಧಿಸಬೇಕಾಗುತ್ತದೆ. ಸ್ವತ್ತಿನ ಮೇಲೆ ಸೀಮಿತ ಹಿತಾಸಕ್ತಿಯುಳ್ಳ ದಾಖಲೆಗಳಿಗೆ ಬಾಂಡ್ ರೇಟನ್ನು ವಿಧಿಸಲಾಗುತ್ತದೆ. ಉದಾಹರಣೆಗೆ ಸ್ವಾಧೀನವಲ್ಲದ ಭೋಗ್ಯ, ಪಾಲುದಾರಿಕೆ ಪತ್ರ, ಭದ್ರತೆ ಬಾಂಡ್ ಇತ್ಯಾದಿ. ವಾಹನಭತ್ಯೆ ದರವನ್ನು ೧೯೫೭ರಿಂದ ೧೯೭೯ರವರೆಗೆ ಎರಡು ಬಾರಿ ಪರಿಷ್ಕರಿಸಲಾಗಿದೆ. ಆದರೆ ೧೯೬೨ರವರೆಗೆ ಬದಲಾಗದ ಬಾಂಡ್ ದರವನ್ನು ೧೯೭೯ರಲ್ಲಿ ಮೂರನೇ ಒಂದು ಭಾಗದಷ್ಟು ಹೆಚ್ಚಿಸಲಾಯಿತು. ಒಪ್ಪಂದಗಳು, ಪ್ರಮಾಣಪತ್ರಗಳು (ಅಫಿಡವಿಟ್ಸ್), ದತ್ತು ಪತ್ರಗಳು ಮತ್ತು ಸಂಸ್ಥೆಗಳ ವಿವರಣ ಪತ್ರಗಳು (ಆರ್ಟಿಕಲ್ಸ್ ಆಫ್ ಆಸೋಸಿಯೇಷನ್) – ಇವುಗಳ ಮೇಲೆ ನಿರ್ದಿಷ್ಟ ದರವನ್ನು ವಿಧಿಸಲಾಗುತ್ತದೆ. ಹಕ್ಕುಗಳ ಆಧಾರದ ಮೇಲೆ ದಾಖಲೆಯ ವರ್ಗೀಕರಣವೇ ಅಲ್ಲದೆ, ದಾಖಲೆಗಳನ್ನು ನ್ಯಾಯಿಕ ಮತ್ತು ನ್ಯಾಯಕವಲ್ಲದ ಎಂದೂ ವಿಂಗಡಿಸಲಾಗಿದೆ. ೧೯೫೮ರ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವೆಗಳ ಅಧಿನಿಯಮದನ್ವಯ ಸ್ಟಾಂಪು ಶುಲ್ಕ ಅಥವಾ ನ್ಯಾಯಿಕ ದಾಖಲೆಗಳು

ನಿಯಂತ್ರಿಸಲ್ಪಟ್ಟಿದೆ. ಭಾರತೀಯ ಸ್ಟಾಂಪು ಅಧಿನಿಯಮದಡಿ ಬರುವ ವಿಷಯಗಳನ್ನು ಕಾನೂನೇತರ ಪತ್ರದ ಮೇಲೆ ನಮೂದಿಸಬೇಕಾಗುತ್ತದೆ.

ಜಿಲ್ಲೆಯ ಉಪ ನೋಂದಣಾಧಿಕಾರಿ ಕಚೇರಿಗಳು ಈ ಕೆಳಗಿನ ಅಧಿನಿಯಮಗಳನ್ವಯ ಕಾರ್ಯನಿರ್ವಹಿಸುತ್ತವೆ.

೧. ೧೯೦೮ರ ನೋಂದಣಿ ಅಧಿನಿಯಮ

೨. ೧೯೬೫ರ ಕರ್ನಾಟಕ ನೋಂದಣಿ ನಿಯಮಗಳು

೩. ೧೯೬೭ರ ಕರ್ನಾಟಕ ಸ್ಟಾಂಪು ಅದಿನಿಯಮಗಳು ಮತ್ತು ನಿಯಮಗಳು

೪. ೧೯೫೮ರ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವೆಗಳ ಮೌಲ್ಯಾಂಕನ (*Suit's Valuation*) ಅಧಿನಿಯಮ

೫. ೧೯೩೨ರ ಭಾರತೀಯ ಪಾಲುದಾರಿಕೆ ಅಧಿನಿಯಮ

ಜಿಲ್ಲಾ ಮಟ್ಟದಲ್ಲಿ ವಿಶೇಷ ಜಿಲ್ಲಾಧಿಕಾರಿ ಮತ್ತು ಅವರ ಗೈರುಹಾಜರಿಯಲ್ಲಿ ಜಿಲ್ಲಾಧಿಕಾರಿಯು ಪದನಿಮಿತ್ತ ಜಿಲ್ಲಾ ನೋಂದಣಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ತನ್ನ ಪ್ರಾಂತದ ಸ್ಥಿರಾಸ್ತಿಯ ದಸ್ತಾವೇಜುಗಳ ನೋಂದಣಿ ಹಾಗೂ ನೋಂದಣಿ ಶುಲ್ಕಗಳ ವಸೂಲಿಯ ಕೆಲಸವನ್ನು ಉಪ ನೋಂದಣಾಧಿಕಾರಿಗೆ ವಹಿಸಲಾಗಿದೆ. ಇವರು ಜಿಲ್ಲೆಯಲ್ಲಿ ಜಾರಿಯಲ್ಲಿರುವ ವಿವಿಧ ವಿವಾಹ ಅಧಿನಿಯಮದಡಿ ಬರುವ ವಿವಾಹಗಳ ನೋಂದಣಿ ಅಧಿಕಾರಿಯೂ ಆಗಿರುತ್ತಾರೆ.

ಹೊಸ ಜಿಲ್ಲೆಯಾಗಿ ರೂಪುಗೊಂಡ ಉಡುಪಿ ಜಿಲ್ಲೆಯಲ್ಲಿ ೧೫-೧೨-೧೯೯೭ರಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಪ್ರಾರಂಭವಾಯಿತು. ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳು ಬರುತ್ತವೆ. ಉಡುಪಿಯಲ್ಲಿ ಜಿಲ್ಲಾ ನೋಂದಣಿ ಕಚೇರಿ ಇದೆ. ಉಡುಪಿಯಲ್ಲಿ ಹಿರಿಯ ಉಪನೋಂದಣಿ ಕಚೇರಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಶಂಕರನಾರಾಯಣ ಹಾಗೂ ಕಾರ್ಕಳದಲ್ಲಿ ಒಂದೊಂದು ಉಪನೋಂದಣಿ ಕಚೇರಿಗಳಿವೆ. ಜಿಲ್ಲೆಯಲ್ಲಿ ಒಟ್ಟು ಒಂದು ಹಿರಿಯ ಉಪನೋಂದಣಿ ಕಚೇರಿ ಹಾಗೂ ಐದು ಉಪನೋಂದಣಿ ಕಚೇರಿಗಳಿವೆ. ಜಿಲ್ಲಾ ನೋಂದಣಿ ಕಚೇರಿಯಲ್ಲಿ ಸಂಘ/ಸಂಸ್ಥೆಗಳ ನೋಂದಣಿ, ಪಾಲುದಾರಿಕಾ ಸಂಸ್ಥೆಗಳ ನೋಂದಣಿ, ೪೫-ಎ/೪೬-ಎ/೮೦-ಎ ಪ್ರಕರಣಗಳ ತೀರ್ಮಾನ, ಇಲಾಖೆಗೆ ಸಂಬಂಧಪಟ್ಟ ಭೂ ಕಂದಾಯ ಬಾಕಿ ವಸೂಲಿ, ದಸ್ತಾವೇಜು ಬರಹಗಾರರಿಗೆ ಪರವಾನಿಗೆ, ಮುದ್ರಾಂಕಗಳ ಮರುಪಾವತಿ ಮುಂತಾದ ಅನೇಕ ನಿಯಮಗಳು ಹಾಗೂ ಉಪನೋಂದಣಿ ಕಚೇರಿಯಲ್ಲಿ ಚರ ಮತ್ತು ಸ್ಥಿರಾಸ್ತಿ ನೋಂದಣಿ, ವಿವಾಹ ನೋಂದಣಿ, ಟ್ರಸ್ಟ್ ನೋಂದಣಿ ಮುಂತಾದ ನಿಯಮಗಳು ಚಾಲ್ತಿಯಲ್ಲಿವೆ.

**ಕೋಷ್ಟಕ ೯.೨ : ಜಿಲ್ಲಾವಾರು ಸಂಗ್ರಹವಾದ ರಾಜಸ್ವ ವಿವರ**

| ವರ್ಷ | ನೋಂದಾಯಿಸಿದ ದಸ್ತಾವೇಜು ಸಂಖ್ಯೆ | ಸ್ಟ್ಯಾಂಪ್ ಶುಲ್ಕ | ನೋಂದಣಿ ಶುಲ್ಕ | ಒಟ್ಟು |
|---|---|---|---|---|
| ೧೯೯೭-೧೯೯೮ | ೧೫೦೮೩ | ೮೫೧೧೩೧೭೪ | ೧೬೯೦೬೯೫೭ | ೧೦೨೦೨೦೧೩೧ |
| ೧೯೯೮-೧೯೯೯ | ೧೪೦೩೩ | ೮೬೯೦೪೬೭೬ | ೧೮೦೩೮೦೪೭ | ೧೦೪೯೪೨೭೨೩ |
| ೧೯೯೯-೨೦೦೦ | ೧೩೪೭೭ | ೮೪೪೧೭೫೫೦ | ೧೭೨೦೨೭೮೬ | ೧೦೧೬೨೦೩೩೬ |
| ೨೦೦೦-೨೦೦೧ | ೧೪೭೩೮ | ೭೯೮೨೧೮೮೩ | ೨೦೬೨೧೮೧೬ | ೧೦೦೪೪೩೬೯೯ |
| ೨೦೦೧-೨೦೦೨ | ೧೬೬೪೪ | ೭೫೬೪೧೦೮೮ | ೧೯೧೬೬೪೭೮ | ೯೪೮೦೭೫೬೬ |
| ೨೦೦೨-೨೦೦೩ | ೧೨೬೨೨ | ೭೮೩೭೦೪೭೬ | ೨೯೫೭೪೮೭೪ | ೯೭೯೪೫೩೫೦ |
| ೨೦೦೩-೨೦೦೪ | ೧೪೭೪೧ | ೮೪೮೭೧೬೪೯ | ೧೫೬೨೮೮೪೩ | ೧೦೦೫೦೦೪೯೨ |
| ೨೦೦೪-೨೦೦೫ | ೧೪೯೪೩ | ೧೨೧೫೪೫೬೨೮ | ೧೯೮೭೬೩೭೫ | ೧೪೧೪೨೨೦೦೩ |

*ಆಧಾರ : ಜಿಲ್ಲಾ ನೋಂದಣಾಧಿಕಾರಿ ಕಛೇರಿ, ಉಡುಪಿ.*

**ಕೋಷ್ಟಕ ೯.೩ : ಜಿಲ್ಲೆಯಲ್ಲಿ ೧೯೯೩-೯೪ ರಿಂದ ೨೦೦೩-೦೪ರವರೆಗೆ ವಸೂಲಿ ಮಾಡಿದ ರಾಜಸ್ವ ವಿವರ.**

| ವರ್ಷ | ರಾಜಸ್ವ ಸಂಗ್ರಹಣೆ (ರೂ.ಗಳಲ್ಲಿ) |
|---|---|
| ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ | |
| ೧೯೯೪-೧೯೯೫ | ೫,೫೩,೩೩,೦೪೦ |
| ೧೯೯೫-೧೯೯೬ | ೬,೨೮,೨೮,೧೮೧ |
| ೧೯೯೬-೧೯೯೭ | ೧೦,೫೪,೮೩,೪೯೭ |
| ಉಡುಪಿ ಜಿಲ್ಲೆ | |
| ೧೯೯೭-೧೯೯೮ | ೯,೪೬,೭೩,೬೫೦ |
| ೧೯೯೮-೧೯೯೯ | ೧೧,೩೦,೫೪,೦೨೫ |
| ೧೯೯೯-೨೦೦೦ | ೧೨,೬೭,೭೨,೧೯೫ |
| ೨೦೦೦-೨೦೦೧ | ೧೪,೦೬,೭೬,೦೧೦ |
| ೨೦೦೧-೨೦೦೨ | ೧೬,೭೧,೯೯,೬೭೪ |
| ೨೦೦೨-೨೦೦೩ | ೧೮,೭೫,೯೧,೨೮೩ |
| ೨೦೦೩-೨೦೦೪ | ೨೦,೨೩,೮೭,೪೧೮ |

***ಆಧಾರ :*** *ಜಿಲ್ಲಾಧಿಕಾರಿ ಕಛೇರಿ, ಉಡುಪಿ.*

## ರಾಜ್ಯ ಅಬಕಾರಿ

೧೯೬೫ರ ಕರ್ನಾಟಕ ಅಬಕಾರಿ ಅಧಿನಿಯಮವು ವಿವಿಧ ಸಂಘಟಿತ ಪ್ರದೇಶಗಳಲ್ಲಿ ಜಾರಿಯಲ್ಲಿರುವ ವಿವಿಧ ಅಬಕಾರಿ ಕಾನೂನುಗಳನ್ನು ಪ್ರತಿಸ್ಥಾಪಿಸಿ ಸಮಗ್ರ ತೆರಿಗೆ ರಚನೆಯ ಜಾಲ ರೂಪಿಸಿದೆ.

೧. ಅಧಿನಿಯಮದನ್ವಯ ರಾಜ್ಯ ಸರ್ಕಾರವು ನಿಗದಿಪಡಿಸಿದಂಥ ದರಗಳಲ್ಲಿ ಅಬಕಾರಿ ಸುಂಕವನ್ನು ಯಾವುದೇ ಲೈಸೆನ್ಸ್ ಅಥವಾ ಪರವಾನಿಗೆಯಲ್ಲಿ ತಯಾರಿಸಲಾದ ಅಥವಾ ಉತ್ಪಾದಿಸಲಾದ ಯಾವುದೇ ಅಬಕಾರಿ ಶುಲ್ಕ ವಿಧಿಸಬಹುದಾದ ವಸ್ತುಗಳ ಮೇಲೆ ವಿಧಿಸಲಾಗುತ್ತದೆ.

೨. ಅದಿನಿಯಮದನ್ವಯ ನೀಡಲಾದ ಅಂಥ ದರ ಅಥವಾ ದರಗಳಲ್ಲಿ ಪ್ರತಿಸುಂಕವನ್ನು ಲೈಸೆನ್ಸ್ ಅಥವಾ ಪರವಾನಿಗೆಯಡಿ ತಯಾರಿಸಿದ ಅಥವಾ ಉತ್ಪಾದಿಸಿದ ಯಾವುದೇ ಅಬಕಾರಿ ಶುಲ್ಕ ವಿಧಿಸಬಹುದಾದ ವಸ್ತುವಿನ ಮೇಲೆ ವಿಧಿಸಲಾಗುತ್ತದೆ.

ಅಬಕಾರಿ ಸುಂಕವನ್ನು ಕಾಕಂಬಿ, ಬ್ರಾಂದಿ, ವಿಸ್ಕಿ, ರಮ್, ಜಿನ್, ಮಿಲ್ಕ್ ಪಂಚ್ ಮತ್ತು ರಾಜ್ಯದಲ್ಲಿನ ಸಾರಾಯಿಬಟ್ಟಿಗಳಲ್ಲಿ ತಯಾರಿಸಲಾದ ರೆಕ್ಟಿಫೈಡ್ ಮದ್ಯಸಾರ, ಬೀರ್, ವೈನ್, ಫೆನ್ನಿ ಮುಂತಾದಂಥ ಇತರ ಸಾರಾಯಿಗಳ ಮೇಲೆ ವಿಧಿಸಬಹುದಾಗಿದೆ.

## ಅಬಕಾರಿ ತೆರಿಗೆಗಳು

**ಅಬಕಾರಿ ತೆರಿಗೆಯು** ೧. ಅಬಕಾರಿ ಸುಂಕ ೨. ಲೀಟರ್ ಶುಲ್ಕ ೩. ಮರ ತೆರಿಗೆ ೪. ಮರ ಬಾಡಿಗೆ ೫. ಪ್ರತಿಸುಂಕ ೬. ಅಂಗಡಿ ಬಾಡಿಗೆ ೭. ರಫ್ತು ಸುಂಕ ೮. ಲೈಸೆನ್ಸ್ ಶುಲ್ಕ – ಇವುಗಳನ್ನು ಒಳಗೊಳ್ಳುತ್ತವೆ. ೧. ಕಾನೂನು ಬಾಹಿರ ತಯಾರಿಕೆ ೨. ಕಾನೂನು ಬಾಹಿರ ಸಾಗಣೆಗೆ ೩.ಕಾನೂನುಬಾಹಿರ ಸ್ವಾಧೀನ ಮತ್ತು ಅಬಕಾರಿ ಅಧಿನಿಯಮದ ಉಲ್ಲಂಘನೆ ೪. ಮಾನವ ಬಳಕೆಗೆ ಯೋಗ್ಯವಲ್ಲದ ಕೃತಕ (ಕಳ್ಳಬಟ್ಟಿ) ಮದ್ಯಸಾರ ಮಾಡುವುದು ೫. ಲೈಸೆನ್ಸ್‌ನ ತಪ್ಪಾದ ಬಳಕೆ ೬. ಕಲಬೆರಕೆ ೭. ಒಬ್ಬನ ಪರವಾಗಿ ಮತ್ತೊಬ್ಬ ವ್ಯಕ್ತಿ, ತಯಾರಿಕೆ, ಮಾರಾಟ ಅಥವಾ ಸ್ವಾಧಿನತೆ ೮. ಅಪರಾಧ ಮಾಡುವ ಉದ್ದೇಶಕ್ಕಾಗಿ ಆವರಣ, ಪಾತ್ರೆ, ವಾಹನವನ್ನು ಬಳಸಲು ಅವಕಾಶ ನೀಡುವುದಕ್ಕೆ – ದಂಡನೆಯನ್ನು ವಿಧಿಸಲಾಗುತ್ತದೆ.

## ಮೋಟಾರು ವಾಹನ ತೆರಿಗೆ

ಮೋಟಾರು ವಾಹನ ತೆರಿಗೆಯನ್ನು ೧೯೨೪ರಲ್ಲಿ ಪ್ರಾರಂಭಿಸಲಾಯಿತು. ವಾಹನದ ಸ್ವರೂಪ ಮತ್ತು ಅದರ ಅಶ್ವಶಕ್ತಿಯನ್ನವಲಂಬಿಸಿ ನೋಂದಣಿ ತೆರಿಗೆಯ ರೀತಿಯು ವಿಭಿನ್ನವಾಗಿರುತ್ತದೆ. ೧೯೨೫ರಲ್ಲಿ ಮೋಟಾರು ಬಸ್ಸುಗಳು ಮತ್ತು ಮ್ಯಾಕ್ಸಿಕ್ಯಾಬ್‌ಗಳ ಪರವಾನಿಗೆ ತೆರಿಗೆಯ ಹೆಚ್ಚುವರಿ ಲೆವಿಗೆ ಒಳಪಡುತ್ತವೆ. ಅವುಗಳು ಬಸ್ಸುಗಳಿಗೆ ಸಂಬಂಧಿಸಿದಂತೆ ಸಾಗಿದ ದೂರವನ್ನವಲಂಬಿಸಿ ಬದಲಾಗುತ್ತದೆ. ಅದರ ಪರಿಣಾಮವಾಗಿ ಈ ಲೆವಿಯಿಂದ ತಮ್ಮ ಅಧಿಕಾರಿ ವ್ಯಾಪ್ತಿಯಲ್ಲಿ ಬರುವ ವಾಹನಗಳ ಮೇಲೆ ಪುರಸಭೆಗಳು ತೆರಿಗೆಯನ್ನು ವಿಧಿಸುತ್ತವೆ. ಸುಂಕಗಳನ್ನು ಪುರಸಭೆಗಳು ಮತ್ತು ಜಿಲ್ಲಾ ಮಂಡಳಿಗಳು ವಿಧಿಸುತ್ತವೆ. ಮೋಟಾರು ವಾಹನ ತೆರಿಗೆ ಶುಲ್ಕ ವಸೂಲಿಯು ರಸ್ತೆ ಅಭಿವೃದ್ಧಿ ಮೇಲಿನ ವೆಚ್ಚಕ್ಕೆ ಸಂಬಂಧಿಸಿರುತ್ತದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧-೧೧-೧೯೭೮ರಂದು ಉಪಪ್ರಾದೇಶಿಕ ಸಾರಿಗೆ ಕಚೇರಿ ಕಾರ್ಯಾರಂಭ ಮಾಡಿತು. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯು ಕಚೇರಿಯ ಮುಖ್ಯಸ್ಥರಾಗಿದ್ದು, ಆಗ ಪ್ರಾದೇಶಿಕ ಸಾರಿಗೆ ಕಚೇರಿ ಮಂಗಳೂರು ಅಧೀನದಲ್ಲಿತ್ತು. ೧೯೮೪ರಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಯಾಗಿ ಉನ್ನತೀಕರಣಗೊಂಡಿತು. ಹೊಸ ಜಿಲ್ಲೆಯಾಗಿ ಉಡುಪಿ ರೂಪುಗೊಂಡ ನಂತರ ೧೯೯೭ರಲ್ಲಿ ಜಿಲ್ಲಾ ಮಟ್ಟದ ಕಚೇರಿಯಾಗಿದೆ. ೨೦೦೩-೦೪ರ ಅಂತ್ಯಕ್ಕೆ ಕಚೇರಿಯಲ್ಲಿ ೯೩,೫೨೧ ಸಂಖ್ಯೆಯ ವಾಹನಗಳು ನೋಂದಣಿಯಾಗಿದ್ದು, ೨೮-೨-೨೦೦೫ಕ್ಕೆ ೧,೦೨,೨೬೦ ವಾಹನಗಳು ನೋಂದಣಿಯಾಗಿರುತ್ತದೆ.

## ವಿದ್ಯುತ್ ತೆರಿಗೆ

ವಿದ್ಯುಚ್ಛಕ್ತಿಯ ಬಳಕೆಯ ಮೇಲೆ ತೆರಿಗೆಯನ್ನು ವಿಧಿಸಲು ಜೂನ್ ೧೯೫೦ರಲ್ಲಿ ಮೊದಲು ಪ್ರಾರಂಭಿಸಲಾಯಿತು. ವಿದ್ಯುತ್ ಸ್ಥಾಪನೆಗಳ ಮುಂದಿನ ಪ್ರವರ್ಗಗಳ ಮೇಲೆ ಸುಂಕ ದರವನ್ನು ಶೇಕಡಾ ೧೦ರ ದರದಲ್ಲಿ ವಿಧಿಸಲಾಗುತ್ತದೆ.

೧) ನಗರದ ಬೀದಿ ದೀಪಗಳು, ಸಣ್ಣ ಪುರಸಭೆಗಳು ಮತ್ತು ಗ್ರಾಮ ಪಂಚಾಯಿತಿಗಳು.

೨) ಹಿಟ್ಟಿನ ಗಿರಣಿಗಳು, ಫೋಟೋ ತೆಗೆಯುವ ಸ್ಟುಡಿಯೋಗಳು ಮತ್ತು ಇತರ ಕೈಗಾರಿಕೆಗಳು

೩) ಕ್ಯಾಮರಾ ಸ್ಥಾವರಗಳು

೪) ಬಟ್ಟೆ ಗಿರಣಿಗಳು ಮತ್ತು ದಿನದ ಮತ್ತು ರಾತ್ರಿಯ ವಿದ್ಯುತ್ ಸರಬರಾಜಿಗಾಗಿ ಪ್ರತ್ಯೇಕ ದರಗಳನ್ನು ಹೊಂದಿರುವ ಇತರ ಕೈಗಾರಿಕೆಗಳು

೫) ವಿಶೇಷ ವ್ಯವಸ್ಥೆಯಡಿ ಪ್ರಧಾನ ಕೈಗಾರಿಕೆಗಳಿಗೆ ಸರಬರಾಜು ಮಾಡಿದ ವಿದ್ಯುತ್.

ಅನಂತರ ಈ ತೆರಿಗೆಯನ್ನು ೧೯೫೪ರ ಏಪ್ರಿಲ್ ಒಂದರಿಂದ ಜಾರಿಗೆ ಬರುವಂತೆ ವಿದ್ಯುತ್ತಿನ ಪ್ರತೀ ಯೂನಿಟ್ಟಿಗೆ ಗರಿಷ್ಠ ಮೂರು ಕಾಸಿಗೆ ಒಳಪಟ್ಟು ಶೇಕಡಾ ೨೦ಕ್ಕೆ ಏರಿಸಲಾಯಿತು. ವಿದ್ಯುಚ್ಛಕ್ತಿಯ ಬಳಕೆಯ ಮೇಲೆ ತೆರಿಗೆಯ ಬೇರೆ ಬೇರೆ ದರಗಳು ಹಲವಾರು ಸಂಘಟಿತ ಪ್ರದೇಶಗಳಲ್ಲಿ ಜಾರಿಯಲ್ಲಿವೆ. ಅವಿಭಜಿತ ಪ್ರದೇಶದಲ್ಲಿ ಜಾರಿಯಲ್ಲಿರುವ ದರಗಳು ದೀಪದ ಪ್ರತೀ ಒಂದು ಯೂನಿಟ್‌ಗೆ ½ ಆಣೆಯಾಗಿತ್ತು. (೧೨ ಯೂನಿಟ್‌ಗಳಿಗಿಂತ ಕಡಿಮೆ ಬಳಸುವ ಬಳಕೆದಾರರಿಗೆ ವಿನಾಯಿತಿಯಿತ್ತು) ಮತ್ತು ಇತರ ಎಲ್ಲ ಬಳಕೆಗಾಗಿ ಪ್ರತಿ ಯೂನಿಟ್ಟಿಗೆ ¼ ಆಣೆ ಆಗಿತ್ತು.

ವಿವಿಧ ಸಂಘಟಿತ ಪ್ರದೇಶಗಳಲ್ಲಿ ತೆರಿಗೆಯ ಬೇರೆ ಬೇರೆ ದರಗಳಿಗೆ ಬದಲಾಗಿ ಏಕರೂಪದ ದರ ಸೂಚಿಯನ್ನು ೧೯೫೯ರ ಮೈಸೂರು ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) ಅಧಿನಿಯಮದ ಉಪಬಂಧಗಳಿಗನುಗುಣವಾಗಿ ಆರಂಭಿಸಲಾಯಿತು. ಈ ಅಧಿನಿಯಮದನ್ವಯ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್ಟಿಗೆ (೧೯೭೦ಕ್ಕೆ ಮೊದಲು, ಗರಿಷ್ಠ ದರವು ೩ ಪೈಸೆಯಾಗಿತ್ತು.) ಆರು ಪೈಸೆಗೆ ಮೀರದಂತೆ ತೆರಿಗೆಯನ್ನು ವಿಧಿಸಲು ಅವಕಾಶವಿರುತ್ತದೆ. ಗೃಹೇತರ ಉದ್ದೇಶಕ್ಕಾಗಿ ಬಳಕೆದಾರನಿಗೆ ಸರಬರಾಜು ಮಾಡಿದ ವಿದ್ಯುಚ್ಛಕ್ತಿ ಘಟಕಗಳಲ್ಲಿ ಮೀಟರ್‌ನಿಂದ ನಿರ್ಧರಿಸಲಾಗದು. ಆದರೆ ಲೈಸನ್ಸ್‌ನಲ್ಲಿ ಯಾವುದೇ ಸೂತ್ರ ಅನ್ವಯಕ್ಕೆ

ಆಧಾರದ ಮೇಲೆ ತೆರಿಗೆ ವಿಧಿಸಬೇಕು ಮತ್ತು ವಿದ್ಯುಚ್ಛಕ್ತಿ ಯೂನಿಟ್‌ಗಳ ಮೇಲೆ ಮತ್ತು ಅಂಥ ಸೂತ್ರದ ಆಧಾರದ ಮೇಲೆ ತೆರಿಗೆ ಸಂದಾಯ ಮಾಡಬೇಕು. ಒಂದೇ ದರ ವಿಧಿಸಬೇಕಾದಲ್ಲಿ ತೆರಿಗೆಯನ್ನು ದರ ಸೂಚಿಗನುಗುಣವಾಗಿ ವಿಧಿಸಬೇಕು.

ಕರ್ನಾಟಕ ಸರ್ಕಾರವು ವಿದ್ಯುತ್ ವಲಯದಲ್ಲಿ ಮೂಲಭೂತ ಮತ್ತು ಗಮನಾರ್ಹ ಸುಧಾರಣೆಗಳ ಪ್ರಸಾವವನ್ನಿಟ್ಟು ಸಾಮಾನ್ಯ ಕಾರ್ಯನೀತಿಯೊಂದನ್ನು ರೂಪಿಸಿತು. ೧೯೯೯ರಲ್ಲಿ ಪ್ರಾರಂಭಿಸಲಾದ ಸುಧಾರಣಾ ವಿಧೇಯಕವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಪುನಾರಚಿಸುವ ಮತ್ತು ನಿಗಮಗೊಳಿಸುವ ಪ್ರಮುಖ ಆಜ್ಞೆಯನ್ನು ಹೊರಡಿಸಿತು ವಿದ್ಯುಚ್ಛಕ್ತಿ ಪ್ರಸರಣ ಮತ್ತು ಹಂಚಿಕೆಯನ್ನು ನೋಡಿಕೊಳ್ಳಲು, ಅದೇ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತವೆಂದು ಪರಿವರ್ತನೆಗೊಂಡಿತು.

೧-೬-೨೦೦೨ಕ್ಕೆ ಮೊದಲು ಮೈಸೂರಿನಲ್ಲಿ ಕಚೇರಿ ಹೊಂದಿದ್ದ ಮುಖ್ಯ ಪ್ರಾದೇಶಿಕ ಇಂಜಿನಿಯರ್ ಮುಖ್ಯಸ್ಥರಾಗಿರುವಂಥ ಮಂಗಳೂರು ವಲಯವು ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿತ್ತು ಮತ್ತು ಮಂಗಳೂರು ವೃತ್ತ ಕಚೇರಿಯಾಗಿತ್ತು.

೧-೬-೨೦೦೨ರ ನಂತರ ಅದರ ಅಧಿಕಾರ ವ್ಯಾಪ್ತಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸೀಮಿತವಾಯಿತು. ಪ್ರಸಕ್ತ ಕಚೇರಿಯನ್ನು ಮಂಗಳೂರು ವಿದ್ಯುತ್ ಪ್ರಸರಣಾ ಸಂಸ್ಥೆ ಅಥವಾ 'ಮೆಸ್ಕಾಂ' ಎಂದು ಕರೆಯಲಾಗುವುದು. ಕೇಂದ್ರ ಕಚೇರಿ ಹಾಗೂ ವೃತ್ತ ಕಚೇರಿಯು ಮಂಗಳೂರಿನಲ್ಲಿದ್ದು ಅಧೀಕ್ಷಕ ಇಂಜಿನಿಯರ್ ಮುಖ್ಯಸ್ಥರಾಗಿರುತ್ತಾರೆ.

## ಅರಣ್ಯ ಅಭಿವೃದ್ಧಿ ತೆರಿಗೆ

ರಾಷ್ಟ್ರೀಯ ಮಹತ್ವದ ಆಸ್ತಿಯಾದ ಅರಣ್ಯಗಳು ಸರಕಾರಕ್ಕೆ ತೆರಿಗೆ ತರುವ ಮುಖ್ಯ ಮೂಲಗಳಾಗಿವೆ ಮತ್ತು ಅವುಗಳನ್ನು ಶಾಶ್ವತವಾಗಿ ಅಧಿಕ ಉತ್ಪಾದನೆಯನ್ನು ತರುವಂಥ ತತ್ವದ ಮೇಲೆ ನಿರ್ವಹಿಸಲಾಗುತ್ತಿದೆ. ಅರಣ್ಯ ವಲಯದಲ್ಲಿ ಹೂಡಿಕೆಯನ್ನು ಬೆಳೆಸುವ ದೃಷ್ಟಿಯಿಂದಾಗಿ, ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಡಿಸೆಂಬರ್ ೧೯೭೫ ರಿಂದ ರಾಜ್ಯ ಸರ್ಕಾರವು ಪ್ರಾರಂಭಿಸಿತು. ಮತ್ತು ತೆರಿಗೆಯ ಹಣವನ್ನು ಅರಣ್ಯಾ ಅಭಿವೃದ್ಧಿಗೇ ಮೀಸಲಿರಿಸಿತು. ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಕರ್ನಾಟಕ ಅರಣ್ಯ ಅಧಿನಿಯಮದಡಿ ವಿಧಿಸಲಾಗುತ್ತದೆ. ಪ್ರಾರಂಭದಲ್ಲಿ ಈ ತೆರಿಗೆಯು ಶೇಕಡಾ ೫ರಷ್ಟಿದ್ದು, ೧-೪-೧೯೮೦ ರಿಂದ ಅವನ್ನು ಶೇಕಡಾ ಲಕ್ಕೆ ಏರಿಸಲಾಯಿತು. ಚೌಬೀನೆ (ಮರಮಟ್ಟು), ಉರವಲು, ಕಲ್ಲಿದ್ದಲು, ಸಣ್ಣ ಅರಣ್ಯ ಉತ್ಪನ್ನ, ಶ್ರೀಗಂಧ, ಬಿದಿರು ಇತ್ಯಾದಿಗಳಂಥ ಎಲ್ಲ ಅರಣ್ಯ ಉತ್ಪನ್ನಗಳ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತದೆ. ರಾಜ್ಯ ಸರ್ಕಾರವು ಅದರ ವಿಲೇವಾರಿಯನ್ನು ಮಾರಾಟದಿಂದ ಅಥವಾ ಅನ್ಯಥಾ ಮಾಡಲಾಗುತ್ತದೆ. ತೆರಿಗೆ ದರದ ಉದ್ದೇಶಕ್ಕಾಗಿ ಅರಣ್ಯ ಉತ್ಪನ್ನದ ವಿವಿಧ ಬಗೆಗಳ ನಡುವೆ ಯಾವುದೇ ತಾರತಮ್ಯ ಇರುವುದಿಲ್ಲ.

೧) ೧೯೭೬ರ ಕರ್ನಾಟಕ ಅರಣ್ಯ ಸಂಹಿತೆ

೨) ೧೯೮೮ರ ತಿದ್ದುಪಡಿಯೊಂದಿಗೆ ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ

೩) ೧೯೬೩ರ ಕರ್ನಾಟಕ ಅರಣ್ಯ ಅಧಿನಿಯಮ ಮತ್ತು ೧೯೬೯ರ ನಿಯಮಗಳು

೪) ಕರ್ನಾಟಕ ಅರಣ್ಯ ಕೈಪಿಡಿ

೫) ೧೯೭೬ರ ಕರ್ನಾಟಕ ವೃಕ್ಷ ಸಂರಕ್ಷಣೆ ಅಧಿನಿಯಮ

೬) ೧೯೭೨ರ ಕರ್ನಾಟಕ ವನ್ಯಜೀವಿ ಸಂರಕ್ಷಣೆ ಅಧಿನಿಯಮ

೭) ೧೯೮೦ರ ಅರಣ್ಯ ಸಂರಕ್ಷಣೆ ಅಧಿನಿಯಮ

# ಕೇಂದ್ರ ತೆರಿಗೆಗಳು

## ಕೇಂದ್ರ ಅಬಕಾರಿ

ಅಬಕಾರಿ ಎಂಬ ಪದವನ್ನು ಮೊದಲು ಸುಂಕ ಅಥವಾ ತೆರಿಗೆ ಎಂಬ ಸಾಮಾನ್ಯ ಪದದಂತೆ ಬಳಸಲಾಗುತ್ತಿತ್ತು. ಅನಂತರ ಗ್ರಾಹಕರು ಸಂದಾಯ ಮಾಡುವ ವಸ್ತುಗಳ ಬೆಲೆ ಎಂಬ ಅರ್ಥವನ್ನು ಪಡೆಯಿತು. ಅಬಕಾರಿಯನ್ನು ಬಹಳ ಹಿಂದಿನಿಂದಲೇ ಸುಂಕದ ರೂಪದಲ್ಲಿಯೋ ಅಥವಾ ತೆರಿಗೆ ರೂಪದಲ್ಲಿಯೋ ಅಥವಾ ಬೆಲೆಯಂತೆಯೋ ವಸೂಲು ಮಾಡಲಾಗುತ್ತಿತ್ತು.

ಅಬಕಾರಿ ವಸೂಲಿ ಪದ್ಧತಿಯು ಹತ್ತಿ ನೂಲಿನ ಲೆವಿಯೊಂದಿಗೆ ೧೮೦೪ರಲ್ಲಿ ಮತ್ತು ಅದರ ವಿಸ್ತರಣೆಯಾಗಿ ೧೮೯೬ರಲ್ಲಿ ಉತ್ತಮ ಬಟ್ಟೆಯ ವಸೂಲಿಯೊಂದಿಗೆ ಪ್ರಾರಂಭವಾಗಿರಬಹುದೆಂದು ತಿಳಿದುಬರುತ್ತದೆ. ೧೯೧೭ರಲ್ಲಿ ಮೋಟಾರು ಮದ್ಯಸಾರ (ಸ್ಪಿರಿಟ್)ದ ಮೇಲೆ, ೧೯೨೨ರಲ್ಲಿ ಸೀಮೆಎಣ್ಣೆಯ ಮೇಲೆ ಮತ್ತು ೧೯೩೦ರಲ್ಲಿ ಬೆಳ್ಳಿಯ ಮೇಲೆ ಅಬಕಾರಿ ತೆರಿಗೆಯನ್ನು ವಿಧಿಸಲಾಯಿತು. ೧೯೩೪ರಲ್ಲಿ ಕಂದಾಯಕ್ರಮದಂತೆ ಅಬಕಾರಿ ತೆರಿಗೆಯಲ್ಲಿ ಕ್ರಮಬದ್ಧತೆಯನ್ನು ತರಲಾಯಿತು ಮತ್ತು ಸಕ್ಕರೆ, ಬೆಂಕಿಪೊಟ್ಟಣ, ಸ್ಟೀಲ್ ಪದಾರ್ಥಗಳು ಮುಂತಾದ ಇತರ ಪದಾರ್ಥಗಳಿಗೂ ಅಬಕಾರಿ ತೆರಿಗೆಯನ್ನು ವಿಸ್ತರಿಸಲಾಯಿತು.

ಈಗ ಕೇಂದ್ರ ಅಬಕಾರಿ ತೆರಿಗೆಯನ್ನು ಸುಮಾರು ೧೩೬ ಪದಾರ್ಥಗಳಿಗೆ ವಿಸ್ತರಿಸಿದ್ದು, ಕೇಂದ್ರ ಅಬಕಾರಿಯ ಆದಾಯವು ಸುಮಾರು ಮೂರನೆಯ ಎರಡು ಭಾಗದಷ್ಟಿದೆ. ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು, ಸಿಗರೇಟುಗಳು, ಕಬ್ಬಿಣ ಉಕ್ಕು ಮತ್ತು ಸಕ್ಕರೆಯು ಅಬಕಾರಿ ತೆರಿಗೆ ವಿಧಿಸಲ್ಪಡುವ ಇಲಾಖೆಗೆ ಸಿಂಹಪಾಲಿನ ತೆರಿಗೆ ವರಮಾನವನ್ನು ತರುವ ಪದಾರ್ಥಗಳಾಗಿವೆ. ಅಬಕಾರಿ ಇಲಾಖೆಯು ಶಾಸನಾತ್ಮಕ ಅಧಿಕಾರ ಹೊಂದಿರುವ ಕಾರಣದಿಂದಾಗಿ ಮುಂದಿನ ಅಧಿನಿಯಮಗಳ ಅನ್ವಯ ಆಡಳಿತ ನಡೆಸುತ್ತದೆ.

## ೧೯೪೪ರ ಕೇಂದ್ರ ಅಬಕಾರಿ ಮತ್ತು ಉಪ್ಪು ಅಧಿನಿಯಮ

ಕೇಂದ್ರ ಅಬಕಾರಿ ಅಧಿನಿಯಮದ ಪ್ರಕರಣ ಮೂರರನ್ವಯ ಕೇಂದ್ರ ಸರ್ಕಾರಕ್ಕೆ ಅನುಕ್ರಮವಾಗಿ ಸೀಮಾ ಸುಂಕಗಳು (ಕಸ್ಟಮ್ಸ್) ಮತ್ತು ಅಬಕಾರಿ ತೆರಿಗೆಗಳನ್ನು ವಿಧಿಸುವ ಮತ್ತು ವಸೂಲು ಮಾಡುವ ಅಧಿಕಾರವನ್ನು ನೀಡಿರುತ್ತದೆ. ೧೯೮೫ರಲ್ಲಿ ಅಧಿನಿಯಮಗೊಂಡ ಕೇಂದ್ರ ಅಬಕಾರಿ ಆಮದು ರಫ್ತು ಸುಂಕ ಅಧಿನಿಯಮವು ಕೇಂದ್ರ ಅಬಕಾರಿ ತೆರಿಗೆಗೆ ವಿಧಿಸಬಹುದಾದ ದರಗಳ ಜೊತೆಗೆ ವಿವಿಧ ಪದಾರ್ಥಗಳನ್ನು ನಿಗದಿಪಡಿಸಿರುತ್ತದೆ.

ಸಕ್ಕರೆ, ಕಾಕಂಬಿ, ಜೈವಿಕ ರಾಸಾಯನಿಕಗಳು, ಸಗಟು ಔಷಧಗಳು, ಆಯುರ್ವೇದದ ಔಷಧಗಳು, ದೂರದರ್ಶನ ವಿದ್ಯುತ್ ತಂತಿಗಳು ಮತ್ತು ಕೇಬಲುಗಳು (ವಿದ್ಯುತ್ ಪ್ರವಾಹಕಗಳು) ಪ್ಲಾಸ್ಟಿಕ್‌ಗಳು, ಬೆಂಕಿಪೊಟ್ಟಣಗಳು, ಕಬ್ಬಿಣ ಮತ್ತು ಉಕ್ಕಿನ ಪದಾರ್ಥಗಳು, ಸಿಮೆಂಟು ಪದಾರ್ಥಗಳು, ಇಂಗಾಲಾಮ್ಲ ಮಿಶ್ರಿತ (ಎರೇಟೆಡ್)ನೀರು ಇಂಗಾಲಾಮ್ಲ, ಇಥೈಲ್ ಮದ್ಯಸಾರ, ಮುದ್ರಿತ ಸರ್ಕ್ಯೂಟ್ ಬೋರ್ಡ್, ಆಮ್ಲ (ಆ್ಯಸಿಡ್) ತೈಲ ಇತ್ಯಾದಿ–ಇವು ಕೇಂದ್ರ ಅಬಕಾರಿ ತೆರಿಗೆಯನ್ನು ವಿಧಿಸಲಾಗುವ ಪದಾರ್ಥಗಳು, ಇವುಗಳಲ್ಲಿ ಸಕ್ಕರೆ, ಕಾಕಂಬಿ, ಜೈವಿಕ ರಾಸಾಯನಿಕಗಳು, ದೂರದರ್ಶನ ಮತ್ತು ಆಯುರ್ವೇದದ ಔಷಧಗಳು ಇಲಾಖೆಗೆ ಸಿಂಹಪಾಲಿನ ತೆರಿಗೆಯ ವರಮಾನವನ್ನು ನೀಡುತ್ತದೆ.

## ಆದಾಯ ತೆರಿಗೆ

ಆದಾಯ ತೆರಿಗೆಯು ಪ್ರಮುಖ ನೇರ ತೆರಿಗೆಯಾಗಿದೆ ಮತ್ತು ಸರ್ಕಾರದ ಕಂದಾಯದ ಪ್ರಮುಖ ಮೂಲವಾಗಿದೆ. ಕರವಿಧಿಸುವಿಕೆಯು ಬಹಳ ಹಿಂದಿನಿಂದಲೂ ನಮ್ಮಲ್ಲಿದ್ದಿತು. ಆದರೆ ಅದು ಬಹಳ ಒರಟಾಗಿತ್ತು. ಬ್ರಿಟಿಷ್ ರಾಜ್ಯದಲ್ಲಿ ೧೮೫೭ರ ಸಿಪಾಯಿ ದಂಗೆಯಲ್ಲುಂಟಾದ ನಷ್ಟವನ್ನು ಸರಿಗಟ್ಟುವುದಕ್ಕಾಗಿ ೧೮೬೦ನೆಯ ಸಾಲಿನಲ್ಲಿ ಸರ್ ಜೇಮ್ಸ್ ವಿಲ್ಸನ್ ಮೊದಲ ಬಾರಿಗೆ ಆದಾಯ ತೆರಿಗೆಯನ್ನು ವಿಧಿಸಿದನು ಮತ್ತು ೧೮೮೬ನೆಯ ವರ್ಷದಲ್ಲಿ ಈ ಬಗ್ಗೆ ಮೊದಲ ಬಾರಿಗೆ ಕಾನೂನನ್ನು ತರಲಾಯಿತು. ಇದು ೧೯೨೨ರಲ್ಲಿ ಆದಾಯ ತೆರಿಗೆ ಅಧಿನಿಯಮದಿಂದ ನಿರಸನಗೊಂಡಿತು. ೧೯೫೭ನೆಯ ಸಾಲಿನಲ್ಲಿ ಭಾರತ ಸರ್ಕಾರವು ಈ ವಿಷಯವನ್ನು ಕಾನೂನು ಆಯೋಗಕ್ಕೆ ಒಪ್ಪಿಸಿತು, ಅದರ ಪರಿಣಾಮವಾಗಿ ೧೯೬೧ರ ಆದಾಯ ತೆರಿಗೆ ಅಧಿನಿಯಮವು ಜಾರಿಗೆ ಬಂದಿತು.

ಹಣಕಾಸು ಮಸೂದೆಯೂ ಒಳಗೊಂಡಂತೆ ಪ್ರತಿವರ್ಷ ಹಣಕಾಸು ಅಧಿನಿಯಮದಲ್ಲಿ ಹಲವಾರು ಬದಲಾವಣೆಗಳು, ತಿದ್ದುಪಡಿಗಳನ್ನು ಮಾಡಲಾಯಿತು. ಎರಡೂ ಸದನಗಳಿಂದ ಅದು ಅನುಮೋದನೆಗೊಂಡು ಮತ್ತು ರಾಷ್ಟ್ರಪತಿಯವರ ಅಂಕಿತ ಪಡೆದ ನಂತರ ಅದು ಅಧಿನಿಯಮವಾಗುವುದು. ಇದರ ಜೊತೆಗೆ ೧೯೮೪ರ ತೆರಿಗೆ ನಿರ್ಧರಣಾ ಕಾನೂನು ತಿದ್ದುಪಡಿ ಅಧಿನಿಯಮ, ೧೯೮೭ರ ನೇರ ತೆರಿಗೆಗಳ ತಿದ್ದಪಡಿ ಅಧಿನಿಯಮ, ೧೯೮೮ ಹಾಗೂ ೧೯೮೯ರ ನೇರ ತೆರಿಗೆಗಳ ಕಾನೂನು (ತಿದ್ದುಪಡಿ) ಅಧಿನಿಯಮ, ೧೯೮೯ರ ನೇರ ತೆರಿಗೆಗಳ ಕಾನೂನು (ತಿದ್ದುಪಡಿ) ಅಧಿನಿಯಮ ಮತ್ತು ೧೯೮೧ರ ಕರನಿರ್ಧರಣಾ ಕಾನೂನು (ತಿದ್ದುಪಡಿ) ಅಧಿನಿಯಮಗಳಲ್ಲಿ ಹಲವಾರು ತಿದ್ದುಪಡಿಗಳನ್ನು ಮಾಡಲಾಯಿತು.

## ಆಡಳಿತ ಮತ್ತು ಅಧಿಕಾರ ವ್ಯಾಪ್ತಿ

ಉಡುಪಿ ವಲಯವು ಉಡುಪಿ, ಕುಂದಾಪುರ, ಜೊಯಿಡಾ, ಕಾರವಾರ, ಹೊನ್ನಾವರ, ಅಂಕೋಲಾ, ಕುಮಟ ತಾಲೂಕುಗಳನ್ನು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹೊಂದಿದ್ದು, ಆದಾಯ ತೆರಿಗೆಯ ಹೆಚ್ಚುವರಿ ಆಯುಕ್ತರು ಇದರ ಮುಖ್ಯಸ್ಥರಾಗಿರುತ್ತಾರೆ. ಅವರ ಅಧೀನದಲ್ಲಿ ಕರ ನಿರ್ಧರಣಾ ಅಧಿಕಾರಿಗಳಾದ ಆದಾಯ ತೆರಿಗೆಯ ಸಹಾಯಕ ಆಯುಕ್ತರು, ಆದಾಯ ತೆರಿಗೆ ಆಧಿಕಾರಿಗಳು ಮತ್ತು ತೆರಿಗೆ ವಸೂಲಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ಸಹಾಯಕ ಆಯುಕ್ತರ ವ್ಯಾಪ್ತಿಯಡಿ ಐದು ಲಕ್ಷಗಳ ಆದಾಯವುಳ್ಳ / ಐದು ಲಕ್ಷಕ್ಕೆ ಮೀರಿದಂತ ನಷ್ಟದ ಎಲ್ಲಾ ಪ್ರಕರಣಗಳು ಬರುತ್ತವೆ. ಆದಾಯ ತೆರಿಗೆ ಅಧಿಕಾರಿ ವಿಭಾಗ –I ರ ಅಧಿಕಾರ ವ್ಯಾಪ್ತಿಗೆ ಐದು ಲಕ್ಷಗಳಿಗಿಂತ ಕಡಿಮೆ ಆದಾಯವುಳ್ಳ/ನಷ್ಟವುಳ್ಳ ಎಲ್ಲಾ ವ್ಯವಹಾರ/ಕಂಪನಿ ಪ್ರಕರಣಗಳು ಮತ್ತು ಖಾಸಗಿ ಸಂಸ್ಥೆಗಳ ಉದ್ಯೋಗಿಗಳಿಗೆ ಸಂಬಂಧಿಸಿದ ವೇತನ ಪ್ರಕರಣಗಳು ಬರುತ್ತವೆ.

ಆದಾಯ ತೆರಿಗೆ ಅಧಿಕಾರಿ ವಿಭಾಗ–೨ರ ಅಧಿಕಾರ ವ್ಯಾಪ್ತಿಗೆ ಐದು ಲಕ್ಷಗಳಿಗಿಂತ ಕಡಿಮೆಯ ಆದಾಯ/ನಷ್ಟವುಳ್ಳ ಕುಂದಾಪುರ ತಾಲೂಕಿನ ಎಲ್ಲಾ ವ್ಯವಹಾರ ಪ್ರಕರಣಗಳು ಮತ್ತು ಸರ್ಕಾರ ಮತ್ತು ಅರೆ–ಸರ್ಕಾರಿ ಉದ್ಯೋಗಿಗಳಿಗೆ ಸಂಬಂಧಪಟ್ಟ ವೇತನ ಪ್ರಕರಣಗಳು ಬರುತ್ತವೆ.

## ಕಂದಾಯ ಸಂಗ್ರಹ

ವಲಯದ ಒಟ್ಟು ಕಂದಾಯ ಸಂಗ್ರಹವು ಇಲಾಖೆಯು ಅನುಸರಿಸಿದ ಕರನಿರ್ಧರಣಾ ಮಿತ್ರತ್ವದ ಮಾರ್ಗದಿಂದಾಗಿ ೧೯೯೦ರ ಪೂರ್ವದಲ್ಲಿ ಕೇವಲ ಎಂಟು ಕೋಟಿ ಇದ್ದದ್ದು ಕಳೆದ ವರ್ಷದಲ್ಲಿ ೩೨೦ ಕೋಟಿಗಳ ಮಟ್ಟವನ್ನು ಮುಟ್ಟಿರುತ್ತದೆ.

### ಕೋಷ್ಟಕ. ೯.೪: ಕಂದಾಯ ಆಡಳಿತ ಘಟಕಗಳ ವಿವರ

| ತಾಲೂಕು | ಹೋಬಳಿಗಳ ಸಂಖ್ಯೆ | ಗ್ರಾಮಗಳ ಸಂಖ್ಯೆ | ಕಂದಾಯ ವೃತ್ತಗಳು | ಹಿಡುವಳಿದಾರರ ಸಂಖ್ಯೆ |
|---|---|---|---|---|
| **ಉಡುಪಿ** | ೨ | ೫೫ | ೪೦ | ೯೭೧೪೨ |
| ಬ್ರಹ್ಮಾವರ (ವಿಶೇಷ ತಹಶೀಲ್ದಾರ್) | ೨ | ೬೦ | ೩೩ | ೭೦೨೬೧ |
| **ಕುಂದಾಪುರ** | ೨ | ೭೫ | ೫೫ | ೭೮೪೭೦ |
| ಬೈಂದೂರು (ವಿಶೇಷ ತಹಶೀಲ್ದಾರ್) | ೧ | ೨೬ | ೧೮ | ೩೧೫೯೯ |
| **ಕಾರ್ಕಳ** | ೨ | ೫೧ | ೩೮ | ೩೬೪೬೭ |
| **ಒಟ್ಟು** | ೯ | ೨೬೭ | ೧೮೪ | ೩೧೩೯೩೯ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

### ಕೋಷ್ಟಕ. ೯.೫ : ಕಂದಾಯ ಸಿಬ್ಬಂದಿ ವರ್ಗದವರ ವಿವರ

| ತಾಲೂಕು | ತಹಶೀಲ್ದಾರ್ | ಉಪ ತಹಶೀಲ್ದಾರ್ | ಅಧೀಕ್ಷಕ | ಪ್ರ.ದ.ಸ | ದ್ವಿ.ದ.ಸ | ಕಂದಾಯ ನಿರೀಕ್ಷಕ | ಗ್ರಾಮ ಲೆಕ್ಕಿಗ | ಗ್ರೂಪ್ ಡಿ | ಒಟ್ಟು |
|---|---|---|---|---|---|---|---|---|---|
| ಜಿಲ್ಲಾಧಿಕಾರಿ | ೧ | ೦ | ೬ | ೧೩ | ೨೧ | ೦ | ೦ | ೮ | ೪೯ |
| ಉಪ ವಿಭಾಗಾಧಿಕಾರಿ **ಕುಂದಾಪುರ** | ೧ | ೦ | ೧ | ೫ | ೩ | ೦ | ೦ | ೪ | ೧೪ |
| **ಉಡುಪಿ** | ೧ | ೫ | ೦ | ೫ | ೧೨ | ೨ | ೪೧ | ೮ | ೭೪ |
| **ಬ್ರಹ್ಮಾವರ** (ವಿಶೇಷ ತಹಶೀಲ್ದಾರ್) | ೧ | ೨ | ೦ | ೨ | ೭ | ೨ | ೩೫ | ೪ | ೫೩ |
| **ಕುಂದಾಪುರ** | ೧ | ೬ | ೦ | ೯ | ೨೯ | ೩ | ೫೪ | ೨೧ | ೧೨೩ |
| ಬೈಂದೂರು (ವಿಶೇಷ ತಹಶೀಲ್ದಾರ್) | ೦ | ೦ | ೦ | ೦ | ೦ | ೦ | ೦ | ೦ | ೦ |
| **ಕಾರ್ಕಳ** | ೧ | ೫ | ೦ | ೫ | ೮ | ೨ | ೪೦ | ೭ | ೬೮ |
| **ಒಟ್ಟು** | ೫ | ೧೮ | ೧ | ೨೬ | ೩೯ | ೯ | ೧೭೦ | ೪೪ | ೩೩೨ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯. ೬ : ಭೂ ವರ್ಗೀಕರಣ ವಿವರ (ಎಕರೆಗಳಲ್ಲಿ)

| ತಾಲೂಕು | ಒಣ | ನೀರಾವರಿ | ತೋಟ | ಅಡಿಕೆ ತೋಟ | ಇತರೆ | ಒಟ್ಟು |
|---|---|---|---|---|---|---|
| **ಉಡುಪಿ** | ೩೯೮೭೭.೮೬ | ೩೫೭೧೬.೬೮ | ೭೧೨೧.೪೨ | ೦.೦೦ | ೦ | ೮೨೭೧೫.೯೬ |
| ಬ್ರಹ್ಮಾವರ (ವಿಶೇಷ ತಹಶೀಲ್ದಾರ್) | ೩೪೭೬೫.೯೯ | ೩೯೩೫೧.೪೪ | ೬೧೫೦.೯೪ | ೩೪೪.೩೨ | ೦ | ೮೦೬೧೨.೬೯ |
| **ಕುಂದಾಪುರ** | ೪೩೪೩೯.೭೩ | ೪೫೬೯೯.೧೧ | ೫೭೭೭.೯೦ | ೫೬೫.೯೮ | ೫೨೧೧.೯೨ | ೧೦೦೬೯೪.೬೪ |
| ಬೈಂದೂರು (ವಿಶೇಷ ತಹಶೀಲ್ದಾರ್) | ೧೯೦೫೨.೩೫ | ೧೮೬೦೩.೫೪ | ೨೯೩೦.೧೭ | ೩೨೫.೦೨ | ೦ | ೪೦೯೧೧.೦೮ |
| **ಕಾರ್ಕಳ** | ೪೪೦೯೬.೦೦ | ೧೯೩೬೧.೦೦ | ೧೯೩೧.೦೦ | ೩೬೬.೦೦ | ೪೧೮೩೨.೦೦ | ೧೦೭೫೮೬.೦೦ |
| **ಒಟ್ಟು** | ೧೮೧೨೩೧.೯೩ | ೧೫೮೭೩೧.೭೭ | ೨೩೯೧೧.೪೩ | ೧೬೦೧.೩೨ | ೪೭೦೪೩.೯೨ | ೪೧೨೫೨೦.೩೭ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೭: ೧೯೬೪ರ ಪರಿಷ್ಕೃತ ಭೂ ಕಂದಾಯ ಆಕರಣೆಯಂತೆ ನಿರ್ಧರಿಸಿದ ನಿಗದಿತ ಭೂಕಂದಾಯ ದರ

| ತಾಲೂಕು | ಗ್ರಾಮಗಳ ಸಂಖ್ಯೆ | ನಿಗದಿತ ಭೂ ಕಂದಾಯ ದರ | | | |
|---|---|---|---|---|---|
| | | ಒಣ | ನೀರಾವರಿ | ತೋಟ | ಅಡಿಕೆ ತೋಟ |
| **ಉಡುಪಿ** | ೫೫ | ೧.೬೦ | ೯.೪೪ | ೧೮.೯೨ | ೫೧.೬ |
| ಬ್ರಹ್ಮಾವರ (ವಿಶೇಷ ತಹಶೀಲ್ದಾರ್) | ೬೦ | ೧.೬೦ | ೯.೪೪ | ೧೮.೯೨ | ೫೧.೬ |
| **ಕುಂದಾಪುರ** | ೭೫ | ೧.೬೦ | ೯.೪೪ | ೧೮.೯೨ | ೫೧.೬ |
| ಬೈಂದೂರು (ವಿಶೇಷ ತಹಶೀಲ್ದಾರ್) | ೨೬ | ೧.೬೦ | ೮.೬೨ | ೧೩.೩೫ | ೫೧.೬ |
| **ಕಾರ್ಕಳ** | ೫೧ | ೧.೬೦ | ೯.೪೪ | ೧೮.೯೨ | ೫೧.೬ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೮ : ಭೂ ಕಂದಾಯ ಸಂಗ್ರಹಣೆ ೧೯೯೭–೨೦೦೫ ( ರೂ.ಗಳಲ್ಲಿ)

| ವರ್ಷ | ಕಂದಾಯ ಆಕರ ದರ | ವಸೂಲಿ | ಬಾಕಿ |
|---|---|---|---|
| ೧೯೯೭–೧೯೯೮ | ೨೧೪೧೭೮೫.೧೧ | ೯೨೭೭೩೯.೧೧ | ೧೨೧೪೦೪೬ |
| ೧೯೯೮–೧೯೯೯ | ೧೮೭೧೩೨೬.೧೨ | ೮೭೧೯೪೮.೬೩ | ೯೯೯೩೭೭.೪೯ |
| ೧೯೯೯–೨೦೦೦ | ೧೮೫೩೯೭೩.೦೪ | ೮೪೯೫೫೫.೭೪ | ೧೦೦೪೪೧೭.೩ |
| ೨೦೦೦–೨೦೦೧ | ೨೨೬೧೬೯೪.೨೪ | ೧೨೩೭೦೫೦.೩೩ | ೧೦೨೪೬೪೩.೯೧ |
| ೨೦೦೧–೨೦೦೨ | ೨೩೯೪೪೯೨.೮೯ | ೧೨೭೭೩೨೩.೯೬ | ೧೧೧೭೧೬೮.೯೩ |
| ೨೦೦೨–೨೦೦೩ | ೨೫೩೫೦೦೨.೦೩ | ೧೨೮೫೮೪೬.೯೪ | ೧೨೪೯೧೫೫.೦೯ |
| ೨೦೦೩–೨೦೦೪ | ೩೦೯೭೬೭೮.೬೯ | ೧೨೭೪೩೧೩.೯೨ | ೧೮೨೩೩೬೪.೭೭ |
| ೨೦೦೪–೨೦೦೫ | ೨೫೭೬೮೭೬.೬೮ | ೭೫೧೭೭೭.೨೨ | ೧೮೨೫೦೯೯.೪೬ |
| ೨೦೦೫–೨೦೦೬ | ೨೪೭೩೧೫೪.೮೫ | ೬೭೧೨೭೧.೮೩ | ೧೮೦೧೮೮೩.೦೨ |
| ಒಟ್ಟು | ೨೧೨೦೫೯೮೩.೬೫ | ೯೧೪೬೮೨೭.೬೮ | ೧೨೦೫೯೧೫೫.೯೭ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

### ಕೋಷ್ಟಕ. ೯.೯ : ತಾಲೂಕುವಾರು ಭೂ ಕಂದಾಯ ಸಂಗ್ರಹ ವಿವರ ೨೦೦೫-೨೦೦೬ (ರೂ.ಗಳಲ್ಲಿ)

| ತಾಲೂಕುಗಳು | ಬೇಡಿಕೆ | ವಸೂಲಿ | ಬಾಕಿ |
|---|---|---|---|
| ಉಡುಪಿ | ೯೧೪೬೮೨೭.೬೮ | ೯೧೪೬೮೨೭.೬೮ | ೦ |
| ಬ್ರಹ್ಮಾವರ | ೧೭೪೯೭೩೨.೨೮ | ೧೭೪೯೭೩೨.೨೮ | ೦ |
| ಕುಂದಾಪುರ | ೪೯೧೩೯೫೧.೯೨ | ೪೯೧೩೯೫೧.೯೨ | ೦ |
| ಬೈಂದೂರು | ೬೦೭೯೯೨.೩ | ೬೦೭೯೯೨.೩ | ೦ |
| ಕಾರ್ಕಳ | ೪೯೫೨೦೧೬.೫೬ | ೪೯೫೨೦೧೬.೫೬ | ೦ |
| ಒಟ್ಟು | ೨೧೩೭೦೫೨೦.೭೪ | ೨೧೩೭೦೫೨೦.೭೪ | ೦ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

### ಕೋಷ್ಟಕ. ೯.೧೦ : ಉಡುಪಿ ಜಿಲ್ಲೆಯಲ್ಲಿ ಸಂಗ್ರಹಿಸಲ್ಪಟ್ಟ ಭೂ ಕಂದಾಯ, ನೀರಿನ ಕರ ಹಾಗೂ ಇತರೆ ಕಂದಾಯಗಳ ವಿವರ (೧೯೯೭-೨೦೦೫)

| ಬಾಕಿ ವಿವರ | ಬೇಡಿಕೆ | ವಸೂಲಿ | ಬಾಕಿ |
|---|---|---|---|
| | ಲಕ್ಷ ರೂ.ಗಳಲ್ಲಿ | ಲಕ್ಷ ರೂ.ಗಳಲ್ಲಿ | ಲಕ್ಷ ರೂ.ಗಳಲ್ಲಿ |
| ಭೂ ಕಂದಾಯ | ೯೮೫೫೬೪೯.೫೮ | ೯೮೫೫೬೪೯.೫೮ | ೦ |
| ನೀರು ಶುಲ್ಕ | ೨೦೨೪೩೧.೮೨ | ೨೦೨೪೩೧.೮೨ | ೦ |
| ಆರೋಗ್ಯ ಶುಲ್ಕ | ೧೨೬೨೨೦೧.೩ | ೧೨೬೨೨೦೧.೩ | ೦ |
| ಶಿಕ್ಷಣ ಶುಲ್ಕ | ೮೩೬೭೧೬.೮೮ | ೮೩೬೭೧೬.೮೮ | ೦ |
| ಸಾಲಗಳು | ೩೭೫೫೮೮೪೬ | ೧೭೪೨೭೧೫೪ | ೨೦೧೩೧೬೯೨ |
| ಇತರೆ ಸರ್ಕಾರಿ ಬಾಕಿಗಳು | ೨೭೭೦೫೧೨೨೯ | ೧೪೫೯೨೯೪೫೭ | ೧೩೧೧೨೧೭೭೨ |
| ಒಟ್ಟು | ೩೨೬೭೬೭೦೭೪.೬ | ೧೭೫೫೧೩೬೧೦.೬ | ೧೫೧೨೫೩೪೬೪ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

### ಕೋಷ್ಟಕ. ೯.೧೧ :
### ೨೦೦೬ರವರೆಗಿನ ಭೂ ನ್ಯಾಯ ಮಂಡಳಿಯ ಸಾಧನೆಗಳು (ನಮೂನೆ ೭)

| ವಿವರ | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಒಟ್ಟು |
|---|---|---|---|---|---|---|
| ಗೇಣಿದಾರರ ಪರವಾಗಿ ವಿಲೇಯಾದ ಪ್ರಕರಣಗಳ ಸಂಖ್ಯೆ | | | | | | |
| ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ | ೦ | ೦ | ೦ | ೦ | ೫೦೯ | ೫೦೯ |
| ಇತರರು | ೩೦೨೮೨ | ೦ | ೧೭೫೪೭ | ೮೦೯೨ | ೧೦೦೨೦ | ೬೫೯೪೧ |
| ಭೂಮಾಲೀಕರು | ೦ | ೦ | ೦ | ೦ | ಸಾ೪೮೦೦ | ೪೮೦೦ |
| ತಿರಸ್ಕೃತ | ೯೦೧೨ | ೦ | ೫೩೮೫ | ೧೨೫೨ | ೫೦೪೬ | ೨೦೬೯೫ |
| ಒಟ್ಟು | ೩೯೨೯೪ | ೦ | ೨೨೯೩೨ | ೯೩೪೪ | ೨೦೩೭೫ | ೯೧೯೪೫ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

**ಕೋಷ್ಟಕ. ೯.೧೨ : ೨೦೦೬ರವರೆಗಿನ ಭೂ ನ್ಯಾಯ ಮಂಡಳಿಯ ಸಾಧನೆಗಳ (ನಮೂನೆ ೭ಎ) ವಿವರ**

| ವಿವರ | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಒಟ್ಟು |
|---|---|---|---|---|---|---|
| ಗೇಣಿದಾರರ ಪರವಾಗಿ ವಿಲೇಯಾದ ಪ್ರಕರಣಗಳ ಸಂಖ್ಯೆ | | | | | | |
| ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ | ೬ | ೦ | ೦ | ೧ | ೧೩ | ೨೦ |
| ಇತರರು | ೨೬೪ | ೦ | ೭೯ | ೨೨ | ೧೦೨ | ೪೬೭ |
| ಭೂಮಾಲೀಕರು | ೦ | ೦ | ೦ | ೦ | ೦ | ೦ |
| ತಿರಸ್ಕೃತ | ೪೩೬ | ೦ | ೨೬೯ | ೮೨ | ೫೯೭ | ೧೩೮೪ |
| ಒಟ್ಟು | ೭೦೬ | ೦ | ೩೪೮ | ೧೦೫ | ೭೧೨ | ೧೮೭೧ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

**ಕೋಷ್ಟಕ. ೯.೧೩ : ಸೆಕ್ಷನ್ ೯೪ ಸಿ ಪ್ರಕಾರ ೨೦೦೬ರವರೆಗಿನ ಸಾಧನೆಗಳ ವಿವರ**

| ವಿವರ | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಒಟ್ಟು |
|---|---|---|---|---|---|---|
| ಗೇಣಿದಾರರ ಪರವಾಗಿ ವಿಲೇಯಾದ ಪ್ರಕರಣಗಳ ಸಂಖ್ಯೆ | | | | | | |
| ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ | ೫೫೦ | ೨೧೨ | ೯೪ | ೩೧ | ೧೮೫ | ೧೦೭೨ |
| ಇತರರು | ೧೫೦೮ | ೧೩೪೨ | ೩೫೩ | ೨೫೧ | ೯೦೭ | ೪೩೬೧ |
| ತಿರಸ್ಕೃತ | ೧೨೯೮ | ೩೯೧ | ೬೭೧ | ೩೩೯ | ೧೬೮೮ | ೪೩೮೭ |
| ಒಟ್ಟು | ೩೩೫೬ | ೧೯೪೫ | ೧೧೧೮ | ೬೨೧ | ೨೭೮೦ | ೯೮೨೦ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

**ಕೋಷ್ಟಕ. ೯.೧೪ : ನಮೂನೆ ೫೦ರ ಪ್ರಕಾರ ೨೦೦೬ರವರೆಗಿನ ಸಾಧನೆಗಳ ವಿವರ**

| ವಿವರ | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಒಟ್ಟು |
|---|---|---|---|---|---|---|
| ಗೇಣಿದಾರರ ಪರವಾಗಿ ವಿಲೇಯಾದ ಪ್ರಕರಣಗಳ ಸಂಖ್ಯೆ | | | | | | |
| ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ | ೧೮೧ | ೩೨೮ | ೩೬೨ | ೩೫೪ | ೬೩೫ | ೧೮೬೦ |
| ಇತರರು | ೬೨೩ | ೧೬೩೬ | ೫೩೬೬ | ೧೭೮೭ | ೨೪೩೭ | ೧೧೮೪೯ |
| ತಿರಸ್ಕೃತ | ೩೯೫೧ | ೫೪೫೯ | ೧೨೧೯೧ | ೬೬೩೦ | ೭೮೭೮ | ೩೬೧೦೯ |
| ಒಟ್ಟು | ೪೭೫೫ | ೭೪೨೩ | ೧೭೯೧೯ | ೮೭೭೧ | ೧೦೯೫೦ | ೪೯೮೧೮ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

**ಕೋಷ್ಟಕ. ೯.೧೫ : ೨೦೦೬ರವರೆಗೆ ಫಾರಂ–೫೩ರ ಅಡಿಯಲ್ಲಿ ಸಾಧಿಸಿದ ಗುರಿಗಳ ವಿವರಗಳು**

| ವಿವರ | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಒಟ್ಟು |
|---|---|---|---|---|---|---|
| ಗೇಣಿದಾರರ ಪರವಾಗಿ ವಿಲೇಯಾದ ಪ್ರಕರಣಗಳ ಸಂಖ್ಯೆ | | | | | | |
| ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ | ೮೩ | ೩೧೮ | ೩೨ | ೧೫೪ | ೪೩೨ | ೧೦೧೯ |
| ಇತರರು | ೬೮೪ | ೧೨೬೦ | ೭೩೯ | ೧೦೯೨ | ೩೩೧೫ | ೭೦೯೦ |
| ತಿರಸ್ಕೃತ | ೧೩೦೫ | ೧೧೦೭ | ೧೨೯೦ | ೭೯೪೦ | ೧೦೫೮ | ೧೨೭೦೦ |
| ಒಟ್ಟು | ೨೦೭೨ | ೨೬೮೫ | ೨೦೬೧ | ೯೧೮೬ | ೪೮೦೫ | ೨೦೮೧೯ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೧೬ : “ಭೂಮಿ” (ಆರ್ ಟಿ ಸಿ) ವಿವರಗಳು (೨೦೦೬ ರವರೆಗೆ)

| ತಾಲೂಕು | ಗಣಕೀಕರಣಗೊಂಡ ಒಟ್ಟು ಆರ್‌ಟಿಸಿಗಳ ಸಂಖ್ಯೆ | ಒಟ್ಟು ಆರ್ ಟಿಸಿಗಳ ಸಂಖ್ಯೆ | ಸಂಗ್ರಹವಾದ ಶುಲ್ಕ |
|---|---|---|---|
| ಉಡುಪಿ | ೨೩೩೨೧೯ | ೩೭೬೫೫೪ | ೫೬೪೮೩೧೦ |
| ಬ್ರಹ್ಮಾವರ | ೨೦೨೦೦೭ | ೧೨೭೮೪೮ | ೧೯೧೭೭೨೦ |
| ಕುಂದಾಪುರ | ೨೨೪೨೮೭ | ೪೧೧೩೯೧ | ೬೧೭೦೮೬೫ |
| ಬೈಂದೂರು | ೮೭೩೭೭ | ೭೪೪೪೮ | ೧೧೧೬೭೨೦ |
| ಕಾರ್ಕಳ | ೧೫೮೩೬೭ | ೨೨೭೨೧೨ | ೩೪೦೮೧೮೦ |
| ಒಟ್ಟು | ೯೦೫೨೫೭ | ೧೨೧೭೪೫೩ | ೧೮೨೬೧೭೯೫ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೧೭ : "ಭೂಮಿ” ವಿವರಗಳು (ಹಕ್ಕು ಬದಲಾವಣೆ ಖಾತಾ) (೨೦೦೬ ರವರೆಗೆ)

| ತಾಲೂಕು | ಹಕ್ಕು ಬದಲಾವಣೆ ಖಾತಾಗಳ ಸಂಖ್ಯೆ | | ಹಕ್ಕು ಬದಲಾವಣೆ ಖಾತಾಗಳ ಸಂಖ್ಯೆ | ಸಂಗ್ರಹಿಸಿದ ಶುಲ್ಕ |
|---|---|---|---|---|
| | ಕಾವೇರಿಯಿಂದ (ನಮೂನೆ) | ಸಾರ್ವಜನಿಕರಿಂದ ಅರ್ಜಿ | | |
| ಉಡುಪಿ | ೨೨೫೬ | ೪೮೪೨೫ | ೫೦೬೮೧ | ೮೦೧೯೪೧ |
| ಬ್ರಹ್ಮಾವರ | ೫೨೪ | ೫೫೬೭ | ೬೦೯೧ | ೨೨೪೨೦೨ |
| ಕುಂದಾಪುರ | ೧೧೪೬೨ | ೯೧೩೫ | ೨೦೫೯೭ | ೧೦೯೧೫೭೩ |
| ಬೈಂದೂರು | ೪೦೯ | ೨೧೫೧ | ೨೫೬೦ | ೨೮೪೯೨೦ |
| ಕಾರ್ಕಳ | ೧೨೪೧ | ೩೧೨೦೧ | ೩೨೪೪೨ | ೭೬೮೮೭೫ |
| ಒಟ್ಟು | ೧೫೮೯೨ | ೯೬೪೭೯ | ೧೧೨೩೭೧ | ೩೧೭೧೫೧೧ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೧೮ : ಉಡುಪಿ ಜಿಲ್ಲೆಯ ಮೋಟಾರು ವಾಹನ ತೆರಿಗೆ ಸಂಗ್ರಹ ವಿವರ (ಲಕ್ಷ ರೂ.ಗಳಲ್ಲಿ)

| ತಾಲೂಕು | ೨೦೦೧-೨೦೦೨ | ೨೦೦೨-೨೦೦೩ | ೨೦೦೩-೨೦೦೪ | ೨೦೦೪-೨೦೦೫ | ೨೦೦೫-೨೦೦೬ |
|---|---|---|---|---|---|
| ಉಡುಪಿ | ೧೬೭೨ | ೧೮೭೬ | ೨೦೩೬ | ೨೨೪೯ | ೨೩೬೪ |
| ಒಟ್ಟು | ೧೬೭೨ | ೧೮೭೬ | ೨೦೩೬ | ೨೨೪೯ | ೨೩೬೪ |

*ಆಧಾರ : ಕಂದಾಯ ಇಲಾಖೆ, ಉಡುಪಿ.*

## ಕೋಷ್ಟಕ. ೯.೧೯ : ರಾಜ್ಯ ಅಬಕಾರಿ ಜಿಲ್ಲೆಯಲ್ಲಿ ಸಂಗ್ರಹವಾದ ಅಬಕಾರಿ ತೆರಿಗೆ ವಿವರ

| ವಿವರ | ೨೦೦೧-೨೦೦೨ | ೨೦೦೨-೨೦೦೩ | ೨೦೦೩-೨೦೦೪ | ೨೦೦೪-೨೦೦೫ | ೨೦೦೫-೨೦೦೬ |
|---|---|---|---|---|---|
| ಸಾರಾಯಿ | ೭೩೭೩೩೮೫೫ | ೭೦೨೬೬೦೦೦ | ೭೧೯೮೦೫೦೦ | ೨೭೨೭೮೦೫೮ | ೦ |
| ಸಾರಾಯಿ ಅಂಗಡಿ ಬಾಡಿಗೆ | ೨೬೧೮೦೩೯೬ | ೨೪೭೨೩೮೨೭ | ೨೬೦೨೨೭೨೦೦ | ೩೫೪೨೮೭೬೮೨ | ೪೭೮೯<br>೭೦೦೦ |
| ಸೇಂದಿ | ೨೨೯೫೨೮ | ೨೦೩೬೭೦೦ | ೧೮೨೧೦೦ | ೧೮೮೪೦೦ | ೧೯೯೧೦೦ |

***ಮುಂದುವರಿದಿದೆ...***

| ವಿವರ | ೨೦೦೧-೨೦೦೨ | ೨೦೦೨-೨೦೦೩ | ೨೦೦೩-೨೦೦೪ | ೨೦೦೪-೨೦೦೫ | ೨೦೦೫-೨೦೦೬ |
|---|---|---|---|---|---|
| ಬೀರ್ ಶುಲ್ಕ | ೨೫೧೭೦೭೨೪ | ೩೦೫೩೪೩೬೪ | ೯೭೫೪೬೭೩೩ | ೧೦೮೪೯೬೪೧೩ | ೧೦೦೧೮೭೬೮೬ |
| ಹೆಚ್ಚುವರಿ ಅಬಕಾರಿ ಶುಲ್ಕ | ೫೯೯೩೦೨೪ | ೭೮೧೫೩೯೩೫ | ೧೧೯೬೧೭೧೮೪ | ೧೨೨೦೫೮೫೮೭ | ೧೧೩೨೪೩೯೩೬ |
| ವಿದೇಶಿ ಮಧ್ಯ ಶುಲ್ಕ | ೦ | ೦ | ೦ | ೦ | ೦ |
| ಭಾರತದಲ್ಲಿ ತಯಾರಾಗುವ ವಿದೇಶಿ ಮಧ್ಯಗಳ ತೆರಿಗೆ | ೭೮೦೫೬೯೦೦ | ೬೭೮೪೪೧೫೦ | ೩೩೭೧೬೭೦೦ | ೫೨೮೦೧೯೫೦ | ೪೬೪೨೧೨೩೦ |
| ಸಂಸ್ಕೃರಿತ ಸ್ಪಿರಿಟ್ | ೦ | ೦ | ೦ | ೦ | ೦ |
| ಸಂಸ್ಕೃರಿಸದ ಸ್ಪಿರಿಟ್ | ೦ | ೦ | ೦ | ೦ | ೦ |
| ಸೇವೆ ಮತ್ತು ಸೇವಾ ಶುಲ್ಕ | ೧೦೫೭೫೨೪ | ೬೬೫೩೬೨ | ೫೮೩೩೪೦ | ೨೭೭೧೯೭ | ೪೦೧೧೧೯ |
| ದಂಡ ಮತ್ತು ಮುಟ್ಟುಗೋಲು | ೧೪೭೦೭೪೨೭ | ೨೨೫೧೧೧೧೧ | ೮೬೭೩೯೨೯ | ೧೬೩೦೭೦೦ | ೨೨೩೯೧೧೮ |
| ತೆರಿಗೆ ಬಾಕಿ ಮೇಲಿನ ಬಡ್ಡಿ | ೦ | ೦ | ೦ | ೦ | ೦ |
| ಇತರೆ ಆದಾಯ | ೩೧೫೯೮೨೫೭ | ೪೬೧೨೪೯೩೬ | ೨೩೭೨೦೦೬೯ | ೧೭೬೬೨೧೯೪ | ೧೬೧೪೮೮೨೯ |
| ಒಟ್ಟು ಸಂಗ್ರಹ | ೫೪೬೩೫೦೯೩೫ | ೫೬೩೫೪೧೭೩೦ | ೬೧೬೨೪೭೭೫೫ | ೬೮೪೬೮೧೧೮೧ | ೭೫೭೭೩೮೦೧೮ |

*ಆಧಾರ : ಕೇಂದ್ರ ಅಬಕಾರಿ ಇಲಾಖೆ, ಉಡುಪಿ*

## ಕೋಷ್ಟಕ. ೯.೨೦ : ಉಡುಪಿ ಜಿಲ್ಲೆಯ ಅಬಕಾರಿ ಹೊರಘಟಕಗಳ ವಿವರಗಳು

| ತಾಲೂಕು | ೨೦೦೩-೨೦೦೪ | | ೨೦೦೪-೨೦೦೫ | | ೨೦೦೫-೨೦೦೬ | |
|---|---|---|---|---|---|---|
| | ಸಾರಾಯಿ ಅಂಗಡಿ | ಸೇಂದಿ ಅಂಗಡಿ | ಸಾರಾಯಿ ಅಂಗಡಿ | ಸೇಂದಿ ಅಂಗಡಿ | ಸಾರಾಯಿ ಅಂಗಡಿ | ಸೇಂದಿ ಅಂಗಡಿ |
| ಉಡುಪಿ | ೧೭೬ | ೫೮ | ೧೭೬ | ೫೬ | ೧೭೬ | ೭೫ |
| ಕುಂದಾಪುರ | ೧೨೬ | ೬೧ | ೧೨೬ | ೬೧ | ೧೨೬ | ೬೦ |
| ಕಾರ್ಕಳ | ೬೮ | ೫೩ | ೬೮ | ೫೪ | ೬೮ | ೫೫ |
| ಒಟ್ಟು | ೩೭೦ | ೧೭೨ | ೩೭೦ | ೧೭೧ | ೩೭೦ | ೧೯೦ |

*ಆಧಾರ : ಕೇಂದ್ರ ಅಬಕಾರಿ ಇಲಾಖೆ, ಉಡುಪಿ*

## ಕೋಷ್ಟಕ. ೯.೨೧ : ಮುದ್ರಾಂಕ ಮತ್ತು ನೋಂದಣಿ ಇಲಾಖೆಯಿಂದ ಜಿಲ್ಲೆಯಲ್ಲಿ ಸಂಗ್ರಹವಾದ ತೆರಿಗೆ ವಿವರ

| ಉಪ ನೋಂದಣಾಧಿಕಾರಿ ಕಛೇರಿ | ೨೦೦೩-೨೦೦೪ | | | | ೨೦೦೪-೨೦೦೫ | | | |
|---|---|---|---|---|---|---|---|---|
| | ನೋಂದಣಿ ಸಲ್ಪಟ್ಟ ದಾಖಲೆಗಳ ಸಂಖ್ಯೆ | ನೋಂದಣಿ ಯಾದ ದಾಖಲೆಗಳ ಒಟ್ಟು ಮೌಲ್ಯ | ನೋಂದಣಿ ಶುಲ್ಕ | ಒಟ್ಟು ವೆಚ್ಚ | ನೋಂದಣಿ ಸಲ್ಪಟ್ಟ ದಾಖಲೆಗಳ ಸಂಖ್ಯೆ | ನೋಂದಣಿಯಾದ ದಾಖಲೆಗಳ ಒಟ್ಟು ಮೌಲ್ಯ | ನೋಂದಣಿ ಶುಲ್ಕ | ಒಟ್ಟು ವೆಚ್ಚ |
| ಉಡುಪಿ | ೪೪೮೦ | ೬೫೩೮೨೬೦೯೪ | ೫೮೮೩೭೪೭೬ | ೬೨೧೬೭೩ | ೫೨೭೫ | ೯೩೫೮೫೨೯೮೬ | ೮೪೮೮೮೪೯೦೩ | ೫೬೮೫೫೨ |
| ಬ್ರಹ್ಮಾವರ | ೨೧೭೪ | ೧೩೩೫೦೫೫೨೬ | ೧೩೦೭೭೫೦೯ | ೪೧೬೨೯೯ | ೨೦೮೯ | ೧೮೬೩೧೪೮೭೯ | ೧೪೧೫೨೧೨೩ | ೪೩೬೦೪೭ |
| ಕುಂದಾಪುರ | ೨೪೦೩ | ೧೩೨೨೪೦೪೦೫ | ೯೪೬೦೫೯೪ | ೪೨೯೪೫೪ | ೨೫೬೬ | ೧೬೦೯೩೦೯೮೪ | ೧೬೦೩೬೭೩೬ | ೪೫೫೭೪೨ |
| ಬೈಂದೂರು | ೧೮೯೦ | ೭೩೨೨೧೩೦೦ | ೬೯೧೫೯೨೦ | ೩೨೪೯೫೨ | ೨೦೪೭ | ೧೧೪೦೪೪೯೫೮ | ೧೧೩೧೭೯೮೧ | ೪೧೧೬೩೯ |
| ಕಾರ್ಕಳ | ೨೬೪೪ | ೧೧೬೩೮೫೨೪೬ | ೧೧೮೨೨೩೬೬ | ೨೬೧೫೨೫ | ೧೮೫೨ | ೧೩೫೦೪೭೭೫೪ | ೧೩೯೫೪೩೨೬ | ೩೧೮೩೩೩ |
| ಒಟ್ಟು | ೧೩೫೯೧ | ೧೧೦೯೧೭೮೫೭೧ | ೧೦೦೧೧೩೮೬೫ | ೨೦೫೩೯೦೩ | ೧೩೮೨೯ | ೧೫೩೨೧೯೧೫೬೧ | ೯೦೪೩೪೬೦೬೯ | ೨೧೯೦೩೧೩ |

*ಆಧಾರ : ರಾಜ್ಯ ಮುದ್ರಾಂಕ ಮತ್ತು ನೋಂದಣಿ ಇಲಾಖೆ, ಉಡುಪಿ*

* * * * * *